ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 5 ಭಾನುವಾರ 2023

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 288 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



ಸಂಚಾರ ನಿಯಮ ಉಲ್ಲಂಘನೆ ದಂಡದ ಬಾಕಿ ಪಾವತಿಗೆ ಶೇ.50 ರಿಯಾಯ್ತಿ, ಮೈಸೂರಲ್ಲಿ ಎರಡೇ ದಿನದಲ್ಲಿ

ಅರ್ಧ ಕೋಟಿ ದಂಡ ಸಂಗ್ರಹ

ಮೈಸೂರು, ಫೆ.4(ಎಸ್‌ಬಿಡಿ)– ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ದಂಡದ ಬಾಕಿ ಪಾವತಿಗೆ ಶೇ.50ರಷ್ಟು ರಿಯಾಯ್ತಿ ನೀಡಿದ 2 ದಿನಗಳಲ್ಲೇ ಮೈಸೂರು ನಗರದಲ್ಲಿ 50 ಲಕ್ಷಕ್ಕೂ ಹೆಚ್ಚು ದಂಡ ಸಂಗ್ರಹವಾಗಿದೆ. ಪಾನಮತ್ತ ಚಾಲನೆ ಹೊರತುಪಡಿಸಿ ಉಳಿದೆಲ್ಲಾ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ದಂಡ ಬಾಕಿ ಪಾವತಿಗೆ ಅನಿರೀಕ್ಷಿತ ಭರ್ಜರಿ ರಿಯಾಯ್ತಿ ನೀಡಿ ಆದೇಶಿಸುತ್ತಿದ್ದಂತೆ ನಿನ್ನೆ(ಫೆ.3) ಹಾಗೂ ಇಂದು ಒಟ್ಟು 23576 ಪ್ರಕರಣಗಳ ವಿಲೇವಾರಿಯೊಂದಿಗೆ 50,23,950 ರೂ. ದಂಡ ಸಂಗ್ರಹವಾಗಿದೆ ಎಂದು ನಗರ ಸಂಚಾರ ವಿಭಾಗದ ಎಸಿಪಿ ಹೆಚ್.ಪರಶುರಾಮಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

23576 ಪ್ರಕರಣಗಳ ಇತ್ಯರ್ಥ; ಜನರಿಂದ ಉತ್ತಮ ಸ್ಪಂದನೆ

ಒಂದೇ ದಿನ 46.56 ಲಕ್ಷ: ಶನಿವಾರ ಒಂದೇ ದಿನ 21,842 ಪ್ರಕರಣಗಳಲ್ಲಿ 46,56,800 ರೂ. ದಂಡ ಸಂಗ್ರಹವಾಗಿದೆ. ಇದರಲ್ಲಿ ದೇವರಾಜ ಸಂಚಾರ ಠಾಣೆಯಲ್ಲಿ 1,26,250 ರೂ.(580 ಪ್ರಕರಣ), ಕೃಷ್ಣರಾಜ ಸಂಚಾರ ಠಾಣೆಯಲ್ಲಿ 3.77 ಲಕ್ಷ (1973 ಪ್ರ.), ನರಸಿಂಹರಾಜ ಸಂಚಾರ ಠಾಣೆ 5,56,850 ರೂ.(2811 ಪ್ರ.), ಸಿದ್ಧಾರ್ಥ ಠಾಣೆಯಲ್ಲಿ 2,85,600 ರೂ.(1339ಪ್ರ), ವಿವಿಪುರಂ ಸಂಚಾರ ಠಾಣೆಯಲ್ಲಿ 3,23,800 ರೂ.(1539 ಪ್ರ), ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸೆಂಟರ್(ಟಿಎಂಸಿ)ನಲ್ಲಿ 1.02 ಲಕ್ಷ ರೂ.(479 ಪ್ರ), ಹ್ಯಾಂಡ್ ಹೆಲ್ಡ್ ಡಿವೈಸ್ ಮೂಲಕ 26,21,950 ರೂ.(12 ಸಾವಿರ ಪ್ರ.) ಹಾಗೂ ಕರ್ನಾಟಕ ಒನ್ ಆಪ್ ಮೂಲಕ 2,63,350 ರೂ.(1121 ಪ್ರಕ.) ದಂಡ ಪಾವತಿಯಾಗಿದೆ.

ನಿನ್ನೆ(ಫೆ.3) ದೇವರಾಜ ಸಂಚಾರ ಠಾಣೆಯ 85 ಪ್ರಕರಣಗಳಲ್ಲಿ 15,150 ರೂ., ಕೃಷ್ಣರಾಜ ಸಂಚಾರ ಠಾಣೆಯ 59 ಪ್ರಕರಣಗಳಲ್ಲಿ 13,200 ರೂ., ನರಸಿಂಹರಾಜ ಸಂಚಾರ ಠಾಣೆಯ 124 ಪ್ರಕರಣಗಳಲ್ಲಿ 21,850 ರೂ., ಸಿದ್ಧಾರ್ಥ ಠಾಣೆಯ 27 ಪ್ರಕರಣಗಳಲ್ಲಿ 8,150 ರೂ., ವಿವಿ ಪುರಂ ಸಂಚಾರ ಠಾಣೆಯ 16 ಪ್ರಕರಣಗಳಲ್ಲಿ 11,100 ರೂ. ಸಂಗ್ರಹವಾಗಿತ್ತು. ಅಲ್ಲದೆ ತಪಾಸಣೆ ನಡೆಸುತ್ತಿದ್ದ ಪೊಲೀಸ್ ಅಧಿಕಾರಿಗಳು ಹ್ಯಾಂಡ್ ಹೆಲ್ಡ್ ಡಿವೈಸ್ ಮೂಲಕ 1075 ಪ್ರಕರಣಗಳಲ್ಲಿ 2,06,300 ರೂ. ಸಂಗ್ರಹಿಸಿದ್ದು, ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸೆಂಟರ್‌ನಲ್ಲಿ ಒಂದು ಪ್ರಕರಣದಲ್ಲಿ 250 ರೂ. ಹಾಗೂ ಕರ್ನಾಟಕ ಒನ್ ಆಪ್ ಮೂಲಕ 347 ಪ್ರಕರಣಗಳಲ್ಲಿ 91,150 ರೂ. ಸೇರಿ ಒಟ್ಟು 1,734 ಪ್ರಕರಣಗಳ ಇತ್ಯರ್ಥದಿಂದ ಶುಕ್ರವಾರ 3,67,150 ರೂ. ದಂಡ ಸಂಗ್ರಹವಾಗಿದೆ.

ಫೆ.11ರವರೆಗೆ ಮಾತ್ರ ಅವಕಾಶ: ಲೋಕ್ ಅದಾಲತ್ ಹಿನ್ನೆಲೆಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ಬಾಕಿ ದಂಡದ ಮೊತ್ತದಲ್ಲಿ ಶೇ.50ರಷ್ಟು ರಿಯಾಯ್ತಿ ನೀಡಬೇಕೆಂಬ ಅಭಿಪ್ರಾಯ ಹೈಕೋರ್ಟ್ ನ್ಯಾಯಾಧೀಶರೂ ಆದ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಬಿ.ವೀರಪ್ಪನವರ ಅಧ್ಯಕ್ಷತೆಯ ಸಭೆಯಲ್ಲಿ ವ್ಯಕ್ತವಾಗಿದ್ದ ಹಿನ್ನೆಲೆಯಲ್ಲಿ ಈ ಸಂಬಂಧ ಸಾರಿಗೆ ಇಲಾಖೆ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಅದನ್ನು ಪುರಸ್ಕರಿಸಿದ ಸರ್ಕಾರ ಒಂದು ಬಾರಿಗೆ ಅನ್ವಯವಾಗುವಂತೆ ಫೆ.11ರೊಳಗೆ ಇತ್ಯರ್ಥಗೊಳ್ಳುವ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50ರಷ್ಟು ರಿಯಾಯ್ತಿ ನೀಡಿ ಫೆ.2ರಂದು ಆದೇಶಿಸಿದೆ. ಆಯಾ ವ್ಯಾಪ್ತಿಯ ಸಂಚಾರ ಪೊಲೀಸ್ ಠಾಣೆ, ಪೊಲೀಸ್ ಆಯುಕ್ತರ ಕಚೇರಿಯ ಸಂಚಾರ ನಿರ್ವಹಣೆ ಕೇಂದ್ರ, ಕರ್ನಾಟಕ ಒನ್ ಕೇಂದ್ರ ಅಥವಾ ಆಪ್ ಹಾಗೂ ಪೊಲೀಸ್ ಅಧಿಕಾರಿಗಳ ಹ್ಯಾಂಡ್ ಹೆಲ್ಡ್ ಡಿವೈಸರ್ ಮೂಲಕವೂ ಬಾಕಿ ದಂಡ ಪಾವತಿಸಿ, ರಶೀದಿ ಪಡೆಯುವ ಮೂಲಕ ಸಂಚಾರ ಉಲ್ಲಂಘನೆ ಪ್ರಕರಣದಿಂದ ಮುಕ್ತರಾಗಬಹುದು.

ಶಾಸಕ ನಾಗೇಂದ್ರರೂ ದಂಡದ ರಿಯಾಯ್ತಿ ಫಲಾನುಭವಿ

ಮೈಸೂರು, ಫೆ.4(ಎಸ್‌ಬಿಡಿ)– ಸ್ವಯಂಪ್ರೇರಣೆಯಿಂದ ತಮ್ಮ ವಾಹನವನ್ನು ಪೊಲೀಸರ ತಪಾಸಣೆಗೊಳಪಡಿಸಿ ದಂಡದ ಬಾಕಿಯನ್ನು ಪಾವತಿಸುವ ಮೂಲಕ ಶಾಸಕ ಎಲ್.ನಾಗೇಂದ್ರ ಮಾದರಿಯಾಗಿದ್ದಾರೆ.



ನಗರದ ಮೆಟ್ರೋಪೋಲ್ ವೃತ್ತದಲ್ಲಿ ಶನಿವಾರ ದೇವರಾಜ ಸಂಚಾರ ಠಾಣೆ ಪೊಲೀಸರು ವಾಹನ ತಪಾಸಣೆ ನಡೆಸುತ್ತಿದ್ದರು. ಈ ವೇಳೆ ಆ ಮಾರ್ಗದಲ್ಲೇ ಸಂಚರಿಸುತ್ತಿದ್ದ ಶಾಸಕ ಎಲ್.ನಾಗೇಂದ್ರ, ತಮ್ಮ ಇನ್ನೋವಾ ಕಾರನ್ನು(ಕೆಎ–09, ಜೆಡ್–7999) ಪೊಲೀಸರ ಬಳಿಯಿದ್ದ ಹ್ಯಾಂಡ್ ಹೆಲ್ಡ್ ಡಿವೈಸರ್ ಮೂಲಕ ಪರಿಶೀಲನೆ ಮಾಡಿಸಿದರು. ಅದರಲ್ಲಿ ವೇಗದ ಚಾಲನೆಯೊಂದಿಗೆ ಸಂಚಾರ ನಿಯಮ ಉಲ್ಲಂಘಿಸಿರುವ ಪ್ರಕರಣಗಳು ದಾಖಲಾಗಿದ್ದವು. ಕೂಡಲೇ ಶಾಸಕರು ಶೇ.50ರ ರಿಯಾಯ್ತಿಯಡಿ 3,500 ರೂ. ದಂಡ ಪಾವತಿಸಿ, ರಶೀದಿ ಪಡೆದರು. ಈ ವೇಳೆ ದೇವರಾಜ ಸಂಚಾರ ಠಾಣೆ ಪೊಲೀಸ್ ಉಪ ನಿರೀಕ್ಷಕಿ ಬಂಡಿ ಹಾಗೂ ಸಿಬ್ಬಂದಿ ಹಾಜರಿದ್ದರು. ವಾಹನ ದಟ್ಟಣೆ ಅನುಸಾರ ರಸ್ತೆಗಳಲ್ಲಿ ವೇಗದ ಮಿತಿ ನಿಗದಿಪಡಿಸಲಾಗಿರುತ್ತದೆ. ಆದರೆ ಕೆಲ ತುರ್ತು ಸಂದರ್ಭಗಳಲ್ಲಿ ವೇಗವಾಗಿ ವಾಹನ ಚಾಲಿಸಿರುತ್ತಾರೆ. ಆದರೂ ಕಾನೂನು, ನಿಯಮ ಪಾಲನೆ ಕೇವಲ ಸಾಮಾನ್ಯರಿಗಷ್ಟೇ ಹೊರತು ಜನಪ್ರತಿನಿಧಿಗಳು ಹಾಗೂ ಪ್ರಭಾವಿಗಳಿಗೆ ಅನ್ವಯವಾಗುವುದಿಲ್ಲ ಎನ್ನುವುದಕ್ಕೆ ಶಾಸಕ ನಾಗೇಂದ್ರ ಅಪವಾದವೆನಿಸಿದ್ದಾರೆ. ಆದರೆ ಇದು ಒಂದು ದಿನಕ್ಕೆ ಸೀಮಿತವಾಗಬಾರದು. ಎಲ್ಲಾ ಜನಪ್ರತಿನಿಧಿಗಳೂ ಸಂಚಾರ ನಿಯಮ ಪಾಲಿಸಬೇಕು. ಕೆಲವೊಮ್ಮೆ ಉಲ್ಲಂಘನೆಯಾದರೆ ನಿಯಮಾನುಸಾರ ದಂಡ ಪಾವತಿಸುವ ಮೂಲಕ ಸಾಮಾನ್ಯರಿಗೆ ಮಾದರಿಯಾಗಬೇಕು ಎಂಬುದು ಸಾರ್ವಜನಿಕರ ಮನವಿ.

ಜೆಡಿಎಸ್ ಯುವ ನಾಯಕರಾದ ನಿಖಿಲ್ ಕುಮಾರಸ್ವಾಮಿ, ಜಿ.ಡಿ.ಹರೀಶ್‌ಗೌಡರ ಹುಟ್ಟುಹಬ್ಬ: ಇಂದು ಅದ್ಧೂರಿ ಆಚರಣೆ

● ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯಕರ್ತರು, ಅಭಿಮಾನಿಗಳಿಂದ ಜಯಪುರ ಬಳಿ ಭಾರೀ ಕಾರ್ಯಕ್ರಮ ● 50 ಸಾವಿರಕ್ಕೂ ಅಧಿಕ ಜನರ ಸಮ್ಮುಖದಲ್ಲಿ ಯುವ ನಾಯಕರಿಗೆ ಶುಭಾಶಯ ● ಇದಕ್ಕೂ ಮುನ್ನ ಹಿನಕಲ್‌ನಿಂದ ದಾರಿಪುರದವರೆಗೆ ಭಾರೀ ಬೈಕ್ ರ್‍ಯಾಲಿ

ಮೈಸೂರು, ಫೆ.4(ಎಂಕೆ)– ಜೆಡಿಎಸ್‌ನ ಇಬ್ಬರು ಯುವನಾಯಕರ ಹುಟ್ಟುಹಬ್ಬದ ಸಂಭ್ರಮಕ್ಕೆ ನಾಳೆ (ಫೆ.5) ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ಸಾಕ್ಷಿಯಾಗಲಿದೆ. ಯುವ ಜನತಾದಳದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹಾಗೂ ರಾಜ್ಯ ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷರೂ ಆದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅವರ ಹುಟ್ಟುಹಬ್ಬವನ್ನು ಸುಮಾರು 50 ಸಾವಿರಕ್ಕೂ ಹೆಚ್ಚು ಜೆಡಿಎಸ್ ಕಾರ್ಯಕರ್ತರು, ಅಭಿಮಾನಿಗಳ ಸಮ್ಮುಖದಲ್ಲಿ ಸಡಗರ–ಸಂಭ್ರಮದಿಂದ ಆಚರಿಸಲು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಹೆಚ್.ಡಿ.ಕೋಟೆ ಮುಖ್ಯರಸ್ತೆಯಲ್ಲಿರುವ ದಾರಿಪುರದಲ್ಲಿನ ಕೆಎಸ್‌ಆರ್‌ಟಿಸಿ ಬಡಾವಣೆಯಲ್ಲಿ ಬೃಹತ್ ವೇದಿಕೆ ಸಿದ್ಧವಾಗಿದೆ. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರೂ ಆದ ಮಾಜಿ ಸಚಿವ ಜಿ.ಟಿ.ದೇವೇಗೌಡರ ಅಧ್ಯಕ್ಷತೆಯಲ್ಲಿ ಹುಟ್ಟುಹಬ್ಬದ ಸಂಭ್ರಮಾಚರಣೆ ನಡೆಯಲಿದ್ದು, ಜೆಡಿಎಸ್‌ನ ಸ್ಥಳೀಯ ಶಾಸಕರು, ಮುಖಂಡರು, ಕಾರ್ಯಕರ್ತರು ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು ಭಾಗವಹಿಸಲಿದ್ದಾರೆ.

ಬೃಹತ್ ಬೈಕ್ ರ್‍ಯಾಲಿ: ಮೈಸೂರಿನ ಎರಡು ಕಡೆಗಳಿಂದ ಬೃಹತ್ ಬೈಕ್ ರ್‍ಯಾಲಿ ನಡೆಸುವ ಮೂಲಕ ಯುವ ನಾಯಕರನ್ನು ವೇದಿಕೆಗೆ ಕರೆತರಲಾಗುವುದು. ಮಧ್ಯಾಹ್ನ 1 ಗಂಟೆಗೆ ಹಿನಕಲ್‌ನಿಂದ ಬೈಕ್ ರ್‍ಯಾಲಿ ಆರಂಭವಾಗಲಿದ್ದು, ರಿಂಗ್ ರಸ್ತೆ ಮೂಲಕ 2 ಗಂಟೆಗೆ ಬೋಗಾದಿ, 3 ಗಂಟೆಗೆ ಶ್ರೀರಾಂಪುರದ ಮಾರ್ಗವಾಗಿ ಬೈಕ್ ರ್‍ಯಾಲಿ ಸಾಗಲಿದ್ದು, ಸಂಜೆ 4 ಗಂಟೆಗೆ ದಾರಿಪುರ ತಲುಪಲಿದೆ. ಹಾಗೆಯೇ ಮತ್ತೊಂದೆಡೆ ಬನ್ನೂರು ಮುಖ್ಯ ರಸ್ತೆಯಲ್ಲಿರುವ ಹೆಚ್.ಡಿ.ದೇವೇಗೌಡ ವೃತ್ತದಿಂದಲೂ ಬೈಕ್ ರ್‍ಯಾಲಿ ಮೂಲಕ ಕಾರ್ಯಕರ್ತರು ದಾರಿಪುರದಲ್ಲಿ ಸೇರ್ಪಡೆಗೊಳ್ಳಲಿದ್ದಾರೆ.



ನಿಖಿಲ್ ಕುಮಾರಸ್ವಾಮಿ



ಜಿ.ಡಿ.ಹರೀಶ್‌ಗೌಡ

4 ಗಂಟೆಗೆ ಕೇಕ್ ಕಟ್ಟಿಂಗ್: ಬೈಕ್ ರ್‍ಯಾಲಿ ನಂತರ ಎಲ್ಲರ ಸಮ್ಮುಖದಲ್ಲಿ ಇಬ್ಬರು ಯುವನಾಯಕರು ಕೇಕ್ ಕತ್ತರಿಸಿ ಕಾರ್ಯಕರ್ತರು, ಅಭಿಮಾನಿಗಳನುದ್ದೇಶಿಸಿ ಮಾತನಾಡಲಿದ್ದಾರೆ. ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲರಿಗೂ ಉಪಾಹಾರ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಮಧ್ಯಾಹ್ನ 12ರಿಂದಲೇ ವೇದಿಕೆಯಲ್ಲಿ ಸರಿಗಮಪ ಖ್ಯಾತಿಯ ಹಾಗೂ ಮಜಾಭಾರತ ಖ್ಯಾತಿಯ ಕಲಾವಿದರಿಂದ ಹಾಡು ಮತ್ತು ಹಾಸ್ಯ ಮನರಂಜನಾ ಕಾರ್ಯಕ್ರಮಗಳು ನಡೆಯಲಿವೆ.

ಶಕ್ತಿ ಪ್ರದರ್ಶನವಲ್ಲ... ಸವಾಲು ಸ್ವೀಕರಿಸಿದ್ದೇನೆ...

ಜೆಡಿಎಸ್‌ನ ಇಬ್ಬರು ಯುವನಾಯಕರ ಹುಟ್ಟುಹಬ್ಬ ಆಚರಣೆಯೇ ಹೊರತು ಶಕ್ತಿ ಪ್ರದರ್ಶನವಲ್ಲ. ಆದರೆ ಜಿ.ಟಿ.ದೇವೇಗೌಡರು ಮುಂದಿನ ಚುನಾವಣೆಯಲ್ಲಿ ಠೇವಣಿ ಕಳೆದುಕೊಳ್ಳುವಂತೆ ಮಾಡುತ್ತೇವೆ ಎಂದಿರುವವರ ಸವಾಲನ್ನು ಸ್ವೀಕರಿಸಿದ್ದೇನೆ ಎಂದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.



ಹುಟ್ಟುಹಬ್ಬ ಕಾರ್ಯಕ್ರಮ ಹಿನ್ನೆಲೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯಕರ್ತರು, ಅಭಿಮಾನಿಗಳೇ ಹುಟ್ಟುಹಬ್ಬ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ. ಈ ಕಾರ್ಯಕ್ರಮ ಹುಟ್ಟುಹಬ್ಬಕ್ಕೆ ಸೀಮಿತವೇ ಹೊರತು ನನ್ನ ಶಕ್ತಿ ಪ್ರದರ್ಶನವಲ್ಲ. ಕ್ಷೇತ್ರದ ಜನತೆಯ ಸಂಪೂರ್ಣ ಬೆಂಬಲವಿರುವಾಗ ಶಕ್ತಿ ಪ್ರದರ್ಶನ ಮಾಡುವ ಅಗತ್ಯವೂ ನನಗಿಲ್ಲ ಎಂದರು.

ಹುಟ್ಟುಹಬ್ಬದ ಕಾರ್ಯಕ್ರಮಕ್ಕೆ ಬಸ್‌ಗಳು ಹಾಗೂ ಕಾರಿನಲ್ಲಿ ಬರುವವರು ಬೈಕ್ ರ್‍ಯಾಲಿಗೂ ಮುನ್ನವೇ ದಾರಿಪುರ ತಲುಪಿರಬೇಕು. ಯಾವುದೇ ಅಹಿತಕರ ಘಟನೆಗೆ ಅವಕಾಶ ಮಾಡಿಕೊಡದಂತೆ ತಾಳ್ಮೆ, ಶಾಂತಿಯಿಂದ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಮೈಸೂರು ಜಿಲ್ಲೆಯ 11 ಕ್ಷೇತ್ರ ಗೆಲ್ಲುವುದು ಕಾಂಗ್ರೆಸ್ ಕಾರ್ಯಕರ್ತರ ಗುರಿಯಾಗಿರಲಿ

ಸಂಸದರೂ ಆದ ಎಐಸಿಸಿ ವೀಕ್ಷಕ ಎಂ.ಕೆ.ರಾಘವನ್ ಕಿವಿಮಾತು

ಮೈಸೂರು, ಫೆ.4(ಎಂಕೆ)–ಬೂತ್ ಮಟ್ಟದಲ್ಲಿ ಪಕ್ಷ ಸಂಘಟನೆ ಮಾಡುವ ಮೂಲಕ ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಿಸುವುದೇ ಎಲ್ಲರ ಗುರಿಯಾಗಬೇಕು ಎಂದು ಸಂಸದ ಹಾಗೂ ಎಐಸಿಸಿ ವೀಕ್ಷಕ ಎಂ.ಕೆ.ರಾಘವನ್ ಹೇಳಿದರು.



ನಗರದ ಕಾಂಗ್ರೆಸ್ ಭವನದಲ್ಲಿ ಮೈಸೂರು ಜಿಲ್ಲಾ ಗ್ರಾಮಾಂತರ ಭಾಗದ ಜನಪ್ರತಿನಿಧಿಗಳು ಹಾಗೂ ಪದಾಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಬೇಕಾದರೆ ಕಾಂಗ್ರೆಸ್ ಸಾಧನೆಗಳ ಜೊತೆಗೆ ಬಿಜೆಪಿ ದುರಾಡಳಿತವನ್ನು ಮನೆ ಮನೆಗೆ ತಿಳಿಸಬೇಕು ಎಂದು ಕರೆ ನೀಡಿದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಡಳಿತಾವಧಿಯಲ್ಲಿ ನೀಡಿದ ಉತ್ತಮ ಆಡಳಿತ ಮತ್ತು ಜನಪ್ರಿಯ ಕಾರ್ಯಕ್ರಮಗಳ ಬಗ್ಗೆ ಜನರಲ್ಲಿ ಮನವರಿಕೆ ಮಾಡಿಕೊಡಬೇಕು. ದೇಶದಲ್ಲೀಗ ಆರ್ಥಿಕ, ಸಾಮಾಜಿಕ ಬಿಕ್ಕಟ್ಟು ಎದುರಾಗಿದೆ. ಕೋಮುವಾದ, ನಿರುದ್ಯೋಗ ಸಮಸ್ಯೆ ಹೆಚ್ಚಾಗಿದ್ದು, ಜನರ ಹಿತಕಾಯಬೇಕಾದರೆ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಬೇಕು. ಮುಖಂಡರು ಒಟ್ಟಾಗಿ ಪಕ್ಷ ಗೆಲ್ಲಿಸಬೇಕು. ಬೂತ್ ಮಟ್ಟದಲ್ಲಿ ಪಕ್ಷ ಸಂಘಟನೆ ಮಾಡುವ ಜೊತೆಗೆ ದಲಿತರು, ಹಿಂದುಳಿದ ವರ್ಗಗಳ ಮತದಾರರನ್ನು ಸೆಳೆಯಬೇಕು ಎಂದು ಸಲಹೆ ನೀಡಿದರು.

ಚಾಮುಂಡೇಶ್ವರಿಯಲ್ಲಿ ಕಾಂಗ್ರೆಸ್ ಒಲವು: ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ ಮಾತನಾಡಿ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಶೇ.59ರಷ್ಟು ಮತದಾರರು ಕಾಂಗ್ರೆಸ್ ಪರ ಒಲವು ವ್ಯಕ್ತಪಡಿಸಿರುವುದು ಆಂತರಿಕ ಸಮೀಕ್ಷೆಯಿಂದ ತಿಳಿದುಬಂದಿದೆ. ಕ್ಷೇತ್ರದಲ್ಲಿ 11 ಮಂದಿ ಟಿಕೆಟ್ ಆಕಾಂಕ್ಷಿಗಳಿದ್ದು, ಅಂತಿಮವಾಗಿ ಟಿಕೆಟ್ ಯಾರಿಗೆ ದೊರೆತರು, ಉಳಿದ ಎಲ್ಲಾ ಆಕಾಂಕ್ಷಿಗಳು ಅಭ್ಯರ್ಥಿ ಗೆಲುವಿಗಾಗಿ ಕೆಲಸ ಮಾಡಬೇಕು ಎಂದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ರಾಮಪ್ಪ, ಕೆ.ಆರ್.ನಗರ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ರವಿಶಂಕರ್, ಜಿಪಂ ಮಾಜಿ ಅಧ್ಯಕ್ಷರಾದ ಕೂರ್ಗಳ್ಳಿ ಮಹದೇವ, ಲತಾ ಸಿದ್ದಶೆಟ್ಟಿ, ಮಾಜಿ ಸದಸ್ಯರಾದ ಸುಧಾ ಮಹದೇವಯ್ಯ, ಯರಗನಹಳ್ಳಿ ಮಾದೇಗೌಡ, ಮುಖಂಡರಾದ ಬೀರಿಹುಂಡಿ ಬಸವಣ್ಣ, ಮಾವಿನಹಳ್ಳಿ ಸಿದ್ದೇಗೌಡ, ಕೆಂಪನಾಯಕ, ಆನಂದ, ಕೃಷ್ಣಕುಮಾರ್ ಸಾಗರ್, ಪ್ರಫುಲ್ ಕುಮಾರ್, ಬಾಬುನಾಯಕ, ದೊಡ್ಡನಾಯಕ ಇನ್ನಿತರಿದ್ದರು.

ಫೆ.15ರಿಂದ 'ಪ್ರಜಾಧ್ವನಿ' ಯಾತ್ರೆ...

ಕಾಂಗ್ರೆಸ್‌ನ 'ಪ್ರಜಾಧ್ವನಿ' ಯಾತ್ರೆ ಫೆ.15ರಿಂದ ಆರಂಭವಾಗಲಿದ್ದು, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಡಾ.ಜಿ.ಪರಮೇಶ್ವರ್, ಬಿ.ಕೆ.ಹರಿಪ್ರಸಾದ್ ಪಾಲ್ಗೊಳ್ಳಲಿದ್ದಾರೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮಾಹಿತಿ ನೀಡಿದರು. ಫೆ.15ರಂದು ಬೆಳಗ್ಗೆ ಹುಣಸೂರು, ಮಧ್ಯಾಹ್ನ ಹೆಚ್.ಡಿ.ಕೋಟೆ, 16ರಂದು ಬೆಳಿಗ್ಗೆ ಕೆ.ಆರ್.ನಗರ ಮಧ್ಯಾಹ್ನ 3ಕ್ಕೆ ಪಿರಿಯಾಪಟ್ಟಣದಲ್ಲಿ 'ಪ್ರಜಾಧ್ವನಿ' ಯಾತ್ರಾ ಸಮಾವೇಶ ನಡೆಯಲಿದೆ. –ಎಂ.ಕೆ.ರಾಘವನ್, ಸಂಸದ

ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ರಿಯಾಯಿತಿ ದರದ ಮಾರಾಟ ಇಂದು ಕೊನೆ

ಮೈಸೂರು, ಫೆ.4– ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಗುಣಮಟ್ಟದ ಬ್ರಾಂಡೆಡ್ ಬಟ್ಟೆಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಜ.27ರಂದು ಆರಂಭವಾದ ಈ ಮಾರಾಟ ಫೆ.5ರಂದು ಕೊನೆಗೊಳ್ಳಲಿದೆ.



ಮಹಿಳೆಯರ, ಪುರುಷರ ಹಾಗೂ ಮಕ್ಕಳ ರೆಡಿಮೇಡ್ ಗಾರ್ಮೆಂಟ್‌ಗಳು ಭಾರೀ ರಿಯಾಯಿತಿ ದರದಲ್ಲಿ ಮಾರಾಟವಾಗುತ್ತಿವೆ. 10000ಕ್ಕಿಂತ ಹೆಚ್ಚು ವಿವಿಧ ಜೆಂಟ್ಸ್, ಲೇಡಿಸ್ ಮತ್ತು ಕಿಡ್ಸ್ ಪ್ಯಾಂಟ್, ಟೀ–ಶರ್ಟ್, ಲೋವರ್, ಟಾಪ್, ಬರ್ಮುಡಾ, ಕ್ಯಾಪ್ರಿ, ಫ್ಲಾಜೋ, ಲೇಡಿಸ್ ಫೈಜಾಮಾ, ಕಿಡ್ಸ್ ಡ್ರೆಸ್, ಶರ್ಟ್, ಕುರ್ತೀಸ್, ನೈಟಿ ಕೇವಲ 150ರಿಂದ 350 ರೂ.ಗಳವರೆಗೆ ಲಭ್ಯವಿದೆ. ಬ್ರಾಂಡೆಡ್ ಕುರ್ತೀಸ್, ಎಕ್ಸಲೆಂಟ್ ಪಾರ್ಟಿವೇರ್ ಕುರ್ತೀಸ್, ಎಂಬ್ರಾಯಡರಿ ರಯಾನ್ ಕುರ್ತೀಸ್, ಪ್ರಿಂಟೆಡ್ ಕಾಟನ್ ಲಾಂಗ್ ಶರ್ಟ್ ಮತ್ತು ಶಾರ್ಟ್ ಕುರ್ತೀಸ್‌ಗಳು ಇವೆ. ಗರ್ಲ್ಸ್ ಅಂಡ್ ಲೇಡೀಸ್ ರೆಡಿಮೇಡ್ ಗಾರ್ಮೆಂಟ್ಸ್‌ಗಳು 150ರಿಂದ 250 ರೂ.ಗಳವರೆಗೆ, ಲೇಡೀಸ್ ಅಂಡ್ ಜೆಂಟ್ಸ್ ಅಂಡರ್ ಗಾರ್ಮೆಂಟ್‌ಗಳು 60–125ರೂ. ವರೆಗೆ ಲಭ್ಯವಿದೆ. ಬೆಳಗ್ಗೆ 10ರಿಂದ ರಾತ್ರಿ 10ರವರೆಗೆ ಮಾರಾಟವಿದೆ ಎಂದು ವ್ಯವಸ್ಥಾಪಕ ಗಜೇಂದ್ರ ತಿಳಿಸಿದ್ದಾರೆ.

ಹೇಮಾದ್ರಾಂಬಾ ಜಾತ್ರೆ: ಇಂದು ಮದ್ಯ ನಿಷೇಧ

ಮೈಸೂರು: ಬನ್ನೂರು ಪಟ್ಟಣದಲ್ಲಿ ಶ್ರೀ ಹೇಮಾದ್ರಾಂಬಾ ಜಾತ್ರಾ ಮಹೋತ್ಸವ ನಡೆಯಲಿದ್ದು, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಫೆ.4ರ ಮಧ್ಯರಾತ್ರಿ 12ರಿಂದ ಫೆ.5ರ ಮಧ್ಯರಾತ್ರಿ 12ರವರೆಗೆ ಬನ್ನೂರು ಟೌನ್, ಸುತ್ತಮುತ್ತಲಿನ 2 ಕಿಮೀ ವ್ಯಾಪ್ತಿಯಲ್ಲಿ ಮದ್ಯದ ಅಂಗಡಿ ಮುಚ್ಚುವಂತೆ ಡಿಸಿ ಆದೇಶಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸುವರ್ಣಪ್ರಾಶನ ಅಭಿಯಾನ, ಸ್ಥಳ: ಆಸ್ಪತ್ರೆ ಆವರಣ, ಬೆಳಗ್ಗೆ 8ರಿಂದ.

■ **ಎಸ್‌ಡಿಎಂ–ಎಂಎಂಕೆ ಮಹಿಳಾ ಮಹಾವಿದ್ಯಾಲಯ:** ಸುವರ್ಣಪ್ರಾಶನ ಅಭಿಯಾನ, ಸ್ಥಳ: ಮಹಾವಿದ್ಯಾಲಯ ಆವರಣ, ಬೆಳಗ್ಗೆ 8ರಿಂದ.

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ತ್ರಿಣೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಬೆಳಗ್ಗೆ 9.45ರಿಂದ ಲಗ್ನದಲ್ಲಿ ದಿವ್ಯರಥಾರೋಹಣ, ಸ್ಥಳ: ಶ್ರೀ ತ್ರಿಣೇಶ್ವರಸ್ವಾಮಿ ದೇವಸ್ಥಾನ, ಮೈಸೂರು ಅರಮನೆ ಆವರಣ.

■ **ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ:** ರಾಷ್ಟ್ರೀಯ ಏಕೀಕರಣ ಶಿಬಿರ, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ, ಬೆಳಗ್ಗೆ 9.30ಕ್ಕೆ ಶ್ರಮದಾನ, ಬೆಳಗ್ಗೆ 11.30ಕ್ಕೆ ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ವಿಜಯಕುಮಾರ್ ಅವರಿಂದ ಅಪೌಷ್ಟಿಕತೆ ಕುರಿತು ಉಪನ್ಯಾಸ, ಮಧ್ಯಾಹ್ನ 2ರಿಂದ ಸ್ವಾಮಿ ವೀರೇಶಾನಂದ ಸರಸ್ವತಿ ಮಹಾರಾಜ್ ಅವರಿಂದ ಯುವಕರು ಮತ್ತು ಸ್ವಾಮಿ ವಿವೇಕಾನಂದ ಕುರಿತು ಉಪನ್ಯಾಸ, ಸಂಜೆ 5.30ಕ್ಕೆ ಕ್ರೀಡೆ, 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಎನ್‌ಎಸ್‌ಎಸ್ ಭವನ, ಸರಸ್ವತಿಪುರಂ.

■ **ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಜೆ.ಪಿ.ನಗರ:** ಉಚಿತ ಕಣ್ಣಿನ ಪೊರೆ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಜೆ.ಪಿ. ನಗರ ಮತ್ತು ಹೂಟಗಳ್ಳಿ, ಬೆಳಗ್ಗೆ 11ರಿಂದ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸುಜ್ಞಾನ ವಿದ್ಯಾಪೀಠ ಮತ್ತು ಸಾಂಸ್ಕೃತಿಕ ಕಲಾವಿದರ ಸಾಧಕರ ಶ್ರೀ ಮಾತಾ ಪ್ರಕಾಶನ:** ರಾಜ್ಯಮಟ್ಟದ ಕವಿಗೋಷ್ಠಿ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ, ಬೆಳಗ್ಗೆ 10.30ಕ್ಕೆ ಎ. ಸೋಮನಾಥ ಮತ್ತು ರಕ್ಷಿತಾ ಹೊಳಗುಂದಿ ಅವರಿಂದ ಸಂಗೀತ ಕಾರ್ಯಕ್ರಮ, ಬೆಳಗ್ಗೆ 11ಕ್ಕೆ ಹರಿಪ್ರಿಯ ಅವರಿಂದ ಭರತನಾಟ್ಯ, ಬೆಳಗ್ಗೆ 11.30ಕ್ಕೆ ಗವಿಸಿದ್ದಯ್ಯ ಜೆ. ಹಳ್ಳಿಕೇರಿಮಠ ಅವರಿಂದ ಜಾನಪದ ಗೀತೆಗಳು, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ.

■ **ಶ್ರೀ ಅವಧೂತ ದತ್ತಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ವರ್ಷದ ಜನ್ಮದಿನೋತ್ಸವದ ಪ್ರಯುಕ್ತ ಮಾಘ ಪೂರ್ಣಿಮಾ. ಬೆಳಗ್ಗೆ 7 ಗಂಟೆಗೆ ಪವಮಾನ ಹೋಮ ಮತ್ತು ದತ್ತ ಹೋಮ ಹಾಗೂ ಕಾರ್ಯ ಸಿದ್ಧಿ ಹನುಮಂತನಿಗೆ ವಿಶೇಷ ಅರ್ಚನೆ, ಸಂಜೆ 6 ಶ್ರೀ ಸ್ವಾಮೀಜಿಯವರಿಗೆ ತೆಪ್ಪೋತ್ಸವ ಸ್ಥಳ: ಆಶ್ರಮದ ಆವರಣ, ಊಟಿ ರಸ್ತೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ:** ಮಧ್ವ–ಪುರಂದರ ನಮನ, ಸಂಜೆ 4.30 ರಿಂದ ಭಜನೆ, ಸಂಜೆ 5.30 ರಿಂದ ಪಂಡಿತ್ ಅನಿರುದ್ಧಾಚಾರ್ಯ ಪಾಂಡುರಂಗಿ ಅವರಿಂದ ವ್ಯಾಸಸಾಹಿತ್ಯಕ್ಕೆ ದಾಸರ ಕೊಡುಗೆ ಕುರಿತು ಪ್ರವಚನ, ಸಂಜೆ 6.30ರಿಂದ ಜಗನ್ನಾಥ ದಾಸರು ಚಲನಚಿತ್ರ ತಂಡದವರಿಂದ ಸಂವಾದ ಹಾಗೂ ಸಂಗೀತ ಕಾರ್ಯಕ್ರಮ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ.

■ **ಮೈಸೂರು ಇಂಗ್ಲಿಷ್ ಥಿಯೇಟರ್ ಫೋರಂ :** ಕಾಲೇಜು ಇಂಗ್ಲಿಷ್ ನಾಟಕೋತ್ಸವ, ಸಂಜೆ 5ಕ್ಕೆ ಸೇಂಟ್ ಫಿಲೋಮಿನಾ ಕಾಲೇಜು ವಿದ್ಯಾರ್ಥಿಗಳಿಂದ ಡಾಕ್ಟರ್ ಫಾಸ್ಟಸ್ ನಾಟಕ ಪ್ರದರ್ಶನ, ರಾತ್ರಿ 7ಕ್ಕೆ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳಿಂದ ರಿ ರಿಫಂಡ್ ನಾಟಕ ಪ್ರದರ್ಶನ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ.

■ **ಶ್ರೀ ಚಿಕ್ಕಲಿಂಗೇಶ್ವರಸ್ವಾಮಿ ದೇವಸ್ಥಾನ :** ಶ್ರೀ ಮದ್ರಾಜಯೋಗಿ ಶ್ರೀ ಶ್ರೀ ಚಿಕ್ಕಲಿಂಗಣ್ಣಸ್ವಾಮಿಗಳವರ 86ನೇ ವರ್ಷದ ಆರಾಧನಾ ಮಹೋತ್ಸವ, ಸಂಜೆ 5.30 ರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6.30 ರಿಂದ ಸದಾಶಿವ ಗುರೂಜಿ ಅವರಿಂದ ಗುರುಮಹಿಮೆ ಕುರಿತು ಕುರಿತು ಪ್ರವಚನ, ಸ್ಥಳ: ಶ್ರೀಚಿಕ್ಕಲಿಂಗೇಶ್ವರಸ್ವಾಮಿ ದೇವಸ್ಥಾನ, ಮಂಡಿ ಮೊಹಲ್ಲಾ.

■ **ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಧರ್ಮ ಸಂಸ್ಥೆ ಟ್ರಸ್ಟ್:** 76ನೇ ಜಾತ್ರೋತ್ಸವ, ಬೆಳಗ್ಗೆ ಶ್ರೀ ಗಣಪತಿ ನವಗ್ರಹ, ಶ್ರೀ ಪರಶುರಾಮ, ಪಂಚಾಮೃತಾಭಿಷೇಕ, ವಸ್ತ್ರಾಲಂಕಾರ, ಶ್ರೀ ಗಣಪತಿಗೆ ನವನೀತಲಂಕಾರ, ಅಷ್ಟೋತ್ತರ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಅನ್ನಸಂತರ್ಪಣೆ, ಸಂಜೆ 6ಕ್ಕೆ ಶ್ರೀ ದೇವಿ ಉತ್ಸವ, ರಾತ್ರಿ 8.30ಕ್ಕೆ ಉಯ್ಯಾಲೋತ್ಸವ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಧರ್ಮಸಂಸ್ಥೆ ಟ್ರಸ್ಟ್ ಆವರಣ, ಮಂಡಿ ಮೊಹಲ್ಲಾ.



ಇಂದಿನ ಪಂಚಾಂಗ

5.2.2023 ಭಾನುವಾರ, ಮಳೆ ನಕ್ಷತ್ರ: ಶ್ರವಣ, 24.01.2023ರಿಂದ 05.02.2023 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ, ಶುಕ್ಲ ಪಕ್ಷ, ತಿಥಿ: ಹುಣ್ಣಿಮೆ, ನಕ್ಷತ್ರ: ಪುಷ್ಯ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಅನಿರುದ್ಧಾಚಾರ್ ಪಾಂಡುರಂಗಿ ಅವರಿಂದ ಪದ್ಮ ಪುರಾಣ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಅಘಹರಾನಂದ ಅವರಿಂದ ಸೋದರ ಸಂನ್ಯಾಸಿಗಳೊಂದಿಗೆ ಸ್ವಾಮಿ ವಿವೇಕಾನಂದರು ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ರಾಜರಾಜೇಶ್ವರಿ ದೇವಸ್ಥಾನ:** ತ್ರಿಗುಣಾತ್ಮಿಕ ಶ್ರೀ ರಾಜರಾಜೇಶ್ವರಿ ದೇವತಾ ಉತ್ಸವಮೂರ್ತಿ ಚರ ಪ್ರತಿಷ್ಠಾಪನಾ ಮತ್ತು ಕುಂಭಾಭಿಷೇಕ ಮಹೋತ್ಸವ, ಬೆಳಗ್ಗೆ ಸ್ಥಾಪಿತ ದೇವತಾ ಪೂಜೆ, ವಿಹಿತ ಹೋಮಗಳು, ಪ್ರಾಣ ಪ್ರತಿಷ್ಠಾಪನೆ, ತಾಯಿ ನಿರೀಕ್ಷಣೆ, ಕುಂಭಾಭಿಷೇಕ, ರಾಜರಾಜೇಶ್ವರಿ ಮಹಾಯಾಗ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಮಧ್ಯಾಹ್ನ 12ಕ್ಕೆ ಧಾರ್ಮಿಕ ಸಭೆ, ಸಾನ್ನಿಧ್ಯ: ಶ್ರೀ ಗೋವಿಂದಾನಂದ ಸರಸ್ವತಿ ಸ್ವಾಮೀಜಿ, ಅಧ್ಯಕ್ಷತೆ : ಶಾಸಕ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿಗಳು : ಬೆಮೆಲ್ ಮುಖ್ಯ ಪ್ರಧಾನ ವ್ಯವಸ್ಥಾಪಕ ವಿ. ವೆಂಕಟಸುಬ್ಬರಾವ್, ಗೋವಿಂದ ರೆಡ್ಡಿ, ರಾಜೇಶ್ ರಾಜೇ ಅರಸ್, ಜಿ. ಮಾದೇಗೌಡ, ಸ್ಥಳ: ದೇವಸ್ಥಾನ, ರಾಜರಾಜೇಶ್ವರಿನಗರ.

■ **ಶ್ರೀ ಪಂಚಶನೇಶ್ವರಸ್ವಾಮಿ ದೇವಸ್ಥಾನ:** ಶ್ರೀ ಪಂಚಶನೇಶ್ವರಸ್ವಾಮಿ ಆರಾಧನಾ ಮಹೋತ್ಸವ, ಮಲೆಯಾಳದ ಹುತ್ತೂರಮ್ಮನ ಜಾತ್ರೆ, ಸಾನ್ನಿಧ್ಯ: ಶ್ರೀ ಕುಮಾರಚಂದ್ರಶೇಖರ ಸ್ವಾಮೀಜಿ, ಉದ್ಘಾಟನೆ: ಶ್ರೀ ತ್ರಿನೇತ್ರ ಮಹಾನಂದ ಯೋಗಿ ಸ್ವಾಮೀಜಿ, ಉಪಸ್ಥಿತರು: ಶ್ರೀ ಸೋಮನಾಥ ಸ್ವಾಮೀಜಿ, ಶ್ರೀ ಶಿವಾನಂದಪುರಿ ಮಹಾಸ್ವಾಮೀಜಿ, ಅಧ್ಯಕ್ಷತೆ: ಶಾಸಕ ಎಸ್.ಎ.ರಾಮದಾಸ್, ಮುಖ್ಯ ಅತಿಥಿಗಳು: ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಮೇಯರ್ ಶಿವಕುಮಾರ್, ಉಪಮೇಯರ್ ಜಿ.ರೂಪ, ಸ್ಥಳ: ಹಸಿರು ಚಪ್ಪರದ ಆವರಣ, ಲಲಿತ ಮಹಲ್ ಹೋಟೆಲ್ ಮುಂಭಾಗ, ಮಧ್ಯಾಹ್ನ 1ಕ್ಕೆ.

■ **ವಿಜ್ಞಾನ ಪ್ರಸಾರ್, ನವದೆಹಲಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು:** ಕುತೂಹಲಿ–ಸ್ಕೋಪ್ ಪ್ರಕಟಣೆಗಳ ಬಿಡುಗಡೆ ಸಮಾರಂಭ, ಪುಸ್ತಕ ಪರಿಚಯ: ವಿಮರ್ಶಕ ಮಂಜುನಾಥ ಕೊಳ್ಳೇಗಾಲ, ಪುಸ್ತಕ ಬಿಡುಗಡೆ: ವಿಜ್ಞಾನ್ ಪ್ರಸಾರ್ ನಿರ್ದೇಶಕ ಡಾ.ನಕುಲ್ ಪರಾಶರ್, ಸ್ಥಳ: ಸಿಎ–2, ವಿ–ಲೀಡ್, ರಿಂಗ್ ರಸ್ತೆ, ಮಧ್ಯಾಹ್ನ 2ರಿಂದ.

■ **ಶ್ರೀ ಎಲ್ಲಮ್ಮತಾಯಿ ಅಮ್ಮನವರ ದೇವಸ್ಥಾನ :** 19ನೇ ವರ್ಷದ ಪೂಜಾ ಮಹೋತ್ಸವ, ಬೆಳಗ್ಗೆ 6ಕ್ಕೆ ಅಭಿಷೇಕ, 9ರಿಂದ ಶ್ರೀ ಗಣಹೋಮ, ನವಗ್ರಹ ಹೋಮ, ಶ್ರೀ ರೇಣುಕಾದೇವಿ ಹೋಮ, ಶ್ರೀ ದುರ್ಗಾಹೋಮ, ಶ್ರೀ ಮೃತ್ಯುಂಜಯ ಹೋಮ, ಪೂರ್ಣಾಹುತಿ, ಶ್ರೀ ಸತ್ಯನಾರಾಯಣಸ್ವಾಮಿ ಪೂಜೆ, ಶ್ರೀ ಎಲ್ಲಮ್ಮ ಚರಿತ್ರೆ ಮತ್ತು ಚೌಡಿಕೆ ನಾದ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ, ಸ್ಥಳ: 822, ಶ್ರೀ ರಾಜರಾಜೇಶ್ವರಿ ನಿಲಯ, ರಾಮಾನುಜ ರಸ್ತೆ, ಕೆ.ಆರ್.ಮೊಹಲ್ಲಾ.

■ **ಕರಾವಳಿ ಯಕ್ಷಗಾನ ಕೇಂದ್ರ:** ಮಧ್ಯಾಹ್ನ 3ಕ್ಕೆ ತೆಂಕುತಿಟ್ಟು ವಿದ್ಯಾರ್ಥಿಗಳಿಂದ ಯಕ್ಷಗಾನ ಪ್ರದರ್ಶನ, ಸಂಜೆ 4.30ಕ್ಕೆ ಸಭಾ ಕಾರ್ಯಕ್ರಮ, ಅಧ್ಯಕ್ಷತೆ: ಕೇಂದ್ರದ ಅಧ್ಯಕ್ಷ ಶ್ರೀಧರ ಐತಾಳ, ಮುಖ್ಯ ಅತಿಥಿಗಳು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ಅಧ್ಯಕ್ಷ ಡಾ.ನಾರಾಯಣ ಹೆಗಡೆ, ಸಂಜೆ 5.30ರಿಂದ ಬಡಗುತಿಟ್ಟು ವಿದ್ಯಾರ್ಥಿಗಳಿಂದ ದಕ್ಷಯಜ್ಞ ಯಕ್ಷಗಾನ ಪ್ರದರ್ಶನ, ಸ್ಥಳ: ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ಆವರಣ, ಕುವೆಂಪುನಗರ.

■ **ತನುಮನ ಸಂಸ್ಥೆ:** ಗಾಯಕ ಲಕ್ಷ್ಮಿರಾಮ್ ಅವರ ಸಾರಥ್ಯದಲ್ಲಿ ಜಗ ನಡೆಯಲಿ ಬುದ್ಧನ ಕಡೆ ಸಂಗೀತ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ: ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ಮಂಜುನಾಥ್ ಸೋಸಲೆ, ಅಧ್ಯಕ್ಷತೆ : ಮಾಜಿ ಮೇಯರ್ ಪುರುಷೋತ್ತಮ್, ಸ್ಥಳ: ವಿಶ್ವಮೈತ್ರಿ ಬುದ್ಧವಿಹಾರ, ಸಂಜೆ 5.30ಕ್ಕೆ.

■ **ಬಸವ ಸಮಿತಿ:** ಶರಣ ಸಂಗಮ, ಡಾ.ಎನ್.ಎಂ.ಗಿರಿಜಾಪತಿ ಅವರ ಅಲ್ಲಮಯೋಗ ಕಥನ ಕೃತಿ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ: ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ಶರಣೆ ಜಯದೇವ ತಾಯಿ, ಕೃತಿ ಕುರಿತು ಮಾತನಾಡುವವರು: ಪ್ರೊ.ಕೆ.ಅನಂತರಾಮು, ಅಧ್ಯಕ್ಷತೆ: ಬಸವ ಸಮಿತಿ ಅಧ್ಯಕ್ಷ ಹೆಚ್.ವಿ.ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ರಂಗಾಯಣ:** ರಂಗಾಯಣದ ಭಾರತೀಯ ರಂಗ ವಿದ್ಯಾಲಯದ ವಿದ್ಯಾರ್ಥಿಗಳಿಂದ ಬಿಳೆ ದ್ವಾಸ್ವಾಳ, ಗಾಳೀ ಕತಿ, ಮರವು ಕತೆಗಳನ್ನೊಳಗೊಂಡ ಕತಿಗುಳು ರಂಗ ಪ್ರಯೋಗ, ನಿರ್ದೇಶನ: ಜಿ.ಕೆ.ನಂದಕುಮಾರ್, ಸ್ಥಳ: ವನರಂಗ, ಸಂಜೆ 7ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ಸಂಜೆ 6ರಿಂದ ವಿದುಷಿ ಎಸ್.ಚೈತ್ರಿಕಾ ಅವರಿಂದ ಗಾಯನ, ರಾತ್ರಿ 7.15ರಿಂದ ವಿದ್ವಾನ್ ಹರಿದಾಸನ್ ಅವರಿಂದ ಗಾಯನ, ವಿದುಷಿ ಸಿ.ವಿ.ಶ್ರುತಿ–ಪಿಟೀಲು, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ಸ್ಥಳ: ಶ್ರೀ ಕೃಷ್ಣಗಾನಸಭಾ, ಶ್ರೀ ಕೃಷ್ಣ ಮಂದಿರ, ಮೂರನೇ ಹಂತ, ಗೋಕುಲಂ.

■ **ವ್ಯವಸ್ಥಾಪಕರು:** ಭೂ ಸ್ವಾಧೀನ ಒಳಸುಳಿಗಳು ಪುಸ್ತಕ ಬಿಡುಗಡೆ ಸಮಾರಂಭ, ಸ್ಥಳ: ಧ್ವನ್ಯಾಲೋಕ, ಬೋಗಾದಿ ರಸ್ತೆ, ಬೆಳಗ್ಗೆ 10.30ರಿಂದ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ:** ಮಹಾಶಿವರಾತ್ರಿ ಪ್ರಯುಕ್ತ ದ್ವಾದಶ ಜ್ಯೋತಿರ್ಲಿಂಗಗಳ ಪುಣ್ಯದರ್ಶನ, ಸಾನ್ನಿಧ್ಯ: ಜಪದಕಟ್ಟೆ ಮಠದ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ, ಆಶೀರ್ವಚನ: ಡಾ.ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ಉದ್ಘಾಟನೆ: ಶಾಸಕ ಎಲ್.ನಾಗೇಂದ್ರ, ಮುಖ್ಯ ಅತಿಥಿಗಳು: ಮುಡಾ ಆಯುಕ್ತ ಜಿ.ಟಿ. ದಿನೇಶ್ ಕುಮಾರ್, ಉಪಮೇಯರ್ ಜಿ.ರೂಪ, ವಿಮಾನ ನಿಲ್ದಾಣ ನಿರ್ದೇಶಕ ಆರ್.ಮಂಜುನಾಥ್, ಅತಿಥಿಗಳು: ಡಯಟ್ ಪ್ರಾಂಶುಪಾಲ ಸಿ.ಆರ್. ನಾಗರಾಜಯ್ಯ, ಡಾ.ನಾರಾಯಣ ಹೆಗಡೆ, ಸ್ಥಳ: ರಾಮಕೃಷ್ಣನಗರ, ಬೆಳಗ್ಗೆ 11ಕ್ಕೆ.

■ **ವೈದ್ಯವಾರ್ತಾ ಪ್ರಕಾಶನ:** ಡಾ.ಅರಕಲಗೂಡು ನೀಲಕಂಠಮೂರ್ತಿ ವಿರಚಿತ ಕಗ್ಗತ್ತಲೆಯ ಖಂಡದಲ್ಲಿ ಕೃತಿ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ: ಮೈಸೂರು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಎಸ್.ರಂಗಪ್ಪ, ಕೃತಿ ಲೋಕಾರ್ಪಣೆ: ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಡಾ.ಸತೀಶ್ ಕುಮಾರ್ ಎಸ್. ಹೊಸಮನಿ, ಅಧ್ಯಕ್ಷತೆ: ಶತಮಾನೋತ್ಸವ ಸಂಭ್ರಮದ ಅರಸು ಸಂಘದ ಅಧ್ಯಕ್ಷ ಹೆಚ್.ಎಂ.ಟಿ.ಲಿಂಗರಾಜೇ ಅರಸ್, ಕೃತಿ ಕುರಿತು ಮಾತನಾಡುವವರು: ವಿಶ್ರಾಂತ ವಿಜ್ಞಾನಿ ಕೊಳ್ಳೇಗಾಲ ಶರ್ಮ, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಲಯವಿದ್ಯಾ ಪ್ರತಿಷ್ಠಾನ:** ವಾರ್ಷಿಕೋತ್ಸವದ ಸಮಾರೋಪ ಸಮಾರಂಭ, ಉಪಸ್ಥಿತರು: ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಉಪಸ್ಥಿತರು: ಸ್ವರ್ಣ ನೃಸಿಂಹ ದತ್ತ ಸಾಹಿ ಪೀಠಿಕಾ ಸೇವಾ ಟ್ರಸ್ಟ್‌ನ ಶ್ರೀ ಅರ್ಜುನ ಗುರೂಜಿ, ಮುಖ್ಯ ಅತಿಥಿಗಳು: ಗಾನಭಾರತೀ ಗೌರವ ಅಧ್ಯಕ್ಷ ಡಾ.ಸಿ.ಜಿ. ನರಸಿಂಹನ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್, ಸ್ಥಳ: ಗಾನಭಾರತಿ, ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 5.30ಕ್ಕೆ.

■ **ಪ್ರಸಾದ್ ಸ್ಕೂಲ್ ಆಫ್ ರಿದಂಸ್ ತಾಳವಾದ್ಯ ಪ್ರತಿಷ್ಠಾನ ಟ್ರಸ್ಟ್:** ಬೆಳಗ್ಗೆ 10ಕ್ಕೆ ಶಾಲಾ ವಾರ್ಷಿಕೋತ್ಸವ, ಉದ್ಘಾಟನೆ: ಶ್ರೀ ಇಮ್ಮಡಿ ಮಡಿವಾಳ ಸ್ವಾಮೀಜಿ, ಅಧ್ಯಕ್ಷತೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಮುಖ್ಯ ಅತಿಥಿಗಳು: ಡಾ. ಡಿ.ಟಿ. ಪ್ರಕಾಶ್, ಡಾ.ರಘುರಾಂ ವಾಜಪೇಯಿ, ಹೇಮಾನಂದೀಶ್, ಎನ್.ಎಂ. ನವೀನ್‌ಕುಮಾರ್, ಸಂಜೆ 5ಕ್ಕೆ ಡಾ.ರೇಖಾ ಮನಶಂತಿ, ವಿದುಷಿ ಅಖಿಲಾ ಶ್ರೀವತ್ಸ ಅವರಿಂದ ಭರತನಾಟ್ಯ, ಆಶೀರ್ವಚನ : ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ.


■ **ವ್ಯವಸ್ಥಾಪಕರು:** ವಿ. ಜಾರ್ಜ್ ಪ್ರಭಾಕರ್ ಅವರಿಂದ ಆರ್ಕೆಸ್ಟ್ರಾ ಮತ್ತು ಗಜಲ್ ಪಾರ್ಟಿ 'ಏಕ್ ಶ್ಯಾಂ ಮ್ಯೂಸಿಕ್ ಕೆ ನಾಮ್' ಸಂಗೀತ ಸಂಜೆ ಕಾರ್ಯಕ್ರಮ, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 6ಕ್ಕೆ.

■ **ಶ್ರೀ ಶಿವದತ್ತ ಸಾಯಿ ಮಂದಿರ:** 3ನೇ ವರ್ಷದ ವಾರ್ಷಿಕೋತ್ಸವ, ಬೆಳಗ್ಗೆ 6.30ಕ್ಕೆ ಅಭಿಷೇಕ, ಅರ್ಚನೆ, ಮ. 12.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಶಿವದತ್ತ ಸಾಯಿ ಮಂದಿರ, ರಸ್ತೆ.

■ **ಪರಮಹಂಸ ಯೋಗ ಮಹಾವಿದ್ಯಾಲಯ:** ಹೋಮ ಮತ್ತು ಸರಸ್ವತಿ ಸಿದ್ಧಿಮಂತ್ರ ದೀಕ್ಷಾ ಕಾರ್ಯಕ್ರಮ, ಸ್ಥಳ: ಮಹಾವಿದ್ಯಾಲಯ ಆವರಣ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು :** ಬೆಳದಿಂಗಳ ಸಂಗೀತ–251, ಡಾ.ಸುಮಾ ಸುಧೀಂದ್ರ ಮತ್ತು ಡಾ.ಪ್ರಕಾಶ್ ಸೊಂಟಕ್ಕೆ ಅವರಿಂದ ಜುಗಲ್‌ಬಂದಿ, ವಿದ್ವಾನ್ ಬಿ.ಸಿ.ಮಂಜುನಾಥ್–ಮೃದಂಗ, ಪಂಡಿತ್ ಕಾರ್ತಿಕ್‌ಭಟ್–ತಬಲ, ಸ್ಥಳ: ಶ್ರೀ ಸುತ್ತೂರು ಮಠ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.45 ಅರಿವಿನ ಶಿಖರ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ, ಜಿ.ಪುಷ್ಪಲತಾ ಅಂಬಯ್ಯನುಲಿ ವ್ಯಾಖ್ಯಾನ–ಡಾ.ಮ.ರಾಮಕೃಷ್ಣ, 9.05 ಹಾವೇರಿಯಲ್ಲಿ ನಡೆಯುತ್ತಿರುವ 83ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ 2ನೇ ದಿನದ ಗೋಷ್ಠಿಗಳ ಬಾನುಲಿ ವರದಿ, 9.40 ನಮ್ಮ ಆರೋಗ್ಯ–ಆತಂಕ ಮತ್ತು ಬಾಯಿಯ ಆರೋಗ್ಯ ಕುರಿತು ಡಾ.ಸ್ಮಿತಾ ಜೆ.ಡಿ. ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ 'ಕಥೆಕೇಳು ಪುಟ್ಟಾ' ಪಂಚತಂತ್ರದ ಕಥೆ ಹೇಳುತ್ತಾರೆ ಬಿ.ಜಿ. ಕವಿತಾ, 10.30 ಮಕ್ಕಳ ಮಂಟಪ 'ಪ್ರತಿಭಾ ಪಲ್ಲವ' ಹಾಡುವ ಪ್ರತಿಭೆ ಅಭಿಜ್ವಲ್ ಎಂ.ಕೆ. ಪರಿಚಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಡಾ.ಆರ್.ಎನ್.ಶ್ರೀಲತಾ, ಎಸ್. ಶಂಕರ್ 12.45 ಜನಪದ ಸಂಗೀತ–ಮಾದಮ್ಮ ಮತ್ತು ತಂಡ, 1.20 ಭಾವಗೀತೆ–ಎನ್.ಹೇಮಾ, 3.00 ಸ್ವರಾಜ್– ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಹಿಡಿಂಬಾ ವಿವಾಹ ಪ್ರಸ್ತುತಿ–ಉಡುಪಿ ಅಂಬಲಪಾಡಿಯ ಶ್ರೀ ಲಕ್ಷ್ಮೀ ಜನಾರ್ಧನ ಯಕ್ಷಗಾನ ಕಲಾ ಮಂಡಳಿಯ ಕಲಾವಿದರು, 6.50 ಕೃಷಿರಂಗ–ಗೋ ಸಂರಕ್ಷಣೆ ಯೋಜನೆಗಳು ಹಾಗೂ ಗೋ ಹತ್ಯೆ ನಿಷೇಧ ಕಾಯ್ದೆ ಕುರಿತು ಡಾ.ವೈ.ಡಿ.ರಾಜಣ್ಣ ಅವರೊಂದಿಗೆ ಸಂದರ್ಶನ, 8.00 ಯುವವಾಣಿ –ಶ್ರೀರಂಗ ಪಟ್ಟಣದ ರಂಜನ್ ಬೆಳ್ಳರ್ಪಾಡಿ ಅವರೊಂದಿಗೆ ಮಾತುಕತೆ, 9.15 ರಂಗ ಗೀತೆಗಳು–ಸುಭದ್ರಾ ಕಲ್ಯಾಣ ನಾಟಕದ ಹಾಡುಗಳು, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ರಾಜೇಶ್ವರಿ ಪಾಠಕ್–ಲಘು ಶಾಸ್ತ್ರೀಯ ಸಂಗೀತ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 5 ಭಾನುವಾರ 2023

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 288 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ಹೋ ಹೋ ಬನ್ನಿ. ಮನೇಲಿ ಎಲ್ಲರೂ ಆರೋಗ್ಯವೇ?

ಮರೆಗುಳಿ ಪ್ರೊಫೆಸರ್ : ಅಯ್ಯೋ ದೇವರೆ, ಮರೆತೇ ಬಿಟ್ಟಿದ್ದೆನಲ್ಲಾ. ನಾನು ಬರುವಾಗ ನನ್ನ ಹೆಂಡ್ತಿ ಜಾರಿಬಿದ್ದಿದ್ದಳು.

ಮೈಸೂರು ಮಿತ್ರ

ಭಾನುವಾರ, 5 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಪ್ರಿಯವಾದ ಮಾತುಗಳನ್ನಾಡುವವಳೇ ಮಡದಿ. ಸಂತೋಷವನ್ನುಂಟು ಮಾಡುವವನೇ ಪುತ್ರ, ವಿಶ್ವಾಸಕ್ಕೆ ಪಾತ್ರನಾದವನೇ ಮಿತ್ರ. ಎಲ್ಲಿ ಜೀವನ ಚೆನ್ನಾಗಿ ನಡೆಯುವುದೋ ಅದೇ ವಾಸಿಸಲು ಯೋಗ್ಯವಾದ ಸ್ಥಳ –ಮಹಾಭಾರತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಟ್ಟ ಏರದವನು ಬೆಟ್ಟ ಏರಿಯಾನೆ?

ನಿಮ್ಮ ಪತ್ರಗಳು

ಸಿರಿಧಾನ್ಯಗಳಿಗೆ ಒತ್ತು ನೀಡಿರುವುದು ಸ್ವಾಗತಾರ್ಹ

ಮಾನ್ಯರೆ,

ವಿತ್ತ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಈ ಬಾರಿಯ ಆಯವ್ಯಯ ದಲ್ಲಿ (2023–24) ಸಿರಿ ಧಾನ್ಯಗಳ ಮಹತ್ವವನ್ನು ಎತ್ತಿ ಹಿಡಿದಿರುವುದು ಸ್ವಾಗತಾರ್ಹ. ಸಾಮಾನ್ಯವಾಗಿ ಅಕ್ಕಿ, ಗೋಧಿ, ಬಾರ್ಲಿಗಳನ್ನು ಹೊರತುಪಡಿಸಿ ಉಳಿದ ಧಾನ್ಯಗಳನ್ನು ಸಿರಿಧಾನ್ಯಗಳು ಅಥವಾ ತೃಣ ಧಾನ್ಯಗಳೆಂದು ಕರೆಯಲಾಗುತ್ತದೆ. ಇವುಗಳನ್ನು ನಿಸರ್ಗಕ್ಕೆ ಹಾನಿಯಾಗದಂತೆ ಬೆಳೆಯಬಹುದು. ಇವುಗಳು ಸಾಮಾನ್ಯ ವಾಗಿ ಗುಂಡಗಿನ ಆಕಾರದಲ್ಲಿದ್ದು ಮತ್ತು ಸಣ್ಣದಾಗಿರುತ್ತವೆ. ಸಿರಿಧಾನ್ಯಗಳ ಉತ್ಪಾದನೆಯಲ್ಲಿ ಭಾರತವು ಮೊದಲನೆಯ ಸ್ಥಾನದಲ್ಲಿದ್ದು, ರಫ್ತಿನಲ್ಲಿ ಎರಡನೇ ಸ್ಥಾನದಲ್ಲಿದೆ. ಸಿರಿಧಾನ್ಯಗಳು ಉತ್ತಮ ಆರೋಗ್ಯಕ್ಕೆ ಪೂರಕವಾದ ಆಹಾರ ಧಾನ್ಯಗಳಾಗಿವೆ. ಜೋಳ, ಸಾಮೆ, ಅಕ್ಕಡಿ, ಅರ್ಕ, ರಾಗಿ, ಸಜ್ಜೆ, ಕುರುಲು, ನವಣೆ, ಕೂರ್ಲೆ ಮುಂತಾದ ಸಿರಿಧಾನ್ಯಗಳು ಉತ್ತಮ ಆರೋಗ್ಯವನ್ನು ಕಾಪಾಡಿ ಕೊಳ್ಳುವಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತವೆ. ಜೊತೆಗೆ ಸಿರಿಧಾನ್ಯಗಳು ಹಲವಾರು ಶತಮಾನಗಳಿಂದ ನಮ್ಮ ಆಹಾರ ಪದ್ಧತಿಯ ಅವಿಭಾಜ್ಯ ಅಂಗವಾಗಿದೆ.

ಸಕ್ಕರೆ ಕಾಯಿಲೆ, ರಕ್ತದೊತ್ತಡ, ಪಾರ್ಶ್ವವಾಯು, ಹೃದಯ ಬೇನೆ ಸೇರಿದಂತೆ ಹಲವಾರು ಕಾಯಿಲೆಗಳನ್ನು ನಿಯಂತ್ರಿಸುವಲ್ಲಿ ಸಿರಿಧಾನ್ಯಗಳು ಮಹತ್ವದ ಪಾತ್ರ ವಹಿಸುತ್ತವೆ. ಏಕೆಂದರೆ ಇವುಗಳಲ್ಲಿ ಹೆಚ್ಚು ಪೌಷ್ಟಿಕಾಂಶದ ಜೊತೆಗೆ ನಾರಿನಾಂಶ ಸಹ ಇದೆ. ತಾಮ್ರ, ಖನಿಜ, ಫಾಸ್ಪರಸ್ ಮೆಗ್ನೀಷಿಯಮ್ ಮುಂತಾದವುಗಳ ಆಗರವಾಗಿರುವ ಸಿರಿಧಾನ್ಯಗಳು ನಮ್ಮ ದೇಹವನ್ನು ಸದೃಢ ಹಾಗೂ ಆರೋಗ್ಯದಾಯಕವಾಗಿ ಇಡಲು ಪೂರಕವಾಗಿ ಕೆಲಸ ಮಾಡುತ್ತದೆ. ಈ ಧಾನ್ಯಗಳು ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತವೆ.

ಈ ನಿಟ್ಟಿನಲ್ಲಿ, ದೇಶವನ್ನು ಸಿರಿಧಾನ್ಯಗಳ ತವರನ್ನಾಗಿಸಲು ಕೇಂದ್ರ ಬಜೆಟ್ ನಲ್ಲಿ ಒತ್ತು ನೀಡಲಾಗಿದ್ದು ಭಾರತೀಯ ಸಿರಿಧಾನ್ಯ ಸಂಶೋಧನಾ ಸಂಸ್ಥೆಗೆ ಉತ್ತೇಜನ ನೀಡಲಾಗುವುದು ಎಂದು ಹೇಳಿರುವ ಅರ್ಥ ಸಚಿವೆ, "ಶ್ರೀ ಅನ್ನ" ಎಂಬ ಹೆಸರಿನಲ್ಲಿ ಸಿರಿಧಾನ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲು ಸಣ್ಣ ರೈತರಿಗೆ ಸರ್ಕಾರದ ವತಿಯಿಂದ ನೆರವು ನೀಡಲಾಗುತ್ತದೆ ಎಂದು ಘೋಷಿಸಿದ್ದಾರೆ. 2023 ನೇ ವರ್ಷವನ್ನು ಸಿರಿಧಾನ್ಯಗಳ ವರ್ಷವೆಂದು ವಿಶ್ವ ಸಂಸ್ಥೆ ಘೋಷಿಸಿರುವುದನ್ನು ಇಲ್ಲಿ ಉಲ್ಲೇಖನಾರ್ಹ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಘೋಷಿಸಿರುವ ಕ್ರಮ ಉತ್ತಮವಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಅನಾರೋಗ್ಯಕಾರಕ, ಅಪಾಯಕಾರಿ ತೆರೆದ ಚರಂಡಿ



ಮಾನ್ಯರೇ,

ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿ ಬಾಲಕಿ ಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮುಂದೆ ಇತ್ತೀಚೆಗೆ ಹೊಸದಾಗಿ ದೊಡ್ಡ ಚರಂಡಿಯನ್ನು ನಿರ್ಮಿಸಲಾಗಿದೆ ಆದರೆ ಅದರ ನಿರ್ಮಾಣಕ್ಕೆ Scientific Planning ಮಾಡಿಲ್ಲ ಅನ್ನೋದು ಎದ್ದು ಕಾಣುತ್ತಿದೆ. ಮೊದಲನೆಯದಾಗಿ, ಚರಂಡಿ ಪಕ್ಕ ಇರುವ ಕಾಲೇಜಲ್ಲಿ ಸಾವಿರಾರು ಹೆಣ್ಣು ಮಕ್ಕಳಿಗೆ ತರಗತಿಗಳು ದಿನ ನಡೆಯುತ್ತವೆ ಹಾಗೂ ತೆರೆದ ಚರಂಡಿ ಪಕ್ಕದಿಂದಲೇ ಅವರ ಓಡಾಟವಿದೆ ಎರಡನೆಯದಾಗಿ, ಚರಂಡಿಯನ್ನು RCC Roofing ಹಾಕಿ ಮುಚ್ಚದೆ ಹಾಗೆಯೇ ಬಿಟ್ಟಿರುವುದರಿಂದ ಹಾಗೂ ಚರಂಡಿ ಕಾಂಪೌಂಡ್ ಎತ್ತರ ತುಂಬಾ ಕಡಿಮೆಯಿರುವುದರಿಂದ ಜನರು ಎಲ್ಲಾ ಬಗೆಯ ಪ್ಲಾಸ್ಟಿಕ್, ಇತರ ತ್ಯಾಜ್ಯಗಳನ್ನು ಚರಂಡಿಗೆ ಎಸೆಯುತ್ತಾರೆ. ಚರಂಡಿ ಕಟ್ಟಿಕೊಂಡು ಕೊಳಚೆ ನೀರು ಮುಂದೆ ಹರಿಯದೆ, ನಿಂತ ಕೊಳಚೆ ನೀರು ಸುತ್ತಮುತ್ತ ಸಾಂಕ್ರಾಮಿಕ ರೋಗಗಳನ್ನು ಹರಡುವ ಸೊಳ್ಳೆಗಳ ಉತ್ಪತ್ತಿ ಕೇಂದ್ರವಾಗಿದೆ. ಅದಲ್ಲದೇ ನಿಂತ ಕೊಳಚೆ ನೀರಲ್ಲಿ ಗಿಡ ಗಂಟಿಗಳು ಎತ್ತರವಾಗಿ ಬೆಳೆದು ನಿಂತು ಕ್ರಿಮಿ ಕೀಟಗಳ ಅವಾಸ ಸ್ಥಾನವಾಗಿ, ಚರಂಡಿ ಹೊಸದಾಗಿ ಮಾಡಿರುವ ಉದ್ದೇಶವನ್ನೇ ವಿಫಲಗೊಳಿಸುತ್ತಿವೆ. ಕಡೆಯದಾಗಿ, ಮುಖ್ಯ ರಸ್ತೆ ಭಾಗಗಳಲ್ಲಿ ಈ ಚರಂಡಿಗೆ ಮಾಡಿರುವ ತಡೆಗೋಡೆ ತುಂಬಾ ಕಡಿಮೆ ಎತ್ತರ ಇರುವುದರಿಂದ ಹಾಗೂ ಪಕ್ಕದಲ್ಲೇ ಬಸ್ ಸ್ಟಾಪ್ ಇರುವುದರಿಂದ ಓಡಾಡುವ ಶಾಲಾ ಕಾಲೇಜು ಮಕ್ಕಳು, ಕಣ್ಣು ಕಾಣದ ವಯೋವೃದ್ಧರು, ಹತ್ತಿರದ ಬಾರ್‌ಗಳಿಂದ ಕುಡಿದು ತೂರಾಡುತ್ತಾ ಬರೋ ಕುಡುಕರು ಹಾಗೂ ಚರಂಡಿ ಪಕ್ಕದಲ್ಲೇ ಓಡಾಡುವ ದನಕರುಗಳು, ಈ ತೆರೆದ ಚರಂಡಿ ಒಳಗೆ ಬಿದ್ದು ಪ್ರಾಣ ಕಳೆದುಕೊಳ್ಳುವ ಅಪಾಯ ಹೆಚ್ಚಿದೆ. ವಾರ್ಡ್ 51 ರ ಮಾನ್ಯ ನಗರ ಪಾಲಿಕೆ ಸದಸ್ಯರು ಈ ಹೊಸ ಚರಂಡಿ ಮಾಡುವಾಗ, ಗುತ್ತಿಗೆದಾರರಿಗೆ ಸರಿಯಾಗಿ ಮಾರ್ಗದರ್ಶನ ಮಾಡಬೇಕಿತ್ತು. ಈಗಲಾದರೂ ಚರಂಡಿ ಗೋಡೆ ಎತ್ತರಿಸಿ, RCC Roofing ಹಾಕಿಸಿ ಸಾರ್ವಜನಿಕ ಹಿತಾಸಕ್ತಿ–ರಕ್ಷಣೆ ಮಾಡಬೇಕಾಗಿದೆ. ಇದರಿಂದ ಅತೀ ಪಕ್ಕದಲ್ಲೇ ಇರುವ ಕಾಲೇಜು ಬಾಲಕಿಯರಿಗೆ ಸೊಳ್ಳೆಕಾಟ, ಅನಾರೋಗ್ಯ, ದುರ್ವಾಸನೆ, ಚರಂಡಿಯೊಳಗೆ ಅಪ್ಪಿತಪ್ಪಿ ಬೀಳುವ ಆತಂಕ ಎಲ್ಲಾ ತಪ್ಪಿಸಬಹುದು.


–ಪ್ರೊ. MSS ಶರ್ಮ, ಸಮಾಜ ಸೇವಕರು, ಮೈಸೂರು.

ರೈತನ ಸಾವಿಗೆ ಕಾರಣ ತಿಳಿದು ಸರ್ಕಾರ ಅಗತ್ಯ ಕ್ರಮ ರೂಪಿಸಲಿ

ಮಾನ್ಯರೇ,

ಮಾಧ್ಯಮಗಳಲ್ಲಿ ದಿನನಿತ್ಯ ಬರೀ ರಾಜಕಾರಣಿಗಳ ಬೈದಾಟ, ಭ್ರಷ್ಟಾಚಾರಿಗಳು, ಗೋಮುಖ ವ್ಯಾಘ್ರಗಳಂತಹ "ಸ್ವಾಮೀಜಿಗಳ ಸುದ್ಧಿಗಳದೇ ಕತೆಯಾಗಿದ್ದು, ಇಂತಹ ಸುದ್ದಿಗಳನ್ನು ಆದಷ್ಟು ಕಡಿಮೆ ಮಾಡಿ ಒಳ್ಳೆಯ ಸುದ್ದಿಗಳನ್ನು ಹೆಚ್ಚೆಚ್ಚು ಹಾಕಲು ಸಂಬಂಧಪಟ್ಟವರು ಇನ್ನು ಮುಂದೆ ಕ್ರಮವಹಿಸುವುದು ಸಮಾಜದ ದೃಷ್ಟಿಯಿಂದ ಒಳ್ಳೆಯದು. ಈಗ ಬೆಳೆಯುತ್ತಿರುವ ಹದಿಹರೆಯದ ಮಕ್ಕಳ ಮಾನಸಿಕ ಆರೋಗ್ಯದ ದೃಷ್ಟಿಯಿಂದ ತುಂಬಾ ಒಳ್ಳೆಯದು. ದೇಶದ ಜನರಿಗೆ ಅನ್ನ ಹಾಕುವ ರೈತರು ಹಾಗೂ ಶ್ರಮಿಕರ ಸಾವಿನ ಸುದ್ದಿಗಳಿಗೆ ಆದ್ಯತೆ ನೀಡಬೇಕಾದ ಅಗತ್ಯವಿದೆ. ಅಲ್ಲದೆ ಮೊನ್ನೆ ಭಾಲ್ಕಿ ಎಂಬಲ್ಲಿ ಯುವ ರೈತ (ವಿಕ್ರಂ ಎಂಬುವವರು)ರೊಬ್ಬರು ಸಾಲಬಾಧೆ ತಾಳಲಾರದೆ ಮಕ್ಕಳೊಂದಿಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದು ನಿಜಕ್ಕೂ ನಮ್ಮಲ್ಲಿ ಮಾನವೀಯ ಮೌಲ್ಯಗಳೇ ಅಪಮೌಲ್ಯವಾಗುತ್ತಿರುವಂತಹ ಘಟನೆಯಾಗಿದೆ. ಅಲ್ಲದೆ ಇಂತಹ ಸಾವುಗಳನ್ನು ನಾವು ಆಗಾಗ ನೋಡುತ್ತಲೇ ಇದ್ದೇವೆ. ಆ ರೈತನ ಸಾವಿಗೆ ಏನು ಕಾರಣ? ಇಂತಹ ಸಾವುಗಳನ್ನು ತಪ್ಪಿಸಲು ಏನು ಮಾಡಬೇಕು? ಮುಂತಾದ ಪ್ರಶ್ನೆಗಳಿಗೆ ಉತ್ತರ ಹುಡುಕಲು ಪತ್ರಿಕೆಗಳು ತನಿಖಾ ಪತ್ರಿಕೋದ್ಯಮದ 'ಮೂಲಕ ಸಾವಿನ ಕಾರಣ ಕಂಡುಹಿಡಿದು ಪ್ರಕಟಿಸಿ, ಸರ್ಕಾರಗಳು ಅಗತ್ಯ ಕಾರ್ಯಕ್ರಮ ರೂಪಿಸಿ ಜಾರಿಗೆ ತರಲು ಸಂಬಂಧಪಟ್ಟವರ ಕಣ್ತೆರೆಸುವ ಕೆಲಸ ಮಾಡಬೇಕಾಗಿದೆ. ಇನ್ನು ಮುಂದಾದರೂ ಪತ್ರಿಕೆಗಳು ಈ ದಿಕ್ಕಿನಲ್ಲಿ ಪ್ರಯತ್ನ ಮಾಡಲಿ.

–ರಾಜಶೇಖರಮೂರ್ತಿ, ಬೆಳಗನಹಳ್ಳಿ, ಹೆಚ್ ಡಿ ಕೋಟೆ ತಾ.



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಮನುಷ್ಯನ ಹುಟ್ಟು, ಬದುಕು ಮತ್ತು ಸಾವಿನ ನಿರರ್ಥಕತೆ



ಕಳೆದ ಜನವರಿ 1ರಂದು ಇದೇ ಅಂಕಣದಲ್ಲಿ **"ದೇವಮಾನವ ಚಂದ್ರಸ್ವಾಮಿ ಮತ್ತು ಮಾರ್ಗರೇಟ್ ಥ್ಯಾಚರ್"** ಶೀರ್ಷಿಕೆಯ ಭೂಮಂತ್ರವನ್ನು ಪುನಃ ಪ್ರಕಟಿಸಲಾಗಿತ್ತು. (ಮೊದಲು ಇದು 24.4.2013ರಂದು ಪ್ರಕಟವಾಗಿತ್ತು). ಆ ಲೇಖನವು ಮಾಜಿ ವಿದೇಶಾಂಗ ಸಚಿವ ಕೆ.ನಟವರ್ ಸಿಂಗ್ ಅವರ ಕೃತಿಯ "Walking with Lions : Tales from a Diplomatic Past" (ಸಿಂಹಗಳ ಜೊತೆಯಲ್ಲಿ ನಡಿಗೆ– ರಾಜತಾಂತ್ರಿಕನ ಗತಕಾಲದ ಕಥೆಗಳು) ಒಂದು ಘಟನೆಯಿಂದ ಪ್ರೇರಣೆ ಪಡೆದಿತ್ತು. ಈ ಪುಸ್ತಕವು 1970ರ ದಶಕದ ತಂತ್ರಿಕ್ ಅಥವಾ ದೇವ ಮಾನವ ಚಂದ್ರಸ್ವಾಮಿ ಹಾಗೂ ಆತನ ಭವಿಷ್ಯ ನುಡಿಯುವ ವಿದ್ಯೆ, ಕಾಲಜ್ಞಾನದ ನಿಗೂಢ ಶಕ್ತಿ ಹಾಗೂ ಇತರ ಪವಾಡಾತ್ಮಕ ಕ್ರಿಯೆಗಳನ್ನು ಕುರಿತದ್ದಾಗಿತ್ತು.

ಆ ವರ್ಷಗಳಲ್ಲಿ ಚಂದ್ರ ಸ್ವಾಮಿಯು ಎಲ್ಲೆಂದರಲ್ಲಿ ಕಾಣಿಸಿಕೊಳ್ಳುತ್ತಿದ್ದರು ಹಾಗೂ ಸರ್ಕಾರದ ಉನ್ನತ, ಪ್ರಭಾವಿ ಅಧಿಕಾರಿಗಳು, ಸಚಿವರು ಹಾಗೂ ನಾಯಕರ ಮೇಲೆ ಪ್ರಭಾವ ಬೀರುವಂತಹ ಸಾಮರ್ಥ್ಯ ಹೊಂದಿದ್ದರು. ತಮ್ಮ ಅತೀಂದ್ರಿಯ ಪವಾಡಾತ್ಮಕ ಶಕ್ತಿಗಳ ಮೂಲಕ ಅತೀ ಗಣ್ಯಾತಿಗಣ್ಯರ ಜೊತೆ ಸಂಬಂಧ ಬೆಳೆಸಿ ಅವರು ಎರಡು ದಶಕಗಳಿಗಿಂತ ಹೆಚ್ಚಿನ ಕಾಲ ದೆಹಲಿಯಲ್ಲಿ ಮೆರೆದಿದ್ದರು. ಅಸಾಧ್ಯವೆನಿಸುವ ಸಂದರ್ಭಗಳಲ್ಲಿ ಸಹ ಇವರು ಪ್ರಧಾನಮಂತ್ರಿ, ರಾಷ್ಟ್ರಪತಿ, ವಿವಿಧ ದೇಶಗಳ ಸರ್ವಾಧಿಕಾರಿಗಳು ಹಾಗೂ ರಾಜರುಗಳ ಜೊತೆಗೆ ಸಂದರ್ಶನ ಇಲ್ಲವೇ ಅವರ ಭೇಟಿಯಾಗಲು ಸಮಯವನ್ನು ನಿಗದಿಪಡಿಸುತ್ತಿದ್ದರು. ಅದುವೇ ಅವರ ಅತೀಂದ್ರಿಯವಾದ ಇಲ್ಲವೇ ಇತರ ಯಾವುದೋ ವಿಧವಾದ ಅಧಿಕ ಶಕ್ತಿಯಾಗಿತ್ತು.

ನಟವರ್ ಸಿಂಗ್ ಅವರು ತಮ್ಮ ಕೃತಿಯಲ್ಲಿ ಒಂದು ಘಟನೆಯನ್ನು ನೆನಪಿಸುತ್ತಾರೆ. ಅವರು ಯಾವುದೋ ರಾಜತಾಂತ್ರಿಕ ಉದ್ದೇಶದಿಂದ ಫ್ರಾನ್ಸ್ ದೇಶಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅನಾರೋಗ್ಯಕ್ಕೆ ತುತ್ತಾಗಿ, ಇದೇ ಕಾರಣಕ್ಕೆ ತಮ್ಮ ಪ್ರವಾಸವನ್ನು ಮೊಟಕುಗೊಳಿಸಬೇಕಾಗಬಹುದೆಂದು ಯೋಚಿಸುತ್ತಾರೆ.

ತಕ್ಷಣವೇ ಅವರಿಗೆ ಹಲವು ವರ್ಷಗಳ ಕಾಲ ಸಂಪರ್ಕದಲ್ಲಿ ಇರದೇ ಇದ್ದ ದೇವಮಾನವ ಚಂದ್ರಸ್ವಾಮಿಯವರಿಂದ ಕರೆಯೊಂದು ಬರುತ್ತದೆ. ನಿಜವಾಗಿಯೂ ನಟವರ್ ಸಿಂಗ್ ಅವರಿಗೆ ಅಲೆಮಾರಿಯಂತಿರುವ ಈ ಚಂದ್ರಸ್ವಾಮಿಯವರ ಜೊತೆ ಮಾತನಾಡಲು ಬಿಲ್‌ಕುಲ್ ಇಷ್ಟವಿರುವುದಿಲ್ಲ. ಆದರೆ ಅವರ ಜೊತೆ ಮಾತನಾಡುವುದರಿಂದ ತಪ್ಪಿಸಿಕೊಳ್ಳಲು ಅವರಿಗೆ ಸಾಧ್ಯವಾಗುವುದೇ ಇಲ್ಲ. ಆಗ ಚಂದ್ರಸ್ವಾಮಿಯವರು "ಕುನ್ವರ್ ಸಾಹೇಬರೆ ನೀವು ಅನಾರೋಗ್ಯಪೀಡಿತರಾಗಿದ್ದೀರಿ. ನಿಮ್ಮನ್ನು ಯಾರು ನೋಡಿಕೊಳ್ಳುತ್ತಿದ್ದಾರೆ?" ಎಂದು ಕೇಳಿದರು. ನಟವರ್ ಸಿಂಗ್ ಅವರಿಗೆ ತಾವು ಪ್ಯಾರಿಸ್‌ಗೆ ಬಂದ ವಿಷಯ ಹಾಗೂ ಅನಾರೋಗ್ಯಪೀಡಿತರಾಗಿದ್ದು ಚಂದ್ರಸ್ವಾಮಿಯವರಿಗೆ ಹೇಗೆ ಗೊತ್ತಾಯಿತು ಎಂಬುದು ಆಶ್ಚರ್ಯ ಉಂಟು ಮಾಡಿತು. ಚಂದ್ರಸ್ವಾಮಿ, ನಟವರ್ ಸಿಂಗ್ ಅವರಿಗೆ ನಂತರ ಹೇಳಿದ ಮಾತುಗಳೆಂದರೆ, "ನಿಮ್ಮನ್ನು ನೋಡಲು ನಾನು ಫ್ರಾನ್ಸಿನ ಅಧ್ಯಕ್ಷರಾದ ಮೀಟೆರಾಂಡ್ ಅವರ ಖಾಸಗಿ ವೈದ್ಯರನ್ನು ಕರೆದುಕೊಂಡು ಬರುತ್ತೇನೆ." ನಿಜವಾಗಿಯೂ ಅವರು ಹೇಳಿದ ಹಾಗೆ (ಚಂದ್ರಸ್ವಾಮಿ) ವೈದ್ಯರ ಜೊತೆ ಬಂದು ನಟವರ್ ಸಿಂಗ್ ಅವರಿಗೆ ವೈದ್ಯಕೀಯ ಚಿಕಿತ್ಸೆ ಕೊಡಿಸಿದರು. ಕೊನೆಗೆ ಎಲ್ಲವೂ ಸರಿಯಾಯಿತು. ನಟವರ್ ಸಿಂಗ್ ಅವರು ಚೇತರಿಸಿಕೊಂಡರು.

ಅದು ಹಾಗಿರಲಿ. ನಟವರ್ ಸಿಂಗ್ ಅವರು ಆಲ್ಬರ್ಟ್ ಬೆಸ್ಟ್ ಎಂಬ ಆಧ್ಯಾತ್ಮಿಕ ಸಾಧಕರ (ಪ್ರೇತಾತ್ಮಗಳ ಜೊತೆ ಸಂವಹಿಸಬಲ್ಲ) ಬಗ್ಗೆ ವಿವರಿಸುತ್ತಾರೆ. ಇದನ್ನು ಓದಿ, ಈಗಾಗಲೇ ಗಲ್ಲಾ ಪೆಟ್ಟಿಗೆಯಲ್ಲಿ ಸಾಕಷ್ಟು ಯಶಸ್ಸು ಗಳಿಸಿರುವ ಕನ್ನಡದ **"ಕಾಂತಾರ"** ಚಿತ್ರ ನೆನಪಾಯಿತು. ಈ ಚಿತ್ರವು ಗ್ರಾಮದ ದೈವಿಶಕ್ತಿಯನ್ನು ವಶಪಡಿಸಿಕೊಂಡು ನಂತರ, ಹಳ್ಳಿಗರ ಬದುಕು ಹಾಗೂ ದೈವಿಕ ಪ್ರಪಂಚದ ನಡುವೆ ಸುವರ್ಣ ಸೇತುವೆಯಾಗುವ ಸಾಧಕನೊಬ್ಬನ ಸುತ್ತಲೂ ಹೆಣೆಯಲಾಗಿದೆ.

ನಟವರ ಸಿಂಗ್ ಅವರು ಆಲ್ಬರ್ಟ್ ಬೆಸ್ಟ್ ಅವರ ಬಗ್ಗೆ ಬರೆಯುತ್ತಾರೆ. ಅವರು ಉತ್ತರ ಐರ್‌ಲ್ಯಾಂಡಿನ ಬೆಲ್ಫಾಸ್ಟ್‌ನಲ್ಲಿ ಜನಿಸುತ್ತಾರೆ. ತಮ್ಮ ಅಧಿಕ ಸಂವೇದನಾ ಗ್ರಹಿಕೆಯ ಮೂಲಕ (sixth sense) ಸತ್ತವರ ಆತ್ಮಗಳ (Spirit) ಜೊತೆ ಅವರು ಸಂವಹನ ನಡೆಸುತ್ತಿದ್ದರು.

ನಮಗೆಲ್ಲರಿಗೂ ಗೊತ್ತಿರುವ ಹಾಗೆ, ಹಿಂದುಗಳು ಸಾಮಾನ್ಯವಾಗಿ ಮನುಷ್ಯ ಸತ್ತ ನಂತರ, ದೇಹ ನಾಶವಾದರೂ, ನಮ್ಮ ದೇಹದಲ್ಲಿ ಚೇತನ ಸ್ವರೂಪಿಯಾಗಿರುವ ಆತ್ಮವು ಶಾಶ್ವತವಾಗಿರುವುದು ಎಂದು ನಂಬುತ್ತಾರೆ. ನಮ್ಮ ನಂಬಿಕೆ ಏನೆಂದರೆ, **ಈ ಆತ್ಮವು ಉನ್ನತ ದೈವೀ ಶಕ್ತಿಯನ್ನು ಗಳಿಸಿದ ಪುರುಷ ಅಥವಾ ಮಹಿಳಾ ಸಾಧಕರ (ತಂತ್ರಿಗಳು, ಸಿದ್ಧಿ ಪುರುಷರು, ಯೋಗಿ ಪುರುಷರು ಇತ್ಯಾದಿ) ಜೊತೆ ಸಂಪರ್ಕವನ್ನು ಸಾಧಿಸಬಲ್ಲದು.** ಅದು ಸತ್ತಂತಹ ತಂದೆ, ತಾಯಿ, ಪತ್ನಿ, ಗಂಡ, ಮಕ್ಕಳು, ಸಮೀಪ ಬಂಧುಗಳು ಅಥವಾ ಸ್ನೇಹಿತರ ಆತ್ಮವಾಗಿರಲೂಬಹುದು.

ಹಾಗಾದರೆ, ಅಂತಹ ಸಂಪರ್ಕಗಳ ಉದ್ದೇಶವಾದರೂ ಏನು? ಏಕೆಂದರೆ, ಈ ಅತೀಂದ್ರಿಯ ಶಕ್ತಿಗಳು (ಆತ್ಮ) ಅಗೋಚರವಾಗಿರುತ್ತವೆ ಹಾಗೂ ನೇರವಾಗಿ ಮಾತನಾಡುವ ಶಕ್ತಿ ಅಥವಾ ಸಾಮರ್ಥ್ಯ ಹೊಂದಿರುವುದಿಲ್ಲ. ಸಂವಹನ ನಡೆಸಲು ಮೂರನೇ ವ್ಯಕ್ತಿಯ ಸಹಾಯ ಅಗತ್ಯವಾಗಿರುತ್ತದೆ. **ಸತ್ತವರ ಜೊತೆಗಿನ ಅಂತಹ ಸಂಪರ್ಕ, ಕಷ್ಟದಲ್ಲಿರುವ ಜೀವಂತ ವ್ಯಕ್ತಿಗಳಿಗೆ ಸಹಾಯವಾಗಬಲ್ಲದೇ?** ಈ ಅತೀಂದ್ರಿಯ ಶಕ್ತಿಗಳು, ಬಡವರು ಶ್ರೀಮಂತರಾಗಲು ಸಹಾಯ ಮಾಡುವುದೇ? ಅಥವಾ ವ್ಯಾಪಾರ ಸಲಹೆಗಾರರಂತೆ, ಯಾವ ಉದ್ಯಮವನ್ನು, ವೃತ್ತಿಯನ್ನು, ವ್ಯಾಪಾರವನ್ನು ಆ ಬಡ ಮನುಷ್ಯ ಕೈಗೊಳ್ಳಬೇಕೆಂಬ ಸಲಹೆ ನೀಡುವುದೇ? ಈ ಅತೀಂದ್ರಿಯ ಶಕ್ತಿಯು ಕಾಯಿಲೆಯಿಂದ ನರಳುತ್ತಿರುವ ರೋಗಿಯನ್ನು, ವೈದ್ಯಕೀಯ ಮಧ್ಯಪ್ರವೇಶ ಸಹಿತ ಅಥವಾ ರಹಿತ, ಗುಣಪಡಿಸಲು ಸಾಧ್ಯವಾಗುವುದೇ?

ನಾನು ಈ ಪ್ರಶ್ನೆಯನ್ನು ಅತೀಂದ್ರಿಯ ಶಕ್ತಿಗಳಲ್ಲಿ ನಂಬಿಕೆ ಇಟ್ಟವರಲ್ಲಿ ಕೇಳಿದಾಗ, ಅವರು ಒಬ್ಬ ವ್ಯಕ್ತಿಯ ಉದಾಹರಣೆಯನ್ನು ನನಗೆ ವಿವರಿಸಿದರು. ಆ ವ್ಯಕ್ತಿ ಇವರಲ್ಲಿ ಪ್ರಶ್ನೆ ಕೇಳಲು ಬಂದಾಗ, ಇವರು ಪ್ರಶ್ನೆಗೆ ಉತ್ತರ ನೀಡುವುದಕ್ಕಿಂತ ಮುಂಚೆ ಕೆಲವು ನಿಮಿಷ ಯೋಗ ಸಮಾಧಿಗೆ ಹೋಗಿ ಬಂದರಂತೆ. ಪ್ರಶ್ನೆಯೆಂದರೆ: "ನನ್ನ ಪತ್ನಿಯು ಒಂದು ವಾರದ ಹಿಂದೆ ನಿಧನರಾಗಿದ್ದು, ಅವಳ ಒಡವೆಗಳು ಕಳುವಾಗಿದೆಯೆಂದು ನನಗೆ ತಿಳಿಯಿತು. ಅವಳ (ಈಗ ತೀರಿ ಹೋದ ನನ್ನ ಪತ್ನಿ) ಒಡವೆಗಳು ಕಳುವಾಗಿವೆಯೋ ಅಥವಾ ಅವಳು ಅವುಗಳನ್ನು ಬೇರೆ ಎಲ್ಲಾದರೂ ಬಚ್ಚಿಟ್ಟಿದ್ದಾಳೋ ಎಂಬುದನ್ನು ಹೇಳಬಲ್ಲಳೇ?"

ಅದಕ್ಕೆ ಉತ್ತರವಾಗಿ ಈ ಸಾಧಕ ಹೇಳುತ್ತಾರೆ: 'ನಿಮ್ಮ ಹೆಂಡತಿಯ ಪ್ರೇತಾತ್ಮವು ಇಲ್ಲಿದೆ. ಅದು ನಿಮ್ಮನ್ನು ಮಲಗುವ ಕೋಣೆಯ ಅಲ್ಮೇರಾದ ಅಡಿಯಲ್ಲಿ ಇರುವ ಶೆಲ್ಫ್ ಅನ್ನು ನೋಡುವಂತೆ ಕೇಳುತ್ತಿದೆ'. ಆಶ್ಚರ್ಯ. ಅಲ್ಲಿ ನೋಡಿದಾಗ ಆ ಒಡವೆಗಳು ಸಿಕ್ಕಿದವು.

ಕುತೂಹಲಕಾರಿಯಾಗಿ, ಮನುಷ್ಯ ಜೀವನದ ಈ ಪವಾಡಾತ್ಮಕ ಹಾಗೂ ನಿಗೂಢಾತ್ಮಕ ಆಯಾಮಗಳ ಬಗ್ಗೆ ಬರೆಯುವಾಗ, ನಟವರ್ ಸಿಂಗ್ ಅವರು ಮೈಸೂರಿನ ಕೃಷ್ಣಮೂರ್ತಿಪುರಂ ಹಾಗೂ ಯಾದವಗಿರಿಯಲ್ಲಿ ವಾಸಿಸುತ್ತಿದ್ದ ಸುಪ್ರಸಿದ್ಧ ಆಂಗ್ಲ ಭಾಷಾ ಲೇಖಕ ಹಾಗೂ ಕಾದಂಬರಿಕಾರ ದಿವಂಗತ ಆರ್.ಕೆ.ನಾರಾಯಣ್ ಅವರ ಬಗ್ಗೆ ಪುಸ್ತಕದಲ್ಲಿ ಒಂದು ಅಡಿ ಟಿಪ್ಪಣಿಯನ್ನು ಬರೆದಿದ್ದಾರೆ. ಆ ಅಡಿ ಟಿಪ್ಪಣಿಯಲ್ಲಿ ನಟವರ್ ಸಿಂಗ್ ಏನು ಬರೆದಿದ್ದಾರೆ ಎಂಬುದನ್ನು ಇಲ್ಲಿ ನಮೂದಿಸುತ್ತೇನೆ:

"ಮಾಲ್ಗುಡಿ ಕಾದಂಬರಿಗಳ ಲೇಖಕರಾದ, 96 ವರ್ಷ ಬದುಕಿದ್ದ ಆರ್.ಕೆ.ನಾರಾಯಣ್ ಅವರು 1940 ರಲ್ಲಿ ತಮ್ಮ 30ನೇ ವಯಸ್ಸಿನಲ್ಲಿ ತೀರಿ ಹೋದ ತಮ್ಮ ಪತ್ನಿಯ ಜೊತೆ ಪ್ರತಿದಿನ ಸಂಪರ್ಕದಲ್ಲಿದ್ದರು ಎಂಬುದನ್ನು ಅವರು ಸ್ವತಃ ಅವರ ಕಾದಂಬರಿ "The English Teacher" (ಆಂಗ್ಲ ಶಿಕ್ಷಕ) ದಲ್ಲಿ ಪರೋಕ್ಷವಾಗಿ ಉಲ್ಲೇಖಿಸಿದ್ದಾರೆ."

ನಾನು ಆ ಪುಸ್ತಕವನ್ನು ಓದಿದ್ದೇನೆ. ಆ ನಂತರ ನಾನು ನನ್ನ ಮಿತ್ರನ ಸಹಾಯದಿಂದ ಮೃತ ವ್ಯಕ್ತಿಯ ಜೊತೆ ಸಂವಹನ ನಡೆಸಲು ಪ್ರಯತ್ನಿಸಿದೆ. ನನ್ನ ಸ್ನೇಹಿತ ಮತ್ತು ನಾನು ನಮಗೆ ಪರಿಚಯವಿದ್ದ, ಆದರೆ ತೀರಿ ಹೋದ ಮಿತ್ರನ ಆತ್ಮವನ್ನು (Spirit) ಕರೆದು ಸುಣ್ಣದ ಕಲ್ಲಿನ ಸ್ಲೇಟ್ ಮತ್ತು ಪೆನ್ಸಿಲ್ ಬಳಸಿ, ಅಲೌಕಿಕ ಶಕ್ತಿಯು, ನಮ್ಮ ಬೆರಳುಗಳ ಮೂಲಕ ನಮ್ಮ ಪ್ರಶ್ನೆಗಳಿಗೆ ಸ್ಲೇಟಿನ ಮೇಲೆ ಉತ್ತರ ಬರೆಯುವಂತೆ ಮಾಡಿದೆವು! ನಾವು ಅದು ಭಾವನಾತ್ಮಕವಾದ ವಿಷಯ ಎಂಬುದನ್ನು ಕಂಡುಕೊಂಡೆವು. ಹುಚ್ಚು ನಂಬಿಕೆ.

ಆದಾಗ್ಯೂ ಅತೀಂದ್ರಿಯ ಶಕ್ತಿಗಳನ್ನು ಸಿದ್ಧಿಸಿಕೊಂಡ ಮನುಷ್ಯರು ಭಾರತದ ಹಲವಾರು ಭಾಗಗಳಲ್ಲಿ ಈಗಲೂ ಸಹ ಕಂಡು ಬರುವುದು ಸಾಮಾನ್ಯವಾಗಿದೆ ಹಾಗೂ ಇವತ್ತಿಗೂ ಪ್ರಸ್ತುತವಾಗಿದೆ. ಇವರು ಮೋಸ ಮಾಡುವುದು ಸರ್ವೆ ಸಾಮಾನ್ಯ. ನಾನು ಈಗಾಗಲೇ ಈ ನಂಬಿಕೆಯ ಸುತ್ತ ಗಿರಕಿ ಹೊಡೆಯುವ ಕನ್ನಡ ಚಿತ್ರ "ಕಾಂತಾರ"ದ ಬಗ್ಗೆ ಹೇಳಿದ್ದೇನೆ. ಕೊಡಗಿನಲ್ಲಿ 600 ವರ್ಷಗಳಿಗೂ ಹೆಚ್ಚಿನ ಕಾಲದ ಪೂರ್ವಜರ ಮನೆಯಿದ್ದು ಅಲ್ಲಿ "ನಾಗ ಪೂಜೆ"ಯನ್ನು ಮಾಡಲಾಗುತ್ತದೆ. ಒಂದು ವರ್ಷ ಓರ್ವ ಮಹಿಳೆಯ ಮೇಲೆ ಸರಕ್ಕನೆ ಅತೀಂದ್ರಿಯ ಶಕ್ತಿ ಪ್ರವೇಶಿಸಿ, ಅಲ್ಲಿ ನೆರೆದಿದ್ದವರನ್ನೆಲ್ಲಾ ಬೆಚ್ಚಿ ಬೀಳಿಸಿ, ಭಯಭೀತರಾಗುವಂತೆ ಮಾಡಿತು. ಕೆಲವು ನಿಮಿಷಗಳ ಬಳಿಕ ಆ ಮಹಿಳೆ ಸಾಮಾನ್ಯ ಸ್ಥಿತಿಗೆ ಮರಳಿದಳು. ಪ್ರಶ್ನೆ : ಅದ್ಯಾವ ಶಕ್ತಿ (Spirit) ಅವಳನ್ನು ಆವರಿಸಿಕೊಂಡಿತು?

ಕೊನೆಗೆ, ಮನುಷ್ಯನು ಯಾವುದೇ ತರಹದ ಶಕ್ತಿ ಹೊಂದಿರಲಿ– ಸಂಪತ್ತಿನ ಶಕ್ತಿ, ದೈಹಿಕ ಶಕ್ತಿ, ರಾಜಕೀಯ ಶಕ್ತಿ, ದೈವಾಂಶ ಶಕ್ತಿ, ಭೂತ ಅಥವಾ ಪ್ರೇತಾತ್ಮಗಳ ಶಕ್ತಿ – ಎಂತಹವರು ಸಹ ಒಂದಲ್ಲಾ ಒಂದು ದಿನ ಸಾಯಲೇ ಬೇಕು. ಮತ್ತು ಅವನು ಯಾವ ರೀತಿ ಸಾಯುತ್ತಾನೆ ಎಂಬುದು ಸಹ ಆತನಿಗೆ ಗೊತ್ತಿರುವುದಿಲ್ಲ– ಕಾಯಿಲೆಯಿಂದ, ಅಪಘಾತ, ಆತ್ಮಹತ್ಯೆ ಇಲ್ಲವೆ ಕೊಲೆ. **ಅದುವೇ ಹುಟ್ಟು ಮತ್ತು ಸಾವಿನ ನಡುವೆ ಇರುವ ನಿಗೂಢತೆ. ಆದ್ದರಿಂದ, ಮೂಲಭೂತ ಪ್ರಶ್ನೆ ಏನೆಂದರೆ ಈ ಎಲ್ಲಾ ಶಕ್ತಿಗಳಿಂದ ಏನು ಪ್ರಯೋಜನ?**

ಹೌದು, ಜೀವಂತವಾಗಿರುವಾಗ ಈ ಎಲ್ಲಾ ಶಕ್ತಿಗಳು ನಮಗೆ ಸಹಾಯ ಮಾಡುತ್ತವೆ. ಅಧಿಕಾರ ಮತ್ತು ಆಡಂಬರದಿಂದ ಕೂಡಿದ ಆರಾಮದಾಯಕ, ಅದ್ದೂರಿಯಾದ ಮತ್ತು ನಿರ್ಭೀತ ಜೀವನವನ್ನು ನಾವು ಸಾಗಿಸಲು ಸಹಾಯ ಮಾಡಬಹುದು. ಒಳ್ಳೆಯದು, ಆದರೆ ಸತ್ತ ನಂತರ ನಮಗೆ ಏನಾಗುತ್ತದೆ ಎಂಬುದರ ಬಗ್ಗೆ ಯಾರು ತಲೆಕೆಡಿಸಿಕೊಳ್ಳುತ್ತಾರೆ?


(ಮೂಲ ಇಂಗ್ಲಿಷ್ ಲೇಖನದ ಕನ್ನಡ ಅನುವಾದ)

Voice @starofmysore.com

ಚಾಮರಾಜ ಕ್ಷೇತ್ರದಲ್ಲಿ ಮಾಜಿ ಶಾಸಕ ವಾಸುಗೆ ಕಾಂಗ್ರೆಸ್ ಟಿಕೆಟ್: ಮೊಯ್ಲಿ

ಮೈಸೂರು,ಫೆ.4(ಎಂಟಿವೈ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮೈಸೂರಿನ ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಮಾಜಿ ಶಾಸಕ ವಾಸು ಅವರಿಗೆ ಟಿಕೆಟ್ ನೀಡಲಾಗುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿ ತಿಳಿಸಿದ್ದಾರೆ.

ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಮಾಜಿ ಶಾಸಕ ವಾಸು ನಿವಾಸಕ್ಕೆ ಭೇಟಿ ನೀಡಿ, ಉಪಾಹಾರ ಸೇವಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ವಾಸು ಅವರು ಚಾಮರಾಜ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಮೂಲ ಕಾಂಗ್ರೆಸಿಗರನ್ನು ಕಾಯುವುದೇ ನನ್ನ ಕೆಲಸ. ನಾನು ಮತ್ತು ಮಾಜಿ ಶಾಸಕ ವಾಸು ಮೂಲ ಕಾಂಗ್ರೆಸ್ಸಿಗರಾಗಿದ್ದೇವೆ. ಯಾರ ಟಿಕೆಟ್ ತಪ್ಪಿಸಲು ಸಾಧ್ಯ ಇಲ್ಲ. ಮಾಜಿ ಶಾಸಕ ವಾಸು ಅವರಿಗೆ ಟಿಕೆಟ್ ಖಚಿತ. ಇವರಿಗೆ ಟಿಕೆಟ್ ತಪ್ಪಿಸಲು ಸಾಧ್ಯವೇ ಇಲ್ಲ ಎಂದರು.




ವಾಸು ಪ್ರಬಲ ಅಭ್ಯರ್ಥಿ. ಮೊದಲ ಪಟ್ಟಿಯಲ್ಲಿ ವಾಸು ಅವರ ಹೆಸರು ಇರಲಿದೆ. ಸಿದ್ದರಾಮಯ್ಯ ಬಣ ಇಲ್ಲ, ಮತ್ತೊಂದು ಬಣ ಇಲ್ಲ. ಇರುವುದು ಒಂದೇ ಅದುವೇ ಕಾಂಗ್ರೆಸ್ ಬಣ. ಶಾಸಕ ತನ್ವೀರ್ ಸೇಠ್ ಅವರು ಅನೇಕ ಬಾರಿ ಶಾಸಕರಾಗಿ, ಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಅವರ ಬೇರು ಕಾಂಗ್ರೆಸ್‌ನಲ್ಲಿ ಬಲವಾಗಿದೆ ಎಂದರು.

ಕಾಂಗ್ರೆಸ್‌ನಲ್ಲಿ ಬಣಗಳಿಲ್ಲ: ರಾಜ್ಯ ಕಾಂಗ್ರೆಸ್‌ನಲ್ಲಿ ಯಾವುದೇ ಬಣಗಳಿಲ್ಲ. ಯಾರಿಗೆ ಅರ್ಹತೆ ಇದೆಯೋ ಅವರಿಗೆ ಮುಂದಿನ ವಿಧಾನಸಭಾ ಚುನಾವಣೆಯ ಟಿಕೆಟ್ ದೊರೆಯಲಿದೆ ಎಂದು ಮೊಯ್ಲಿ ತಿಳಿಸಿದ್ದಾರೆ. ನಮ್ಮಲ್ಲಿ ಸಾವಿರಾರು ಬಣ ಇದೆ. ಸಣ್ಣ ಸಣ್ಣ ನದಿಗಳು ಸೇರಿ ಸರೋವರಕ್ಕೆ ಸೇರುತ್ತವೆ. ಸಮುದ್ರ ಸೇರಿದ ಕೂಡಲೇ ಯಾವ ಬಣವೂ ಇರುವುದಿಲ್ಲ. ಕೆಲವು ಸಣ್ಣ ಸಣ್ಣ ನದಿಗಳು ಬತ್ತಿ ಹೋಗುತ್ತವೆ. ಆದರೆ ಕಾಂಗ್ರೆಸ್ ಮಹಾಸಾಗರ ಇದ್ದಂತೆ. ಹೆಚ್ಚು ಶಕ್ತಿಯುತವಾಗಿದೆ. ನನಗೆ ಯಾವುದೇ ಅಸಮಾಧಾನ ಇಲ್ಲ. ಪಕ್ಷದ ಕೇಂದ್ರಿಯ ಚುನಾವಣೆ ಸಮಿತಿಯಲ್ಲಿ ರಾಜ್ಯದಿಂದ ನಾನೊಬ್ಬನೇ ಸದಸ್ಯ. ಸಕ್ರಿಯವಾಗಿ ಚಟುವಟಿಕೆಯಲ್ಲಿ ಭಾಗಿಯಾಗಿದ್ದೇನೆ ಎಂದು ತಿಳಿಸಿದರು.

ಚುನಾವಣೆ ಪ್ರಣಾಳಿಕೆ ಪ್ರದೇಶವಾರು ಸಿದ್ಧವಾಗುತ್ತಿದೆ. ಡಾ.ಪರಮೇಶ್ವರ್ ಅವರ ಅಧ್ಯಕ್ಷತೆಯಲ್ಲಿ ಎಲ್ಲವೂ ಚೆನ್ನಾಗಿ ನಡೆಯುತ್ತಿದೆ. ಅವರು ರಾಜೀನಾಮೆ ಕೊಟ್ಟಿಲ್ಲ. ನಾನು ಅವರ ಜತೆಗೆ ಮಾತನಾಡಿದ್ದೇನೆ ಎಂದರು.

ವಾಸು ಅವರಿಗೆ ಟಿಕೆಟ್ ಸಿಗಲಿದೆ



ಮುಂಬರುವ ಚುನಾವಣೆಯಲ್ಲಿ ಚಾಮರಾಜ ಕ್ಷೇತ್ರದಲ್ಲಿ ಮಾಜಿ ಶಾಸಕ ವಾಸು ಅವರಿಗೆ ಕಾಂಗ್ರೆಸ್ ಟಿಕೆಟ್ ಸಿಗಲಿದೆ ಎಂದು ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದ ಕೆ.ಹರೀಶ್‌ಗೌಡ ಅಚ್ಚರಿ ಹೇಳಿಕೆ ನೀಡಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮಾಜಿ ಶಾಸಕ ವಾಸು ಕ್ಷೇತ್ರದ ಹಾಗೂ ಪಕ್ಷದ ಹಿರಿಯ ನಾಯಕರಾಗಿದ್ದಾರೆ. 4 ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾರೆ. ಚಾಮರಾಜ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ನಮ್ಮ ನಾಯಕರಲ್ಲಿ ವಾಸು ಅವರು ಕೂಡ ಒಬ್ಬರು. ಚುನುವಣೆಯಲ್ಲಿ ವಾಸು ಅವರಿಗೆ ಟಿಕೆಟ್ ಸಿಗುತ್ತದೆ ಎಂಬ ಭಾವನೆ ನಮ್ಮದಾಗಿದೆ. ವಾಸು ಅವರಿಗಾಗಲೀ ಅಥವಾ ಬೇರೆಯಾರಿಗಾದರೂ ಟಿಕೆಟ್ ಕೊಟ್ಟರು ಕಾಂಗ್ರೆಸ್ ಗೆಲ್ಲಿಸಲು ಕೆಲಸ ಮಾಡುತ್ತೇವೆ. ಈ ಕ್ಷೇತ್ರದಲ್ಲಿ ಮಾತ್ರವಲ್ಲ, ಮೈಸೂರಿನ ಎಲ್ಲ ಕ್ಷೇತ್ರದಲ್ಲೂ ಕಾಂಗ್ರೆಸ್ ಗೆಲುವಿಗಾಗಿ ದುಡಿಯುತ್ತೇನೆ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 5 ಭಾನುವಾರ 2023


ಸಂಪುಟ: 43 | ಸಂಚಿಕೆ: 288 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕೆಬಿಜಿಯವರ
ಛೂಮಂತ್ರ... ಛೂಮಂತ್ರ...



ಮನುಷ್ಯನ ಹುಟ್ಟು, ಬದುಕು ಮತ್ತು ಸಾವಿನ ನಿರರ್ಥಕತೆ

■ ಪುಟ–4

ಕಾರ್ಯಕರ್ತರ ಮೂಲಕವೇ ಬಿಜೆಪಿ ಅಭ್ಯರ್ಥಿಗಳ ಆಯ್ಕೆ

ಪ್ರತಿ ಕ್ಷೇತ್ರದಿಂದ ಮೂವರು ಅಭ್ಯರ್ಥಿಗಳ ಶಿಫಾರಸ್ಸು

ರಾಜ್ಯ ಕೋರ್ ಕಮಿಟಿಯಲ್ಲಿ ಪರಿಶೀಲನೆ; ಅಂತಿಮವಾಗಿ ಕೇಂದ್ರ ಚುನಾವಣಾ ಸಮಿತಿಯಲ್ಲಿ ನಿರ್ಧಾರ

ಅಂತಿಮವಾಗಿ ಗೆಲುವೇ ಅಭ್ಯರ್ಥಿ ಆಯ್ಕೆ ಮಾನದಂಡ

ಬೆಂಗಳೂರು, ಫೆ.4(ಕೆಎಂಶಿ)–ಮುಂಬರುವ ವಿಧಾನ ಸಭಾ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಹೊಣೆಯನ್ನು ಕಾರ್ಯಕರ್ತರ ಹೆಗಲಿಗೆ ಬಿಜೆಪಿ ಹಾಕಿದೆ.

ಹಾಲಿ ವಿಧಾನಸಭಾ ಸದಸ್ಯರಿದ್ದರೂ ಕೂಡ ಪ್ರತಿ ಕ್ಷೇತ್ರದಿಂದ ಮೂವರ ಹೆಸರನ್ನು ತಾಲೂಕು ಘಟಕ ಜಿಲ್ಲಾ ಘಟಕಕ್ಕೆ ಶಿಫಾರಸ್ಸು ಮಾಡಬೇಕು. ತಾಲೂಕು ಘಟಕಗಳು ಕಳುಹಿಸುವ ಪಟ್ಟಿಯನ್ನು ಜಿಲ್ಲಾ ಘಟಕ ಮತ್ತೊಮ್ಮೆ ಪರಿಶೀಲಿಸಿ, ರಾಜ್ಯ ಘಟಕಕ್ಕೆ ರವಾನೆ ಮಾಡಿದ ನಂತರ ಕೋರ್ ಕಮಿಟಿ ಅಭ್ಯರ್ಥಿಗಳ ಆಯ್ಕೆಯ ಕಸರತ್ತು ನಡೆಸಲಿದೆ.

ಕಾರ್ಯಕರ್ತರು ಮಾಡಿದ ಶಿಫಾರಸ್ಸನ್ನು ರಾಜ್ಯ ಕೋರ್ ಕಮಿಟಿ ಪರಿಶೀಲಿಸಿ, ಪಕ್ಷದ ಕೇಂದ್ರ ಚುನಾವಣಾ ಸಮಿತಿಗೆ ಶಿಫಾರಸ್ಸು ಮಾಡಲಿದೆ. ಕೇಂದ್ರ ಹಾಗೂ ರಾಜ್ಯ ಬಿಜೆಪಿ ಘಟಕ ಮತ್ತು ಆರ್‌ಎಸ್‌ಎಸ್ ಈಗಾಗಲೇ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲೂ ಚುನಾವಣಾ ಪೂರ್ವ ಸಮೀಕ್ಷೆ ಪೂರ್ಣ ಗೊಳಿಸಿ, ಏಳು ವರದಿಗಳನ್ನು ನೀಡಿವೆ. ಕಾರ್ಯಕರ್ತರು ಮಾಡಿದ ಶಿಫಾರಸ್ಸು ಮತ್ತು ಪೂರ್ವ ಚುನಾವಣಾ ಸಮೀಕ್ಷೆಗಳನ್ನು ಮುಂದಿಟ್ಟುಕೊಂಡು ಕೇಂದ್ರ ಚುನಾವಣಾ ಸಮಿತಿ ಅಭ್ಯರ್ಥಿಗಳ ಆಯ್ಕೆ ನಡೆಸಲಿದೆ. ಗೆಲುವೇ ಮಾನದಂಡ ಎಂಬ ಆಧಾರದ ಮೇಲೆ ಕರ್ನಾಟಕಕ್ಕೆ ಕರ್ನಾಟಕವೇ ಮಾನದಂಡ. ಇಲ್ಲಿಗೆ ಇತರ ರಾಜ್ಯಗಳಲ್ಲಿ ಅನುಸರಿಸಿದ ಚುನಾವಣಾ ಕ್ರಮಗಳನ್ನು ಬಲವಂತವಾಗಿ ಹೇರುವುದಿಲ್ಲ.

ಉತ್ತರ ಭಾರತದ ರಾಜ್ಯಗಳಿಗೂ ಕರ್ನಾಟಕದ ಪರಿ ಸ್ಥಿತಿಗೂ ಅಜಗಜಾಂತರ ವ್ಯತ್ಯಾಸವಿದೆ. ಜಾತಿ ಹಾಗೂ ಕುಟುಂಬ ರಾಜಕಾರಣಕ್ಕೆ ಸಾಕಷ್ಟು ಮನ್ನಣೆ ಇದ್ದು, ಅದಕ್ಕೆ ವರಿಷ್ಠರು ಮಣಿಯಬೇಕಾಗುತ್ತದೆ.

ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್, ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಅರುಣ್‌ಸಿಂಗ್, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಪ್ರಮುಖರ ಕೋರ್ ಕಮಿಟಿ ಸಭೆಯಲ್ಲಿ ಕೆಲವು ಮಹತ್ವದ ತೀರ್ಮಾನ ಕೈಗೊಂಡಿದೆ. ಕೋರ್ ಕಮಿಟಿ ತೀರ್ಮಾನದಂತೆ ತಾಲೂಕಿನ ಪ್ರಮುಖ ಪದಾಧಿಕಾರಿಗಳು ಮುಖಂಡರು ಸಭೆ ನಡೆಸಿ, ಅಭ್ಯರ್ಥಿಗಳ ಆಯ್ಕೆ ಮಾಡಬೇಕು. ಕೇಂದ್ರ ಘಟಕದ ಸೂಚನೆ ಮೇರೆಗೆ ಕೋರ್ ಕಮಿಟಿ ಇಂತಹ ತೀರ್ಮಾನಕ್ಕೆ ಬಂದು ಕಾರ್ಯಕರ್ತರಿಗೆ ದೊಡ್ಡ ಮನ್ನಣೆ ನೀಡಿದೆ. ಅಭ್ಯರ್ಥಿಗಳ ಆಯ್ಕೆ, ಪ್ರತಿಪಕ್ಷಗಳಾದ ಕಾಂಗ್ರೆಸ್ ಹಾಗೂ ಜೆಡಿಎಸ್‌ನ್ನು ಚುನಾವಣೆಯಲ್ಲಿ ಮಣಿಸುವ ಸಂಬಂಧ ಸಭೆ ಸುದೀರ್ಘ ಚರ್ಚೆ ನಡೆಸಿದೆ. ರಾಜ್ಯ ಇತಿಹಾಸದಲ್ಲೇ ಕೆಲವು ಕ್ಷೇತ್ರಗಳಲ್ಲಿ ಬಿಜೆಪಿ ಇದುವರೆಗೂ ಬಾವುಟ ಹಾರಿಸಿಲ್ಲ. ಇಂತಹ ಕಡೆ ಅನ್ಯಪಕ್ಷಗಳು ಇಲ್ಲವೆ ವರ್ಚಸ್ವಿ ನಾಯಕರನ್ನು ಸೆಳೆಯುವ ಅಧಿಕಾರವನ್ನು ಕೋರ್ ಕಮಿಟಿ ಜಿಲ್ಲಾ ಉಸ್ತುವಾರಿ ಹಾಗೂ ಪ್ರಮುಖ ನಾಯಕರಿಗೆ ನೀಡಿದೆ. ವಿಧಾನಸಭಾ ಚುನಾವಣಾ ವೇಳಾಪಟ್ಟಿ ಪ್ರಕಟವಾಗುವುದಕ್ಕೂ ಮುನ್ನವೇ ಪ್ರಧಾನಿ ನರೇಂದ್ರ ಮೋದಿ ಅವರನ್ನು ರಾಜ್ಯದ ವಿವಿಧ ಭಾಗಗಳಲ್ಲಿ ರೋಡ್ ಶೋ ನಡೆಸಲು ವ್ಯವಸ್ಥೆಗೊಳಿಸುವುದು ಮತ್ತು ಬೃಹತ್ ಕಾರ್ಯಕ್ರಮಗಳನ್ನು ನೆರವೇರಿಸಿ, ಮತದಾರರನ್ನು ಪಕ್ಷಕ್ಕೆ ಸೆಳೆಯಲು ಸಭೆ ಸುದೀರ್ಘ ಚರ್ಚೆ ಮಾಡಿದೆ. ನಿನ್ನೆ ರಾತ್ರಿ ಕೋರ್ ಕಮಿಟಿಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಇಂದು ಅರಮನೆ ಆವರಣದಲ್ಲಿ ನಡೆದ ವಿಶೇಷ ಕಾರ್ಯಕಾರಣಿ ಸಭೆಗೂ ಮಾಹಿತಿ ನೀಡಿ, ಮತ್ತೆ ನಾವು ಕರ್ನಾಟಕದಲ್ಲಿ ಅಧಿಕಾರವನ್ನು ಹಿಡಿಯಲೇಬೇಕೆಂಬ ಪಣ ತೊಟ್ಟಿದೆ. ಸಭೆಯಲ್ಲಿ ಆಡಳಿತ ವಿರೋಧಿ ಅಲೆಯನ್ನು ನಿವಾರಿಸಿಕೊಳ್ಳುವುದು ಅನಿವಾರ್ಯವಾಗಿದೆ ಎಂಬ ಎಚ್ಚರಿಕೆ ಸಂದೇಶ ನೀಡಲಾಗಿದೆ.

ರಾಜ್ಯದ ಬಿಜೆಪಿ ಚುನಾವಣಾ ಉಸ್ತುವಾರಿ ಧರ್ಮೇಂದ್ರ ಪ್ರಧಾನ್

ಸಹ ಉಸ್ತುವಾರಿಗಳಾಗಿ ಮನ್‌ಸುಖ್ ಮಾಂಡವ್ಯ, ಅಣ್ಣಾಮಲೈಗೂ ಜವಾಬ್ದಾರಿ



ಪ್ರಧಾನ್


ಮನ್‌ಸುಖ್


ಅಣ್ಣಾಮಲೈ

ಬೆಂಗಳೂರು, ಫೆ. 4(ಕೆಎಂಶಿ)– ಪಕ್ಷದ ರಾಜ್ಯ ನಾಯಕರ ಆಳ–ಅಗಲ ಅರಿತಿರುವ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್‌ಗೆ ಮತ್ತೆ ಕರ್ನಾಟಕ ವಿಧಾನ ಸಭಾ ಚುನಾವಣಾ ಉಸ್ತುವಾರಿ ಹೊಣೆಯನ್ನು ಬಿಜೆಪಿ ವಹಿಸಿದೆ. ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ, ಈ ಸಂಬಂಧ ಆದೇಶ ಹೊರಡಿಸಿರುವುದಲ್ಲದೆ, ಧರ್ಮೇಂದ್ರ ಪ್ರಧಾನ್‌ಗೆ ನೆರವಾಗುವ ಸಲುವಾಗಿ ಸಹ ಉಸ್ತುವಾರಿಯಾಗಿ ತಮಿಳುನಾಡು ಬಿಜೆಪಿ ರಾಜ್ಯಾಧ್ಯಕ್ಷ, ಮಾಜಿ ಐಪಿಎಸ್ ಅಧಿಕಾರಿ ಕೆ.ಅಣ್ಣಾಮಲೈ ಹಾಗೂ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಮನ್‌ಸುಖ್ ಎಲ್.ಮಾಂಡವ್ಯ ಅವರನ್ನು ನೇಮಿಸಿದ್ದಾರೆ. ಈ ಹಿಂದೆ ರಾಜ್ಯ ಸಹ ಉಸ್ತುವಾರಿ, ಉಸ್ತುವಾರಿಯಾಗಿ ನಂತರ ಚುನಾವಣಾ ಉಸ್ತುವಾರಿ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದ ಅನುಭವಿ ಪ್ರಧಾನ್ ಅವರಿಗೆ ಜವಾಬ್ದಾರಿ ವಹಿಸಲಾಗಿದೆ. 2010ರಿಂದ ಇಲ್ಲಿಯವರೆಗೂ ಒಂದಲ್ಲ ಒಂದು ರೀತಿ ರಾಜ್ಯದಲ್ಲಿ ಪಕ್ಷದ ಆಗು ಹೋಗುಗಳಲ್ಲಿ ಕೇಂದ್ರ ಘಟಕ ▶ 8ನೇ ಪುಟಕ್ಕೆ

ಏ.10–12ರೊಳಗೆ ಚುನಾವಣೆ



ಬೆಂಗಳೂರು: ಕರ್ನಾಟಕದಲ್ಲಿ ಏಪ್ರಿಲ್ 10ರಿಂದ 12ರೊಳಗೆ ವಿಧಾನಸಭಾ ಚುನಾವಣೆ ನಡೆಯುವ ಸಾಧ್ಯತೆಯಿದೆ ಎಂದು ಬಿಜೆಪಿ ಹಿರಿಯ ಮುಖಂಡ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಇಂದಿಲ್ಲಿ ಭವಿಷ್ಯ ನುಡಿದಿದ್ದಾರೆ. ಕರ್ನಾಟಕ ಸರ್ಕಾರದ ಸಾಧನೆಗಳನ್ನು ಆಧರಿಸಿ ರಾಜ್ಯದಲ್ಲಿ ಬಿಜೆಪಿ ಸಂಪೂರ್ಣ ಬಹುಮತದೊಂದಿಗೆ ಸ್ವತಂತ್ರವಾಗಿ ಅಧಿಕಾರಕ್ಕೆ ಬರಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಹಣ, ಬಲ ಮತ್ತು ಕೋಮು ರಾಜಕಾರಣವನ್ನು ಬಳಸಿಕೊಂಡು ಕಾಂಗ್ರೆಸ್ ಅಧಿಕಾರಕ್ಕೆ ಬರುವ ದಿನಗಳು ಕಳೆದು ಹೋಗಿವೆ. ಬಿಜೆಪಿಯಲ್ಲಿ ಯಾವುದೇ ಗೊಂದಲವಿಲ್ಲ, ಎಲ್ಲರೂ ಒಗ್ಗಟ್ಟಾಗಿದ್ದೇವೆ. ಮಹಿಳೆಯರು, ಯುವಜನರ ಬೆಂಬಲ ಪಡೆಯುವತ್ತ ವಿಶೇಷ ಗಮನಹರಿಸುವ ಮೂಲಕ ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಾರ್ಯಕ್ರಮಗಳನ್ನು ಮನೆ–ಮನೆಗೆ ಕೊಂಡೊಯ್ಯಲು ಕಾರ್ಯಕರ್ತರು ಮತ್ತು ಮುಖಂಡರು ಶ್ರಮ ವಹಿಸಬೇಕು ಎಂದು ಯಡಿ ಯೂರಪ್ಪ ಮನವಿ ಮಾಡಿದ್ದಾರೆ.

ಏಪ್ರಿಲ್ 10–12ರ ಮೊದಲು ವಿಧಾನ ಸಭಾ ಚುನಾವಣೆಯನ್ನು ನಿರೀಕ್ಷಿಸಲಾಗಿದೆ. ಈ ಚುನಾವಣೆಯಲ್ಲಿ 130–140 ಸ್ಥಾನಗಳನ್ನು ಗೆಲ್ಲುವ ಮೂಲಕ ಸ್ಪಷ್ಟ ಬಹುಮತದೊಂದಿಗೆ ಬಿಜೆಪಿ ಸರ್ಕಾರದ ರಚನೆಯನ್ನು ಯಾರೂ ತಡೆಯಲು ಸಾಧ್ಯವಿಲ್ಲ ಎಂದು ಯಡಿಯೂರಪ್ಪ ಹೇಳಿದ್ದಾರೆ. ಮುಂದಿನ ಮುಖ್ಯಮಂತ್ರಿ ನಾವೇ ಎಂದು ಹೇಳಿಕೊಳ್ಳುತ್ತಿರುವ ಕಾಂಗ್ರೆಸ್ ನಾಯಕರಾದ ಸಿದ್ದರಾಮಯ್ಯ ಮತ್ತು ಡಿ.ಕೆ ಶಿವಕುಮಾರ್ ಅವರನ್ನು ತರಾಟೆಗೆ ತೆಗೆದುಕೊಂಡ ಯಡಿಯೂರಪ್ಪ, ರಾಹುಲ್ ಗಾಂಧಿ ನಿಮ್ಮ ನಾಯಕನಾ ನಮ್ಮ ಪಕ್ಷದಲ್ಲಿ ಪ್ರಧಾನಿ ಮೋದಿಯಂತಹ ಪ್ರಬಲ ನಾಯಕ ಇದ್ದಾರೆ. ನರೇಂದ್ರ ಮೋದಿ ಅವರು ಜಾಗತಿಕವಾಗಿ ಪ್ರೀತಿ ಮತ್ತು ಗೌರವಕ್ಕೆ ಪಾತ್ರರಾಗಿದ್ದಾರೆ ಎಂದರು.

ಪ್ರಕಟಿತ ಜೆಡಿಎಸ್ ಪಟ್ಟಿಯಲ್ಲಿ ಕೆಲ ಅಭ್ಯರ್ಥಿಗಳ ಬದಲಾವಣೆ



ಬೆಂಗಳೂರು, ಫೆ.4(ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಪ್ರಕಟಗೊಂಡಿರುವ ಕೆಲ ಅಭ್ಯರ್ಥಿಗಳನ್ನು ಬದಲಾವಣೆ ಮಾಡುವುದಾಗಿ ಜೆಡಿಎಸ್ ವರಿಷ್ಠ ಹೆಚ್.ಡಿ ಕುಮಾರಸ್ವಾಮಿ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಲಸ ಮಾಡದ, ವೇಗವಾಗಿ ಮುನ್ನಡೆಯದ ಅಭ್ಯರ್ಥಿಗಳನ್ನು ಮುಲಾಜಿಲ್ಲದೆ ಬದಲಾಯಿಸುತ್ತೇನೆ. ಆರೇಳು ಕ್ಷೇತ್ರಗಳಲ್ಲಿ ಘೋಷಿತ ಅಭ್ಯರ್ಥಿಗಳ ವೇಗ ನನಗೆ ತೃಪ್ತಿ ನೀಡಿಲ್ಲ. ಅವರನ್ನು ಬದಲಾವಣೆ ಮಾಡಲಾಗುವುದು ಎಂದು ಮಾಜಿ ಮುಖ್ಯಮಂತ್ರಿ ಹೆಚ್‌ಡಿಕೆ ಅವರು ಇದೇ ವೇಳೆ ಹೇಳಿದರು. ಸುಮ್ಮನೆ ಮನೆಯಲ್ಲಿ ಕೂತು ಗೆಲ್ಲಬೇಕು ಎಂದರೆ ಸಾಧ್ಯ ಇಲ್ಲ ಆಯಾ ಕ್ಷೇತ್ರದಲ್ಲಿ ಪಂಚರತ್ನ ರಥಯಾತ್ರೆಗೆ ಸಿಕ್ಕಿರುವ ಸ್ಪಂದನೆ ಬಿಜೆಪಿ ಕಾಂಗ್ರೆಸ್ ಪ್ರಮುಖ ದಿಗ್ಗಜ ನಾಯಕರ ನಿದ್ದೆಗೆಡುವಂತೆ ಮಾಡಿದೆ. ಪ್ರತಿ ಕ್ಷೇತ್ರವೂ ನನಗೆ ಮುಖ್ಯ, ನಾನು ಕಠಿಣ ನಿರ್ಧಾರ ಕೈಗೊಳ್ಳುವ ಬಗ್ಗೆ ಹಿಂದೆ ಸರಿಯುವುದಿಲ್ಲ. ಮುಲಾಜಿಲ್ಲದೆ ಕಠಿಣ ನಿರ್ಧಾರ ಕೈಗೊಳ್ಳುವ ಅವಕಾಶ ನನ್ನ ಮುಂದೆ ಮುಕ್ತವಾಗಿದೆ. ಕೆಲವರು ಉತ್ತಮವಾಗಿ ಕೆಲಸ ಮಾಡು ತ್ತಿದ್ದಾರೆ, ನನಗೆ ಖುಷಿ ಇದೆ. ಕೆಲವರು ಉಪಯೋಗ ಇಲ್ಲ ಎಂದರು.

ಗ್ರಾಮ ಲೆಕ್ಕಿಗರಿಗೆ ಸರ್ಕಾರದಿಂದ ಟ್ಯಾಬ್ ವಿತರಣೆ



ಚಿಕ್ಕಮಗಳೂರು: ಚಿಕ್ಕಮಗಳೂರು ಜಿಲ್ಲಾ ಪ್ರವಾಸದಲ್ಲಿರುವ ಕಂದಾಯ ಸಚಿವ ಆರ್.ಅಶೋಕ, ವಸ್ತಾರೆ ಮತ್ತು ಅಂಬಳಿ ಹೋಬಳಿಯಲ್ಲಿ ಅಟಲ್ ಜನಸ್ನೇಹಿ ಕೇಂದ್ರದ ನೂತನ ಕಟ್ಟಡಗಳನ್ನು ಉದ್ಘಾಟಿಸಿ, ಹಕ್ಕುಪತ್ರ ಸೇರಿದಂತೆ ವಿವಿಧ ಸವಲತ್ತುಗಳನ್ನು ವಿತರಿಸಿದರು. ನಂತರ ಮಾತನಾಡಿದ ಅವರು, ರಾಜ್ಯದ ಎಲ್ಲಾ ಗ್ರಾಮ ಲೆಕ್ಕಿಗರಿಗೆ ಟ್ಯಾಬ್‌ಗಳನ್ನು ವಿತರಿಸಲಾಗುವುದು ಎಂದರು. ಗ್ರಾಮ ಲೆಕ್ಕಿಗರ ಕೆಲಸಗಳಲ್ಲಿ ಸರಳೀಕರಣ ಮತ್ತು ವೇಗವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ಈ ತೀರ್ಮಾನ ಕೈಗೊಂಡಿದೆ. ಕಂದಾಯ ಇಲಾಖೆಯ ಕಚೇರಿಗಳನ್ನು ಕಂಪ್ಯೂಟರೀಕರಣ ಮಾಡಲಾಗುವುದು, ಕಾಗದ ಬಳಕೆ ಕಡಿಮೆ ಮಾಡಿ ತಂತ್ರಜ್ಞಾನದ ಮೂಲಕ ಸಾರ್ವಜನಿಕ ಸೇವೆ ನೀಡಲು ಕ್ರಮ ಕೈಗೊಂಡಿರುವುದಾಗಿ ಅವರು ಹೇಳಿದರು.

ಮೈಸೂರು ರಿಂಗ್ ರಸ್ತೆ ಇನ್ನೆರಡು ವಾರದಲ್ಲಿ ಪೂರ್ಣ ಪ್ರಮಾಣದಲ್ಲಿ ಬೆಳಗಲಿದೆ

● ಸಂಸದ ಪ್ರತಾಪ್ ಸಿಂಹ ಭರವಸೆ ● ಅರಮನೆ ಸುತ್ತಮುತ್ತ ಬೀದಿ ಬದಿ ವ್ಯಾಪಾರಿಗಳ ಸ್ಥಳಾಂತರಕ್ಕೆ ಸೂಚನೆ



ಮೈಸೂರು, ಫೆ.4(ಎಂಟಿವೈ)– ಮೈಸೂರಿನ ರಿಂಗ್ ರಸ್ತೆಯಲ್ಲಿ ಪೂರ್ಣ ಪ್ರಮಾಣದಲ್ಲಿ ದೀಪ ಅಳವಡಿಕೆ ಕಾರ್ಯವನ್ನು ಎರಡು ವಾರದಲ್ಲಿ ಪೂರ್ಣಗೊಳಿಸುವಂತೆ ಸಂಸದ ಪ್ರತಾಪ್ ಸಿಂಹ ಸೂಚಿಸಿದ್ದಾರೆ.

ಮೈಸೂರಿನ ಪಾಲಿಕೆ ಕಚೇರಿ ಸಭಾಂಗಣದಲ್ಲಿ ಶನಿವಾರ ನಡೆದ ರಿಂಗ್ ರಸ್ತೆಯ ಲೈಟಿಂಗ್ ಕಾಮಗಾರಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಕೆಲ ವರ್ಷಗಳಿಂದ ಕತ್ತಲೆ ಆವರಿಸಿದ್ದ ರಿಂಗ್ ರಸ್ತೆಯ ಕೆಲ ಭಾಗ ಈಗ ಎಲ್‌ಇಡಿ ದೀಪಗಳಿಂದ ಬೆಳಗುತ್ತಿದೆ. ಇನ್ನು ಕೆಲವೆಡೆ ಅಳವಡಿಸುವ ಕಾರ್ಯ ಸಾಗಿದೆ. ಅಲ್ಲದೇ ಮಂದ ಬೆಳಕಿರುವ ಕೆಲವೆಡೆ ಮಿನಿ ಮಾಸ್ಟ್ ದೀಪಗಳನ್ನು ಅಳವಡಿಸಿ. ಎರಡು ವಾರದಲ್ಲಿ ಎಲ್ಲವನ್ನೂ ಪೂರ್ಣಗೊಳಿಸಬೇಕು. ಮಾಸಾಂತ್ಯಕ್ಕೆ ರಿಂಗ್ ರಸ್ತೆ ಪೂರ್ಣ ಪ್ರಮಾಣದಲ್ಲಿ ಎಲ್‌ಇಡಿ ದೀಪಗಳ ಬೆಳಕಿನಿಂದ ಕಂಗೊಳಿಸುವಂತೆ ಮಾಡಬೇಕು ಎಂದರು. ಈ ವೇಳೆ ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ್ ರೆಡ್ಡಿ ಮಾತನಾಡಿ, ರಿಂಗ್ ರಸ್ತೆಯಲ್ಲಿ ವಿದ್ಯುತ್ ಕೇಬಲ್ ಅಳವಡಿಕೆ ಕಾರ್ಯ ಶೇ.99ರಷ್ಟು ▶ 8ನೇ ಪುಟಕ್ಕೆ



ಹಿರಿಯ ಗಾಯಕಿ ವಾಣಿ ಜಯರಾಮ್ ನಿಗೂಢ ಸಾವು



ಚೆನ್ನೈ: ಭಾರತ ಸರ್ಕಾರದ ಅತ್ಯುನ್ನತ ಪ್ರಶಸ್ತಿ ಪದ್ಮಭೂಷಣ ಹಾಗೂ ರಾಷ್ಟ್ರ ಪ್ರಶಸ್ತಿ ವಿಜೇತೆ ಗಾಯಕಿ ವಾಣಿ ಜಯರಾಮ್(78) ಅವು ಇಂದು ಚೆನ್ನೈನ ಅವರ ನಿವಾಸದಲ್ಲಿ ನಿಗೂಢವಾಗಿ ಸಾವನ್ನಪ್ಪಿದ್ದಾರೆ.

ವಾಣಿ ಅವರ ಮನೆ ಕೆಲಸದಾಕೆ ಮಲಾರಕೋಡಿ ಅವರು ನಿನ್ನೆ ರಾತ್ರಿ ವಾಣಿ ಅವರನ್ನು ಕೊನೆಯದಾಗಿ ನೋಡಿದ್ದರು. ಇಂದು ಬೆಳಗ್ಗೆ 10.30ರ ಸುಮಾರಿಗೆ ಮಲಾರಕೋಡಿ ಕೆಲಸಕ್ಕೆ ಬಂದಿದ್ದಾರೆ. ಎಷ್ಟೇ ಕೂಗಿದರೂ ಮನೆ ಬಾಗಿಲು ತೆರೆಯದಿದ್ದರಿಂದ ಸಂಬಂಧಿಕರಿಗೆ ಮಾಹಿತಿ ನೀಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಆಳ್ವಾರ್‌ಪೇಟೆಯಲ್ಲಿ ವಾಸವಿದ್ದ ವಾಣಿಯವರ ಸಹೋದರಿ ಬಳಿಯಿದ್ದ ನಕಲಿ ಕೀ ಬಳಸಿ ಬಾಗಿಲು ತೆರೆದಾಗ ವಾಣಿ ಅವರು ತಲೆಗೆ ಪೆಟ್ಟು ಬಿದ್ದು ತೀವ್ರ ರಕ್ತಸ್ರಾವವಾಗಿ ಮೃತಪಟ್ಟಿರುವುದು ಪತ್ತೆಯಾಗಿದೆ. ಘಟನಾ ಸ್ಥಳಕ್ಕೆ ದೌಡಾಯಿಸಿದ ಪೊಲೀಸರು ವಾಣಿ ಅವರ ಮೃತದೇಹವನ್ನು ಓಮಂದೂರರ್ ಸರ್ಕಾರಿ ಆಸ್ಪತ್ರೆಗೆ ರವಾನಿ ಸಿದ್ದಾರೆ. ವಿವಿಧ ಭಾರತೀಯ ಭಾಷೆಗಳಲ್ಲಿ ಸುಮಾರು 10,000 ಹಾಡುಗಳನ್ನು ಹಾಡಿದ್ದಾರೆ. ವೆಲ್ಲೂರಿನವರಾದ ಅವರು ತಮಿಳು, ಕನ್ನಡ, ಹಿಂದಿ, ತೆಲುಗು, ಮಲಯಾಳಂ, ಮರಾಠಿ, ಒಡಿಯಾ, ಗುಜರಾತಿ, ಹರ್ಯಾನ್ವಿ, ಅಸ್ಸಾಮಿ, ತುಳು ಮತ್ತು ಬಂಗಾಳಿ ಸೇರಿದಂತೆ ಹಲವಾರು ಭಾಷೆಗಳಲ್ಲಿ ಹಾಡಿದ್ದಾರೆ. ಸಾವಿರಾರು ಭಕ್ತಿಗೀತೆಗಳನ್ನು ಹಾಡಿದ್ದಾರೆ. ಅಲ್ಲದೆ ಪ್ರಪಂಚದಾದ್ಯಂತ ಹಲವಾರು ಸಂಗೀತ ಕಛೇರಿಗಳನ್ನು ಸಹ ನಡೆಸಿಕೊಟ್ಟಿದ್ದಾರೆ.

ಸಿಎಂ ಸಂತಾಪ: ವಾಣಿ ಜಯರಾಮ್ ಅವರ ನಿಧನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಹಲವರು ಟ್ವಿಟರ್‌ನಲ್ಲಿ ಸಂತಾಪ ಸೂಚಿಸಿದ್ದಾರೆ. ವಾಣಿ ಜಯರಾಮ್ ಅವರು ಇಂದು ನಮ್ಮನ್ನು ಅಗಲಿದ ಸುದ್ದಿ ತಿಳಿದು ಅತ್ಯಂತ ದುಃಖವಾಯಿತು. ಸಾಹಿತ್ಯಕ್ಕೆ ಭಾವ ತುಂಬಿ ಅವರು ಅನೇಕ ಅದ್ಭುತ ಗೀತೆಗಳನ್ನು ಹಾಡಿದ್ದಾರೆ.

ಜಾಗತಿಕ ಬಿಕ್ಕಟ್ಟುಗಳ ಪರಿಹಾರಕ್ಕೆ ಭಾರತದತ್ತ ಮುಖ ಮಾಡಿದ ವಿಶ್ವ ನಾಯಕರು

● ತಮಿಳುನಾಡು ರಾಜ್ಯಪಾಲ ತಿರು ಆರ್.ಎನ್.ರವಿ ಅಭಿಮತ ● ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ 12ನೇ ದತ್ತಿ ಉಪನ್ಯಾಸ ● ಸುತ್ತೂರು ಶ್ರೀಗಳ ಸಾನ್ನಿಧ್ಯ

ಮೈಸೂರು,ಫೆ.4(ಪಿಎಂ)– ಜಾಗತಿಕ ವಿವಿಧ ಬಿಕ್ಕಟ್ಟು, ಸಂಕಷ್ಟಗಳ ಪರಿಹಾರಕ್ಕಾಗಿ ವಿಶ್ವ ನಾಯಕರು ಇಂದು ಭಾರತದತ್ತ ಮುಖ ಮಾಡಿದ್ದಾರೆ. ವಿಭಜನೆ, ಹವಾಮಾನ ಬದಲಾವಣೆ, ಸಾಂಕ್ರಾಮಿಕ ರೋಗ ಮತ್ತು ಆರ್ಥಿಕ ಕುಸಿತ ಸೇರಿದಂತೆ ಮೊದಲಾದ ಸಮಸ್ಯೆಗಳಿಂದ ಹೊರಬರಲು ವಿವಿಧ ದೇಶಗಳು ಭಾರತದತ್ತ ನೋಡುತ್ತಿವೆ ಎಂದು ತಮಿಳುನಾಡು ರಾಜ್ಯಪಾಲ ತಿರು ಆರ್.ಎನ್.ರವಿ ಅಭಿಪ್ರಾಯಪಟ್ಟರು.

ಮೈಸೂರಿನ ಎಂಜಿ ರಸ್ತೆಯಲ್ಲಿರುವ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ 12ನೇ ದತ್ತಿ ಉಪನ್ಯಾಸದಲ್ಲಿ 'ಜಿ–20 ನಾಯಕತ್ವ ; ಭಾರತದ ಅವಕಾಶಗಳು' ಕುರಿತು ಅವರು ಉಪನ್ಯಾಸ ನೀಡಿದರು. ಜಗತ್ತು ವಿವಿಧ ಬಿಕ್ಕಟ್ಟು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಭಾರತವು ಅಂತಾರಾಷ್ಟ್ರೀಯ ಸಮುದಾಯದಲ್ಲಿ ಧ್ವನಿ ಇಲ್ಲದವರಿಗೆ ಧ್ವನಿಯಾಗಿದೆ. ಪ್ರಸ್ತುತ ಮಾನವ ಸಂಕುಲವು ಗೋಚರ ಮತ್ತು ಅಗೋಚರ ಸಂಕಷ್ಟಗಳನ್ನು ಎದುರಿಸುವಂತಾಗಿದೆ. ಯುದ್ಧ, ಸಾಂಕ್ರಾಮಿಕ ರೋಗ, ಹವಾಮಾನ ಬದಲಾವಣೆ, ಮಣ್ಣಿನ ಸವೆತ ಮತ್ತು ಜಾಗತಿಕ ತಾಪಮಾನದಂತಹ ಸಂಕಷ್ಟಗಳು ಕಾಡುವಂತಾಗಿದೆ ಎಂದು ಹೇಳಿದರು. ಮಣ್ಣಿನ ಆರೋಗ್ಯ ಪುನಶ್ಚೇತನಗೊಳಿಸಲು ಭಾರತ ಜಗತ್ತಿಗೆ ದಾರಿದೀಪವಾಗಿದೆ. ಯಾವುದೇ ಯುದ್ಧವು ಜಗತ್ತಿಗೆ ಒಳಿತಲ್ಲವೆಂಬ ನಿಲುವನ್ನು ಭಾರತ ತೆಗೆದುಕೊಂಡಿದೆ. ರಷ್ಯಾ–ಉಕ್ರೇನ್ ▶ 8ನೇ ಪುಟಕ್ಕೆ



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ 12ನೇ ದತ್ತಿ ಉಪನ್ಯಾಸದಲ್ಲಿ ತಮಿಳುನಾಡು ರಾಜ್ಯಪಾಲ ತಿರು ಆರ್.ಎನ್.ರವಿ ಮಾತನಾಡಿದರು.

ಜಿ–20 ರಾಷ್ಟ್ರಗಳ ಭಾರತದ ಅಧ್ಯಕ್ಷತೆಗೆ ಜನಚಳವಳಿ ಸ್ಪರ್ಶ ನೀಡಿದ ಪ್ರಧಾನಿ ಮೋದಿ

ಭವಿಷ್ಯಕ್ಕಾಗಿ ಜಗತ್ತಿಗೆ ಭಾರತದಿಂದ ಹೆಚ್ಚಿನ ನಿರೀಕ್ಷೆ

ಮೈಸೂರು,ಫೆ.4(ಪಿಎಂ)–ಪ್ರಸಕ್ತ ವರ್ಷದಲ್ಲಿ ಭಾರತವು ಜಿ–20 ರಾಷ್ಟ್ರಗಳ ಒಕ್ಕೂಟದ ಅಧ್ಯಕ್ಷತೆ ವಹಿಸಿಕೊಂಡಿದ್ದು, ಭಾರತ ಒಂದು ಹೆಗ್ಗುರುತಾಗಿ ಜಗತ್ತಿನಲ್ಲಿ ಅನಾವರಣಗೊಳ್ಳಲು ಇದೊಂದು ವಿಶಿಷ್ಟ ಅವಕಾಶ. ಭಾರತ ಸರ್ಕಾರದ ಎಲ್ಲಾ ಯೋಜನೆ ಮತ್ತು ಕಾರ್ಯಕ್ರಮಗಳ ಮಾದರಿಯಲ್ಲಿ ಜಿ–20ರ ಅಧ್ಯಕ್ಷತೆಯನ್ನು ಒಂದು ಜನ ಚಳುವಳಿಯಾಗಿ ನಮ್ಮ ಪ್ರಧಾನಿ ನರೇಂದ್ರ ಮೋದಿ ಮಾಡಿದ್ದಾರೆ ಎಂದು ತಮಿಳುನಾಡು ರಾಜ್ಯಪಾಲ ತಿರು ಆರ್.ಎನ್.ರವಿ ಅಭಿಪ್ರಾಯಪಟ್ಟರು.

ನಮ್ಮ ಜಾಗತಿಕ ಬಾಂಧವ್ಯ ಭದ್ರಪಡಿಸಿಕೊಳ್ಳಲು ಇದೊಂದು ಉತ್ತಮ ಅವಕಾಶ. ವಿಶೇಷವಾಗಿ ವಿವಿಧ ದೇಶಗಳ ನಾಗರಿಕ ಸಮಾಜಗಳೊಂದಿಗೆ ಉತ್ತಮ ಬಾಂಧವ್ಯ ವೃದ್ಧಿಸಿಕೊಳ್ಳಲು ಸಾಧ್ಯವಾಗಲಿದೆ. ಶೇ.85ರಷ್ಟು ಜಾಗತಿಕ ಜಿಡಿಪಿಯೊಂದಿಗೆ ಜಾಗತಿಕ ▶ 8ನೇ ಪುಟಕ್ಕೆ

ಟಿಲ್ಲರ್ ಮಗುಚಿ ಚಾಲಕ ಸಾವು

ಮರಕೆಲಸದ ಉಪಕರಣ ಸಾಗಿಸುವಾಗ ದುರಂತ

ಗೋಣಿಕೊಪ್ಪ, ಮಡಿಕೇರಿ,ಫೆ.4– ಮರ ಕೆಲಸದ ಉಪಕರಣಗಳನ್ನು ಸಾಗಿಸುತ್ತಿದ್ದ ಟಿಲ್ಲರ್‌ವೊಂದು ಮಗುಚಿಬಿದ್ದ ಪರಿಣಾಮ ಟಿಲ್ಲರ್ ಚಾಲಕ ಸ್ಥಳದಲ್ಲಿಯೇ ಮೃತಪಟ್ಟ ಘಟನೆ ಪೊನ್ನಂಪೇಟೆ ತಾಲೂಕಿನ ಬೆಸಗೂರು ಗ್ರಾಮದಲ್ಲಿ ಸಂಭವಿಸಿದೆ. ಬೆಸಗೂರು ಕಾಲೋನಿ ನಿವಾಸಿ ಸಣ್ಣಕ್ಕಿ ಎಂಬವರೇ ಮೃತ ದುರ್ದೈವಿ.

ಬೆಸಗೂರು ಗ್ರಾಮದ ಬಿ.ಮುತ್ತುರಾಜ್ ಎಂಬವರ ಟಿಲ್ಲರ್ ಚಾಲಕನಾಗಿ ಕೆಲಸ ನಿರ್ವಹಿಸುತ್ತಿದ್ದ ಸಣ್ಣಕ್ಕಿ, ಶನಿವಾರ ಸ್ಥಳೀಯ ಮರ ಕೆಲಸ ಮಾಡುವ ವ್ಯಕ್ತಿಯೋರ್ವರಿಗೆ ಸೇರಿದ ಮರ ಕೆಲಸದ ಉಪಕರಣಗಳನ್ನು ಟಿಲ್ಲರ್‌ನಲ್ಲಿ ಸಾಗಿಸುತ್ತಿದ್ದರು. ಈ ವೇಳೆ ಚಾಲಕನ ನಿಯಂತ್ರಣ ಕಳೆದುಕೊಂಡ ಟಿಲ್ಲರ್ ರಸ್ತೆಯಲ್ಲೇ ಮಗುಚಿ ಬಿದ್ದಿದೆ. ಪರಿಣಾಮ ಚಾಲಕ ಸಣ್ಣಕ್ಕಿ ಟಿಲ್ಲರ್ ಅಡಿಗೆ ಸಿಲುಕಿದ್ದು, ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ.

ಕೊಲೆಗೆ ಯತ್ನ: 3 ವರ್ಷ ಸಜೆ, 10 ಸಾವಿರ ರೂ. ದಂಡ

ಮಡಿಕೇರಿ,ಫೆ.4– ವ್ಯಕ್ತಿಯೊಬ್ಬರಿಗೆ ಚಾಕು ಇರಿದು ಕೊಲೆಗೆ ಯತ್ನಿಸಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಅಪರಾಧಿಗೆ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ 3 ವರ್ಷ ಸಜೆ ಮತ್ತು 10 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ. ವಿರಾಜಪೇಟೆ ತಾಲೂಕು ಹಾಲುಗುಂದ ನಿವಾಸಿ ಬಿ.ಸೋಮಯ್ಯ @ ಹರೀಶ್ ಶಿಕ್ಷೆಗೆ ಗುರಿಯಾದ ವ್ಯಕ್ತಿ.

ಪ್ರಕರಣ ಹಿನ್ನೆಲೆ: 2020ರ ಫೆ.8ರ ಸಂಜೆ 7.30ರ ಸಮಯದಲ್ಲಿ ಕಾಲೇಜು ರಸ್ತೆಯ ಮೆಡಿಕಲ್ ಶಾಪ್ ಒಂದರಲ್ಲಿ ಜರೀನಾ ಎಂಬವರು ಔಷಧಿ ಖರೀದಿ ಮಾಡುತ್ತಿದ್ದರು. ಈ ವೇಳೆ ಅಲ್ಲಿಗೆ ಬಂದ ಬಿ.ಸೋಮಪ್ಪ ಅಲಿಯಾಸ್ ಹರೀಶ್ ಎಂಬಾತ ನಡೆಯಲು ದಾರಿ ಇಲ್ಲ ಎಂದು ಜರೀನಾ ಅವರ ಜೊತೆ ಜಗಳವಾಡಿದ್ದಾನೆ. ಈ ವೇಳೆ ಅಲ್ಲಿದ್ದ ರಾಶಿಕ್ ಎಂಬಾತ ಮಹಿಳೆಗೆ ಯಾಕೆ ಬೈಯುತ್ತಿರುವುದಾಗಿ ಸೋಮಪ್ಪ ಅಲಿಯಾಸ್ ಹರೀಶ್‌ನನ್ನು ಪ್ರಶ್ನಿಸಿದ್ದಾರೆ. ಈ ವೇಳೆ ಸೋಮಪ್ಪ, ಮಹಿಳೆಗೆ ಸಹಾಯ ಮಾಡುತ್ತೀಯಾ, ನಿನ್ನನ್ನು ಈಗಲೇ ಕೊಲ್ಲುತ್ತೇನೆ ಎಂದು ಹೇಳಿ ರಾಶಿಕ್‌ನ ಹೊಟ್ಟೆ ಭಾಗಕ್ಕೆ ಚಾಕುವಿನಿಂದ ಇರಿದಿದ್ದ. ಈ ಘಟನೆ ಕುರಿತು ಮಡಿಕೇರಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಂದಿನ ಪೊಲೀಸ್ ಉಪ ನಿರೀಕ್ಷಕ ಎಂ.ಕೆ. ಸದಾಶಿವ ತನಿಖೆ ನಡೆಸಿ ಆರೋಪಿಯ ವಿರುದ್ಧ ಕೊಲೆ ಯತ್ನದ ಕುರಿತು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ದೋಷಾರೋಪಣಾ ವರದಿ ಸಲ್ಲಿಸಿದ್ದರು.

ತೀರ್ಪು ಪ್ರಕಟ: ಪ್ರಕರಣದ ವಿಚಾರಣೆ ನಡೆಸಿದ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಎಂ.ಭೃಂಗೇಶ್ ಅವರು, ರಾಶಿಕ್ ಅವರನ್ನು ಕೊಲೆ ಮಾಡುವ ಉದ್ದೇಶದಿಂದ ಆರೋಪಿ ಚಾಕುವಿನಿಂದ ಚುಚ್ಚಿ ಗಾಯಗೊಳಿಸಿರುವುದು ಸಾಬೀತಾಗಿದೆ. ಈ ಹಿನ್ನೆಲೆಯಲ್ಲಿ ಕೊಲೆಗೆ ಪ್ರಯತ್ನಿಸಿದ ಅಪರಾಧಕ್ಕಾಗಿ 3 ವರ್ಷಗಳ ಶಿಕ್ಷೆ ಹಾಗೂ 10 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

ದಂಡ ತೆರಲು ತಪ್ಪಿದ್ದಲ್ಲಿ 6 ತಿಂಗಳ ಸಾದಾ ಸಜೆ ಅನುಭವಿಸುವಂತೆ ತೀರ್ಪಿನಲ್ಲಿ ತಿಳಿಸಲಾಗಿದೆ. ವಸೂಲಾಗುವ ದಂಡದ ಹಣ 10 ಸಾವಿರವನ್ನು ಗಾಯಾಳು ರಾಶಿಕ್ ಅವರಿಗೆ ನೀಡುವಂತೆ ಆದೇಶಿಸಲಾಗಿದೆ. ಪ್ರಕರಣದಲ್ಲಿ ಸರಕಾರಿ ವಕೀಲ ಕೆ.ಜಿ. ಅಶ್ವಿನಿ ಅವರು ಸರಕಾರದ ಪರ ವಾದ ಮಂಡಿಸಿದ್ದರು.

ಕುಶಾಲನಗರದಲ್ಲಿ ಮೂವರು ಮನೆಗಳ್ಳರ ಬಂಧನ

ಬಂಧಿತರಿಂದ 12 ಲಕ್ಷ ರೂ. ಮೌಲ್ಯದ ಚಿನ್ನಾಭರಣ, ಕಾರುಗಳ ವಶ



ಕುಶಾಲನಗರ, ಫೆ4– ಪಟ್ಟಣದ ಟೌನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಎರಡು ಕಳ್ಳತನ ಪ್ರಕರಣಗಳನ್ನು ಪತ್ತೆ ಹಚ್ಚಿರುವ ಪೊಲೀಸರು ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ಈ ಬಗ್ಗೆ ಕುಶಾಲನಗರ ಡಿವೈಎಸ್ಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಕೊಡಗು ಎಸ್ಪಿ ಕೆ.ರಾಮರಾಜನ್ ಮಾಹಿತಿ ನೀಡಿದರು. ಬಂಧಿತರಿಂದ 12 ಲಕ್ಷ ಮೌಲ್ಯದ 190 ಗ್ರಾಂ ಚಿನ್ನಾಭರಣ ಮತ್ತು ಕಳ್ಳತನ ಹಣದಲ್ಲಿ ಖರೀದಿಸಿದ್ದ 3 ಕಾರುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.

ಮಡಿಕೇರಿ ತಾಲೂಕಿನ ನಾಪೋಕ್ಲು ಗ್ರಾಮದ ಎಂ.ಪಿ.ಖಾದರ್ ಎಂಬವರ ಪುತ್ರ ಎಂ.ಎ. ಇಬ್ರಾಹಿಂ (27), ನಾಪೋಕ್ಲು ಸಮೀಪದ ಕೊಳಕೇರಿ ಗ್ರಾಮದ ಸುರೇಶ್ ಎಂಬುವವರ ಪುತ್ರ ಸುದೀಪ್(21) ಮತ್ತು ಮಡಿಕೇರಿಯ ಅಜಾದ್ ನಗರದ ಎಂ.ಎಂ.ಮೊಹಮ್ಮದ್ ಅವರ ಪುತ್ರ ಎಂ.ಎಂ.ವಾಸಿಂ (29) ಬಂಧಿತ ಆರೋಪಿಗಳು. ಇನ್ನು ಮೂವರು ಇವರೊಂದಿಗೆ ಕಳ್ಳತನದಲ್ಲಿ ಭಾಗಿಯಾಗಿರುವ ಶಂಕೆಯಿದ್ದು ಪತ್ತೆಕಾರ್ಯ ಕೈಗೊಳ್ಳಲಾಗಿದೆ ಎಂದರು.

ಕಳ್ಳತನಕ್ಕೆ ಬಳಸಿಕೊಳ್ಳಲಾಗಿರುವ ಬಲೆನೋ ಕಾರು (ಕೆಎ01 ಎಂಎಂ7724) ಮಾರುತಿ ಆಲ್ಟೋ ಕಾರು ಕೆಎ02 ಪಿ 5378) ಮಾರುತಿ 800 (ಕೆಎ40 ಎಂ418) ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳ ಬಂಧನದಿಂದ ಕುಶಾಲನಗರ ಠಾಣಾ ವ್ಯಾಪ್ತಿಯ 2, ನಾಪೋಕ್ಲು ಠಾಣಾ ವ್ಯಾಪ್ತಿಯ ಎರಡು, ವಿರಾಜಪೇಟೆ ಗ್ರಾಮಾಂತರ ಠಾಣಾ ವ್ಯಾಪ್ತಿಯ ಒಂದು ಪ್ರಕರಣ ಭೇದಿಸಲಾಗಿದೆ.

ಸಹಾಯಕ ಎಸ್ಪಿ ಕೆ.ಎಸ್. ಸುಂದರ ರಾಜು, ಡಿವೈಎಸ್ಪಿ ಆರ್.ವಿ.ಗಂಗಾಧರಪ್ಪ, ವೃತ್ತ ನಿರೀಕ್ಷಕ ಬಿ.ಜಿ.ಮಹೇಶ್ ಮತ್ತು ಜಿ.ಎನ್. ಶ್ರೀಕಾಂತ ಮಾರ್ಗದರ್ಶನದಲ್ಲಿ ಕುಶಾಲನಗರ ಗ್ರಾಮಾಂತರ ಠಾಣಾಧಿಕಾರಿ ಚಂದ್ರಶೇಖರ್ ನೇತೃತ್ವದಲ್ಲಿ ಪಿಎಸೈ ಗಳಾದ ಅಪ್ಪಾಜಿ, ಭಾರತಿ, ಶ್ರೀಧರ್, ಲೋಹಿತ್, ಎಎಸೈ ವೆಂಕಟೇಶ್, ಗೋಪಾಲ್, ಗಣಪತಿ, ಪೇದೆಗಳಾದ ಸತೀಶ್, ಮಂಜುನಾಥ್, ದಯಾನಂದ, ನಾಗರಾಜ್, ಸುಧೀಶ್ ಕುಮಾರ್, ಪ್ರಕಾಶ್, ಪ್ರವೀಣ್, ಸಂದೇಶ್, ದಿವೇಶ್, ರಂಜಿತ್, ಗಣೇಶ್, ಸಹನಾ, ಶರ್ಮಿಳಾ, ಸಿಡಿಆರ್ ಘಟಕದ ರಾಜೇಶ್, ಗಿರೀಶ್, ಪ್ರವೀಣ್, ಚಾಲಕರಾದ ರಾಜು, ಅರುಣ್, ಯೋಗೀಶ್ ಮತ್ತು ಶೇಷಪ್ಪ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.ಇಲಾಖೆ ವತಿಯಿಂದ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದವರಿಗೆ ನಗದು ಘೋಷಣೆ ಮಾಡಲಾಗಿದೆ.

ಹುಲಿ ದಾಳಿಗೆ ಹಸು ಬಲಿ

ಗೋಣಿಕೊಪ್ಪ ಫೆ4– ನೊಕ್ಯ ಗ್ರಾಮದಲ್ಲಿ ಶನಿವಾರ ಹುಲಿ ದಾಳಿಗೆ ಹಸು ಬಲಿಯಾಗಿದೆ. ಗ್ರಾಮದ ಕಾಫಿ ಬೆಳೆಗಾರ ನಾಯಕಂಡ ರಮೇಶ್ ಎಂಬುವವರಿಗೆ ಸೇರಿದ ಹಸುವನ್ನು ಕಾಫಿ ತೋಟದಲ್ಲಿ ದಾಳಿ ಮಾಡಿ ಕೊಂದಿದೆ. ತಲೆಯ ಭಾಗವನ್ನು ತಿಂದು ಕಾಲ್ಕಿತ್ತಿದೆ. ಸ್ಥಳಕ್ಕೆ ತಿತಿಮತಿ ವಲಯ ಅರಣ್ಯ ಅಧಿಕಾರಿ ಅಶೋಕ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. 15 ಜನ ಸಿಬ್ಬಂದಿ ಸ್ಥಳದಲ್ಲಿ ಹುಲಿ ಚಲನ–ವಲನ ಅರಿಯಲು ಮುಂದಾದರು.

ಸುರಕ್ಷತೆ ಕಾಪಾಡಿಕೊಳ್ಳಲು ಸ್ಥಳಕ್ಕೆ ವಿರಾಜಪೇಟೆ ಬಿಇಒ ಶ್ರೀಶೈಲ ಬೀಳಗಿ ತೆರಳಿ ಅರಣ್ಯ ಅಧಿಕಾರಿಗಳನ್ನು ಭೇಟಿ ಮಾಡಿ ಮನವಿ ಮಾಡಿಕೊಂಡರು.

ಸತ್ಯನಾರಾಯಣ ಪೂಜೆ

ಮಡಿಕೇರಿ ಫೆ4– ತಾಲೂಕಿನ ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ಫೆ.5 ರಂದು ಸಂಜೆ 4 ಗಂಟೆಯಿಂದ 'ಸಾಮೂಹಿಕ ಸತ್ಯನಾರಾಯಣ' ಪೂಜೆ ನಡೆಯಲಿದೆ.

ಸಾರ್ವಜನಿಕ ಭಕ್ತಾದಿಗಳು ದೇವಾಲಯಗಳಲ್ಲಿ ನಡೆಯಲಿರುವ ಪೂಜೆಯಲ್ಲಿ ಭಾಗವಹಿಸಿ, ಪೂಜೆಯನ್ನು ಯಶಸ್ವಿಗೊಳಿಸುವಂತೆ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ದೊರೆ ಎಂ.ಎಸ್ ಅವರು ಕೋರಿದ್ದಾರೆ.

ಗಡಿಪಾರು ಪ್ರಕರಣ ಕೈ ಬಿಡಲು ಆಗ್ರಹಿಸಿ ಹಿಂದೂ ಜಾಗರಣಾ ವೇದಿಕೆ ಪ್ರತಿಭಟನೆ



ವಿರಾಜಪೇಟೆ, ಫೆ.4– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆದರೆಂಬ ಆರೋಪದ ಮೇಲೆ ಹಿಂದೂ ಸಾಮಾಜಿಕ ಕಾರ್ಯಕರ್ತರಿಬ್ಬರ ಮೇಲೆ ವಿಧಿಸಿರುವ ಗಡಿಪಾರು ಪ್ರಕರಣವನ್ನು ಕೈಬಿಡುವಂತೆ ಒತ್ತಾಯಿಸಿ ತಾಲೂಕು ಹಿಂದೂ ಜಾಗರಣಾ ವೇದಿಕೆ ಕಾರ್ಯಕರ್ತರು ವಿರಾಜಪೇಟೆ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದರು

ಪ್ರತಿಭಟನೆ ಸಂದರ್ಭದಲ್ಲಿ ಪೊಲೀಸರ ವಿರುದ್ಧ ಘೋಷಣೆ ಕೂಗಲಾಯಿತು. ಹಿಂದೂ ಸಂಘಟನೆಯ ಮುಖಂಡ ಸುನೀಲ್ ಮಾದಾಪುರ ಮಾತನಾಡಿ, ಕೊಡಗು ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಯ ಕುಮ್ಮಕ್ಕಿನಿಂದ ಸುಳ್ಳು ಆರೋಪವನ್ನು ಹೊರಿಸಿ ಹಿಂದೂ ಸಂಘಟನೆಯ ಕಾರ್ಯಕರ್ತರಾದ ವಿನಯ್ ಮತ್ತು ಕವನ್ ಕಾವೇರಪ್ಪ ಅವರನ್ನು, ಗಡಿಪಾರು ಮಾಡಬೇಕೆನ್ನುವ ದುರುದ್ದೇಶದಿಂದ ಕಾರಣ ಕೇಳಿ ನೋಟಿಸ್ ನೀಡಲಾಗಿದ್ದು, ಹಿಂದೂ ಸಂಘಟನೆಗಳನ್ನು ಹತ್ತಿಕ್ಕಲು ಜಿಲ್ಲಾಡಳಿತ ಮುಂದಾಗಿರುವುದು ಖಂಡನೀಯ ಎಂದರು.

ಗಡಿಪಾರು ಪ್ರಕ್ರಿಯೆಯನ್ನು ಕೂಡಲೇ ರದ್ದುಗೊಳಿಸಬೇಕು. ಇಲ್ಲವಾದಲ್ಲಿ ಹಿಂದೂ ಸಂಘಟನೆ ವತಿಯಿಂದ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದ ಸುನೀಲ್ ಮಾದಾಪುರ ಅವರು, ಹಿಂದೂ ಸಾಮಾಜಿಕ ಕಾರ್ಯಕರ್ತರಾದ ವಿನಯ್ ಮತ್ತು ಕವನ್ ಕಾವೇರಪ್ಪ ನಿಷ್ಠಾವಂತ ಕಾರ್ಯಕರ್ತರು. ಅವರು ಪ್ರಕರಣದಲ್ಲಿ ಭಾಗಿಯಾಗಿಲ್ಲ. ನ್ಯಾಯಕ್ಕಾಗಿ ಪ್ರತಿಭಟನೆ ಮಾಡುವ ಹಕ್ಕು ಎಲ್ಲರಿಗೂ ಇದೆ. ದೇಶದಲ್ಲಿ ಶಾಂತಿ ಕದಡುವಂತಹ ಕೆಲಸ ಮಾಡುವವರನ್ನು ಪೊಲೀಸ್ ಇಲಾಖೆ ಮೊದಲು ಮಟ್ಟ ಹಾಕಲಿ ಎಂದರು.

ಪ್ರತಿಭಟನೆ ನಂತರ ವಿರಾಜಪೇಟೆ ತಹಶಿಲ್ದಾರ್ ಮೂಲಕ ಜಿಲ್ಲಾ ಉಸ್ತುವಾರಿ ಸಚಿವರಿಗೆ, ಸಂಸದರಿಗೆ, ಸ್ಥಳಿಯ ಶಾಸಕರಿಗೆ, ಜಿಲ್ಲಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಹಿಂದೂ ಜಾಗರಣಾ ವೇದಿಕೆಯ ಜಿಲ್ಲಾ ಸಂಚಾಲಕ ಬಿ.ಎನ್. ಯೋಗೇಶ್, ಎಂ.ಅಯ್ಯಣ್ಣ, ತಾಲೂಕು ಸಂಚಾಲಕ ಅನೀಲ್ ಸಿದ್ದಾಪುರ ಸೇರಿದಂತೆ ವಿರಾಜಪೇಟೆ ತಾಲೂಕಿನ ಹಿಂದೂ ಕಾರ್ಯಕರ್ತರು ಭಾಗವಹಿಸಿದ್ದರು.

ಸಾರ್ವಜನಿಕರ ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ

ಜಿಲ್ಲಾಧಿಕಾರಿ ಡಾ.ಹೆಚ್.ಎನ್. ಗೋಪಾಲಕೃಷ್ಣ ಭರವಸೆ



ಮಂಡ್ಯ, ಫೆ.4– ಸಾರ್ವಜನಿಕರ ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ಡಾ. ಹೆಚ್.ಎನ್.ಗೋಪಾಲಕೃಷ್ಣ ತಿಳಿಸಿದರು.

ಪಾಂಡವಪುರ ತಾಲೂಕಿನ ತಾಳಶಾಸನ ಗ್ರಾಮದಲ್ಲಿ ನಡೆದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಂದಾಯ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಇದ್ದು, ಜಿಲ್ಲಾಧಿಕಾರಿಗಳ ಅಧಿಕಾರದ ವ್ಯಾಪ್ತಿಗೆ ಬರುವ 54 ಗ್ರಾಮ ಲೆಕ್ಕಾಧಿಕಾರಿಗಳ ನೇಮಕಕ್ಕೆ ಸಂಬಂಧಿಸಿದಂತೆ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ. ಇದು ಶೀಘ್ರ ಪೂರ್ಣಗೊಳ್ಳಲಿದ್ದು, ಜಿಲ್ಲೆಯ ಪ್ರತಿ ತಾಲೂಕಿಗೆ 8 ಮಂದಿಯನ್ನು ನೇಮಕ ಮಾಡಲಾಗುವುದು ಎಂದರು.

ಪಾಂಡವಪುರ ತಾಲೂಕು ಕಚೇರಿ ನ್ಯೂನತೆಗಳನ್ನು ಪರಿಶೀಲಿಸಿ ಪರಿಹರಿಸಲಾಗುವುದು. ಸರ್ಕಾರ ಪಾಂಡವಪುರಕ್ಕೆ ಹೊಸ ತಹಶೀಲ್ದಾರ್‌ರನ್ನು ನಿಯೋಜಿಸಿದೆ ಎಂದರು.

ಕುಡಿಯುವ ನೀರಿನ ಓವರ್‌ಹೆಡ್ ಟ್ಯಾಂಕ್ ನಿರ್ಮಾಣ, ಅಂಬೇಡ್ಕರ್ ಭವನ, ಆಶ್ರಯ ನಿವೇಶನ ಸೇರಿದಂತೆ ಇನ್ನಿತರ ವಿಷಯಗಳ ಬಗ್ಗೆ ಗ್ರಾಮಸ್ಥರು ಅರ್ಜಿ ಸಲ್ಲಿಸಿದ್ದು, ಪರಿಶೀಲಿಸಿ ಸಂಬಂಧಿಸಿದ ಇಲಾಖೆಗೆ ನಿರ್ದೇಶನ ನೀಡಲಾಗುವುದು ಎಂದರು.

ದೊಡ್ಡಬ್ಯಾಡರಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ನಿರ್ವಹಣಾ ಘಟಕ ಪ್ರಾರಂಭವಾಗಿದ್ದು, ಕಸ ಸಂಗ್ರಹಿಸುವ ವಾಹನಕ್ಕೆ ಜಿಪಂ ಸಿಇಓ ಶಾಂತ ಎಲ್.ಹುಲ್ಮನಿ ಚಾಲನೆ ನೀಡಿ ಮಾತನಾಡಿ, ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ ಕಾರ್ಯಕ್ರಮ ಗ್ರಾಮದ ಅಭಿವೃದ್ಧಿಗೆ ಪೂರಕವಾಗಿದೆ. ಜಿಲ್ಲಾಧಿಕಾರಿಗಳು ಹಳ್ಳಿಗೆ ಬಂದರೆ ಇಡೀ ಜಿಲ್ಲಾಡಳಿತವೇ ಬರುತ್ತದೆ. ಅಲ್ಲಿಯ ಜನರ ಸಮಸ್ಯೆ ಆಲಿಸುತ್ತದೆ ಎಂದರು. ಜಿಪಂನಿಂದ ನರೇಗಾ ಹಾಗೂ ವಿವಿಧ ಯೋಜನೆಯಡಿ ದೊಡ್ಡಬ್ಯಾಡರಹಳ್ಳಿ ವ್ಯಾಪ್ತಿಯ ಶಾಲೆಗಳಲ್ಲಿ ಆಟದ ಮೈದಾನ, ಶೌಚಾಲಯ, ಚರಂಡಿ ನಿರ್ಮಾಣ, ಡಿಜಿಟಲ್ ಗ್ರಂಥಾಲಯ ಮುಂತಾದ ಅಭಿವೃದ್ಧಿ ಕೆಲಸ ನಡೆಸಲಾಗುತ್ತಿದೆ ಎಂದರು.

ತಾಪಂ ಇಓ ಲೋಕೇಶ್ ಮೂರ್ತಿ ಮಾತನಾಡಿ, ಗ್ರಾಮೀಣ ಜನರು ಜಿಲ್ಲಾ ಕೇಂದ್ರಕ್ಕೆ ತೆರಳಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಭೇಟಿ ಮಾಡುವುದು ಕಷ್ಟಕರ. ತಾಳಶಾಸನ 1200 ಜನಸಂಖ್ಯೆ ಹೊಂದಿರುವ ಪುಟ್ಟ ಗ್ರಾಮವಾಗಿದ್ದು, ಇಂದಿನ ಕಾರ್ಯಕ್ರಮದಲ್ಲಿ ಜನರು ಜಿಲ್ಲಾಧಿಕಾರಿಗಳನ್ನು ನೇರವಾಗಿ ಭೇಟಿ ಮಾಡಿ ತಮ್ಮ ಕುಂದು ಕೊರತೆ ಸಲ್ಲಿಸಬಹುದು ಎಂದರು.

ಕಾರ್ಯಕ್ರಮದಲ್ಲಿ ಸಾಮಾಜಿಕ ಭದ್ರತಾ ಯೋಜನೆಯಡಿ ವಿಧವಾ ವೇತನ, ಮನಸ್ವಿನಿ, ಆರೋಗ್ಯ ಇಲಾಖೆಯಿಂದ ತಾಯಿ ಕಾರ್ಡ್ ವಿತರಣೆ, ಬೆಳಕು ಯೋಜನೆಯಡಿ ವಿದ್ಯುತ್ ಸಂಪರ್ಕ ಮಂಜೂರು ಪತ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಯಡಿ ಹೆಣ್ಣು ಮಕ್ಕಳಿಗೆ ಸುಕನ್ಯಾ ಸಮೃದ್ಧಿ ಯೋಜನೆ, ಪಾಸ್‌ಬುಕ್ ವಿತರಣೆ, ಮಕ್ಕಳಿಗೆ ಅನ್ನ ಸೇವನೆ ಹಾಗೂ ಗರ್ಭಿಣಿಯರಿಗೆ ಸೀಮಂತ, ರೇಷ್ಮೆ ಇಲಾಖೆಯಿಂದ ಪವರ್ ವೀಡರ್, ಬ್ಯಾಟರಿ ಆಪರೇಟಡ್ ಸ್ಪ್ರೇಯರ್, ಕೃಷಿ ಇಲಾಖೆಯಿಂದ ಮೇವು ಕತ್ತರಿಸುವ ಯಂತ್ರ ವಿತರಿಸಲಾಯಿತು.

ಈ ವೇಳೆ ಉಪವಿಭಾಗಾಧಿಕಾರಿ ಅಕ್ರಂ ಪಾಷಾ, ಗ್ರಾಪಂ ಅಧ್ಯಕ್ಷೆ ಮಹದೇವಮ್ಮ ಸೇರಿದಂತೆ ಇನ್ನಿತರಿದ್ದರು.

> **6** ಕನಕನಮರಡಿ ಗಣಿಗಾರಿಕೆಗೆ ಸಂಬಂಧಿಸಿದಂತೆ ಇಲಾಖೆಗಳಿಂದ ನಿರಪೇಕ್ಷಣಾ ಪತ್ರ ಪಡೆದು ನಂತರ ಪರವಾನಗಿ ನೀಡಲಾಗಿದೆ. ಗಣಿಗಾರಿಕೆಯ ಡ್ರೋಣ್ ಸರ್ವೆ ಈ ತಿಂಗಳ ಅಂತ್ಯದಲ್ಲಿ ಪ್ರಾರಂಭವಾಗಲಿದೆ ಸರ್ವೆ ಬಗ್ಗೆ ಎಲ್ಲರಿಗೂ ಮಾಹಿತಿ ನೀಡಲಾಗುವುದು. ಕನಕನ ಮರಡಿಗೆ ಫೆ.15 ಅಥವಾ 16 ರಂದು ಖುದ್ದು ಭೇಟಿ ನೀಡಿ ಪರಿಶೀಲಿಸುತ್ತೇನೆ.
> –ಡಾ.ಹೆಚ್.ಎನ್.ಗೋಪಾಲಕೃಷ್ಣ, ಜಿಲ್ಲಾಧಿಕಾರಿ.

ಪ್ರಯೋಗಾಲಯದ ಹೈಟೆಕ್ ಕಟ್ಟಡ ಕಾಮಗಾರಿಗೆ ಪೂಜೆ



ಶ್ರೀರಂಗಪಟ್ಟಣ, ಫೆ.4– ಪಟ್ಟಣದ ಸಾರ್ವಜನಿಕ ಆಸ್ಪತ್ರೆ ದಿನದಿಂದ ದಿನಕ್ಕೆ ಉನ್ನತೀಕರಣಗೊಳ್ಳುತ್ತಿದ್ದು, ಆಕ್ಸಿಜನ್ ಘಟಕ, ಹೈಟೆಕ್ ಲ್ಯಾಬೋರೇಟರಿ ಹಾಗೂ ಹೆಚ್ಚುವರಿ 12 ಹಾಸಿಗೆಗಳನ್ನು ಅಳವಡಿಸಿ ಮೇಲ್ದರ್ಜೆಗೇರಿಸಲಾಗುವುದು ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಮೇಲಂತಸ್ತಿನಲ್ಲಿ 50 ಲಕ್ಷ ರೂ. ವೆಚ್ಚದ ಕೇಂದ್ರಿಯ ನೂತನ ಪ್ರಯೋಗಾಲಯದ ಹೈಟೆಕ್ ಕಟ್ಟಡ ಕಾಮಗಾರಿಗೆ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಪಟ್ಟಣದಲ್ಲಿ ರಾಜ್ಯ ಹೆದ್ದಾರಿ ಇರುವ ಕಾರಣ ಅಪಘಾತಗಳು ಸಂಭವಿಸಿ, ಆಸ್ಪತ್ರೆಗೆ ಹೆಚ್ಚಿನ ರೋಗಿಗಳು ಆಗಮಿಸುತ್ತಿರುವುದರಿಂದ ಸಾರ್ವಜನಿಕ ಆಸ್ಪತ್ರೆ ಮತ್ತಷ್ಟು ಉನ್ನತೀಕರಣಗೊಳ್ಳಬೇಕು. ಈ ನಿಟ್ಟಿನಲ್ಲಿ ನಾನು ಸಹ ಸರ್ಕಾರವನ್ನು ಒತ್ತಾಯಿಸುತ್ತೇನೆ. ವೈದ್ಯರು ಹಾಗೂ ಸಿಬ್ಬಂದಿ ಸೇವಾ ಮನೋಭಾವದಿಂದ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಸಾರ್ವಜನಿಕರಿಗೆ ಸಮಯಕ್ಕೆ ಸರಿಯಾಗಿ ಉತ್ತಮ ಚಿಕಿತ್ಸೆ ದೊರೆಯುತ್ತಿದೆ. ಸಂಜೀವಿನಿಯಂತೆ ಕೆಲಸ ಮಾಡುವ ನುರಿತ ವೈದ್ಯ ಸಿಬ್ಬಂದಿಗಳ ಪರಿಶ್ರಮವನ್ನು ಮೆಚ್ಚುವಂತದ್ದು ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ಈ ವೇಳೆ ಪುರಸಭಾಧ್ಯಕ್ಷೆ ನಿರ್ಮಲ, ಉಪಾಧ್ಯಕ್ಷ ನರಸಿಂಹೇಗೌಡ, ಸ್ಥಾಯಿ ಸಮಿತಿ ಅಧ್ಯಕ್ಷ ನಿಂಗರಾಜು, ಸದಸ್ಯರಾದ ಶಿವು, ರವಿಕುಮಾರ್, ತಾಲೂಕು ವೈದ್ಯಾಧಿಕಾರಿ ಡಾ. ವೆಂಕಟೇಶ್, ಆಡಳಿತಾಧಿಕಾರಿ ಡಾ. ಮಾರುತಿ ಸೇರಿದಂತೆ ರಕ್ಷ ಕವಚ ಸಮಿತಿ ಸದಸ್ಯರು ಇದ್ದರು.

ರೈಸ್‌ಮಿಲ್ ಮಾಲೀಕರಿಗೆ ಬೆದರಿಕೆ ಪ್ರಕರಣ

ಇಬ್ಬರು ನಕಲಿ ಪತ್ರಕರ್ತರಿಗೆ ನ್ಯಾಯಾಂಗ ಬಂಧನ

ಮಂಡ್ಯ, ಫೆ4– ಖಾಸಗಿ ಸುದ್ದಿವಾಹಿನಿ ವರದಿಗಾರರ ಸೋಗಿನಲ್ಲಿ ತಾಲೂಕಿನ ಹನಕೆರೆ ಗ್ರಾಮದ ಎಟಿಎಂ ರೈಸ್‌ಮಿಲ್‌ಗೆ ಅಕ್ರಮವಾಗಿ ಪ್ರವೇಶಿಸಿ ಐದು ಲಕ್ಷ ರೂ. ನೀಡುವಂತೆ ಬ್ಲಾಕ್‌ಮೇಲ್ ಮಾಡಿ, ಬೆದರಿಕೆ ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಡ್ಯ ಗ್ರಾಮಾಂತರ ಪೊಲೀಸರು ಆರೋಪಿಗಳಾದ ಪತ್ರಕರ್ತರೆಂದು ಹೇಳಿಕೊಂಡಿದ್ದ ಜಿ.ಬಿ.ಅರುಣ್ ಪ್ರಸಾದ್ ಹಾಗೂ ಆತನ ಸಹಚರ ಕಿರಣ್ ಎಂಬುವರನ್ನು ಬಂಧಿಸಿ, ಶನಿವಾರ ಮಂಡ್ಯದ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ. ವಿಚಾರಣೆ ನಡೆಸಿದ ನ್ಯಾಯಾಧೀಶರು ಇಬ್ಬರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಳೆದ ಜ.27ರಂದು ಮಂಡ್ಯ ತಾಲೂಕಿನ ಹನಕೆರೆ ಎಟಿಎಂ ರೈಸ್‌ಮಿಲ್ ಮಾಲೀಕ ಜ್ಞಾನೇಶ್ ನೀಡಿದ ದೂರಿನ ಹಿನ್ನೆಲೆಯಲ್ಲಿ ಪ್ರಜಾಟಿವಿ ವರದಿಗಾರನೆಂದು ಹೇಳಿಕೊಂಡಿರುವ ಜಿ.ಬಿ.ಅರುಣ್ ಪ್ರಸಾದ್, ಮುನಿರಾಜು ಹಾಗೂ ಕಿರಣ್ ಸೇರಿದಂತೆ ಇನ್ನಿಬ್ಬರ ಮೇಲೆ ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿ, ಆರೋಪಿಗಳ ಬಂಧನಕ್ಕೆ ಬಲೆ ಬೀಸಲಾಗಿತ್ತು. ಅದರಂತೆ ಮಂಡ್ಯ ಎಸ್ಪಿ ಯತೀಶ್ ಮಾರ್ಗದರ್ಶನದಲ್ಲಿ ಮಂಡ್ಯ ಗ್ರಾಮಾಂತರ ಠಾಣೆ ಇನ್ಸ್‌ಸ್ಪೆಕ್ಟರ್ ಸಿದ್ದಪ್ಪನವರ ನೇತೃತ್ವದಲ್ಲಿ ಇನ್ಸ್‌ಪೆಕ್ಟರ್ ಕುಮಾರ್ ಅವರ ತಂಡ ಬೆಂಗಳೂರಿನಲ್ಲಿ ತಲೆಮರೆಸಿಕೊಂಡಿದ್ದ ಕಿರಣ್‌ನನ್ನು ಬಂಧಿಸಿದ್ದಾರೆ. ನಂತರ ಆತನ ಮೂಲಕ ಬೆಳ್ಳೂರಿನಲ್ಲಿದ್ದ ದೊಡ್ಡಗರುಡನಹಳ್ಳಿ ಗ್ರಾಮದ ಜಿ.ಬಿ.ಅರುಣ್‌ಪ್ರಸಾದ್‌ನನ್ನು ಬಂಧಿಸಿ, ಮಂಡ್ಯ ಜೆಎಂಎಫ್‌ಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ನ್ಯಾಯಾಧೀಶರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಉಳಿದ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಜ.27ರಂದು ರಾತ್ರಿ 7 ಗಂಟೆಗೆ (ಕೆಎ–04, ಎಸ್‌ಬಿ–5083) ಕಾರಿನಲ್ಲಿ ಬಂದ ಐವರು ಎಟಿಎಂ ರೈಸ್‌ಮಿಲ್‌ಗೆ ಅಕ್ರಮವಾಗಿ ಪ್ರವೇಶಿಸಿ ನೀವು ಪಡಿತರ ಅಕ್ಕಿ ಸಾಗಾಣೆ ಮಾಡುತ್ತಿದ್ದೀರಿ. ನಾವು ಪ್ರಜಾ ಟಿವಿ ಸಂಪಾದಕರು, ವರದಿಗಾರರು, ನಿಮ್ಮ ಮೇಲೆ ಪೊಲೀಸ್ ಕೇಸ್ ಹಾಕಿಸಿ ಜೈಲಿಗೆ ಹಾಕಿಸುತ್ತೇವೆ ಎಂದು ಧಮಕಿ ಹಾಕಿದ್ದರು. ಜೊತೆಗೆ ಐದು ಲಕ್ಷ ರೂ. ನೀಡಬೇಕೆಂದು ಬ್ಲಾಕ್‌ಮೇಲ್ ಮಾಡಿದ್ದರು ಎಂದು ರೈಸ್‌ಮಿಲ್ ಮಾಲೀಕ ಜ್ಞಾನೇಶ್ ಮಂಡ್ಯ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದರು. ಅಲ್ಲದೇ ಅರುಣ್‌ಪ್ರಸಾದ್, ಕಿರಣ್, ಮುನಿರಾಜು ಎಂಬುವರು ಅವಾಚ್ಯ ಶಬ್ದಗಳಿಂದ ನಿಂದಿಸಿ, ತಲೆ ಮೇಲೆ ಹೊಡೆದು ಹಲ್ಲೆ ಮಾಡಿದ್ದರು ಎಂದು ದೂರಿನಲ್ಲಿ ತಿಳಿಸಿದ್ದರು.

ಸವಿತಾ ಮಹರ್ಷಿ ಜಯಂತಿ

ಮಂಡ್ಯ,ಫೆ.4– ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ವತಿಯಿಂದ ಫೆ.7ರಂದು ಬೆಳಗ್ಗೆ 11 ಗಂಟೆಗೆ ಕಲಾಮಂದಿರದಲ್ಲಿ ಸವಿತಾ ಮಹರ್ಷಿ ಜಯಂತಿ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಉಸ್ತುವಾರಿ ಸಚಿವ ಆರ್.ಅಶೋಕ್ ಉದ್ಘಾಟಿಸಲಿದ್ದು, ಸಚಿವ ಡಾ.ಕೆ.ಸಿ. ನಾರಾಯಣಗೌಡ, ಶಾಸಕ ಎಂ. ಶ್ರೀನಿವಾಸ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಸದೆ ಸುಮಲತಾ, ಶಾಸಕರಾದ ಡಿ.ಸಿ. ತಮ್ಮಣ್ಣ, ಸಿ.ಎಸ್.ಪುಟ್ಟರಾಜು, ಸುರೇಶ್ ಗೌಡ, ಡಾ.ಕೆ.ಅನ್ನದಾನಿ, ರವೀಂದ್ರ ಶ್ರೀಕಂಠಯ್ಯ, ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ನಗರಸಭೆ ಅಧ್ಯಕ್ಷ ಹೆಚ್.ಎಸ್.ಮಂಜು, ಜಯರಾಮ ರಾಯಪುರ, ಕೆ.ಶ್ರೀನಿವಾಸ್, ಇಷ್ರಾತ್ ಫಾತೀಮಾ ಭಾಗವಹಿಸಲಿದ್ದಾರೆ.

ಮ.ಬೆಟ್ಟದಲ್ಲಿ ಶಿವರಾತ್ರಿ, ಯುಗಾದಿ ಜಾತ್ರೆಗೆ ಅಗತ್ಯ ಸಿದ್ಧತೆ ಕೈಗೊಳ್ಳಿ



ಚಾಮರಾಜನಗರ, ಫೆ.4– ಮಲೆಮಹದೇಶ್ವರ ಬೆಟ್ಟದಲ್ಲಿ ನಡೆಯಲಿರುವ ಮಹಾಶಿವರಾತ್ರಿ ಮತ್ತು ಯುಗಾದಿ ಜಾತ್ರಾ ಮಹೋತ್ಸವ ಅಚ್ಚುಕಟ್ಟಾಗಿ ನೆರವೇರಲು ಅಗತ್ಯವಿರುವ ಎಲ್ಲ ಸಿದ್ಧತೆಗಳನ್ನು ಸಮರ್ಪಕವಾಗಿ ಕೈಗೊಳ್ಳುವಂತೆ ವಸತಿ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಶ್ರೀ ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷ ವಿ. ಸೋಮಣ್ಣ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಮಲೆಮಹದೇಶ್ವರ ಬೆಟ್ಟದಲ್ಲಿ ನಡೆಯುವ ಮಹಾಶಿವರಾತ್ರಿ ಮತ್ತು ಯುಗಾದಿ ಜಾತ್ರಾ ಮಹೋತ್ಸವ ಕಾರ್ಯಕ್ರಮಗಳ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಲೆಮಹದೇಶ್ವರ ಬೆಟ್ಟಕ್ಕೆ ಜಾತ್ರಾ ಸಮಯದಲ್ಲಿ ಲಕ್ಷಾಂತರ ಭಕ್ತರು ಆಗಮಿಸಲಿದ್ದಾರೆ. ಬರುವ ಭಕ್ತಾದಿಗಳಿಗೆ ಕುಡಿಯುವ ನೀರು, ವಾಸ್ತವ್ಯ, ದಾಸೋಹ, ಬಸ್, ಶೌಚಾಲಯ, ಸ್ನಾನ ಗೃಹಗಳು ಸೇರಿದಂತೆ ಅಗತ್ಯವಿರುವ ಎಲ್ಲಾ ಮೂಲ ಸೌಕರ್ಯಗಳಿಗೆ ಸರಿಯಾದ ವ್ಯವಸ್ಥೆ ಇರಬೇಕು. ಎಲ್ಲಿಯೂ ಕೊರತೆ ಬಾರದಂತೆ ನೋಡಿಕೊಳ್ಳಬೇಕೆಂದು ಉಸ್ತುವಾರಿ ಸಚಿವರು ತಿಳಿಸಿದರು.

ಮಲೆಮಹದೇಶ್ವರ ಬೆಟ್ಟ ಮುಖ್ಯ ರಸ್ತೆಯಲ್ಲಿ ಕೆಶಿಪ್ ವತಿಯಿಂದ ಈಗಾಗಲೇ ರಸ್ತೆ ಅಭಿವೃದ್ಧಿ ಕೈಗೊಳ್ಳಲಾಗಿದೆ. ಜಾತ್ರಾ ಸಮಯದಲ್ಲಿ ತಾಳಬೆಟ್ಟದಿಂದ ಮಹದೇಶ್ವರ ಬೆಟ್ಟಕ್ಕೆ ಹೋಗಿ ಬರಲು ಯಾವುದೇ ತೊಂದರೆಯಾಗದಂತೆ ತುರ್ತಾಗಿ ರಸ್ತೆ ಸರಿಪಡಿಸಬೇಕು. ವಾಹನಗಳ ಸಂಚಾರಕ್ಕೆ ಯಾವುದೇ ಅಡಚಣೆಯಾಗಬಾರದು ಎಂದರು.

ಪ್ರಸ್ತುತ ಬಿಸಿಲಿನ ಬೇಗೆ ಇರುವುದರಿಂದ ಭಕ್ತಾದಿಗಳಿಗೆ ಸೂಕ್ತ ನೆರಳಿನ ವ್ಯವಸ್ಥೆ ಕೈಗೊಳ್ಳಬೇಕಿದೆ. ಗುಣಮಟ್ಟದ ಶಾಮಿಯಾನ ಹಾಕಬೇಕು. ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಪೂರೈಕೆಯಾಗಬೇಕು. ಶೌಚಾಲಯಗಳು, ಸ್ನಾನ ಗೃಹಗಳು ಶುಚಿತ್ವದಿಂದ ಇರಬೇಕು. ಮುಡಿಸೇವೆ ಸ್ಥಳದಲ್ಲಿಯೂ ನೈರ್ಮಲ್ಯ ಕಾಪಾಡಿಕೊಳ್ಳಬೇಕು. ವಿಶೇಷವಾಗಿ ಕ್ಷೇತ್ರಾದ್ಯಂತ ಸ್ವಚ್ಛತೆಗೆ ವಿಶೇಷ ಗಮನ ಕೊಡಬೇಕು ಎಂದು ಸಚಿವರು ತಿಳಿಸಿದರು.

ಭಕ್ತಾದಿಗಳಿಗೆ 24x7 ದಾಸೋಹ ಸೌಲಭ್ಯ ಲಭ್ಯವಾಗಬೇಕು. ಹೊರ ಜಿಲ್ಲೆಯ ನಾನಾ ಭಾಗದಿಂದ ಹೆಚ್ಚು ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸುವುದರಿಂದ ಅಗತ್ಯಕ್ಕೆ ತಕ್ಕಂತೆ ಬಸ್ಸುಗಳನ್ನು ನಿಯೋಜಿಸಬೇಕು. ತಮಿಳುನಾಡು ರಾಜ್ಯದಿಂದಲೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ಅಲ್ಲಿಂದಲೂ ಸಹ ಸಾಕಷ್ಟು ಬಸ್ಸುಗಳ ವ್ಯವಸ್ಥೆಯಾಗಬೇಕು. ಸಂಚಾರ ಸುಗಮಗೊಳಿಸುವ ನಿಟ್ಟಿನಲ್ಲಿ ಅವಶ್ಯ ಸೂಚನಾ ಫಲಕಗಳು ಇತರೆ ಪರಿಕರಗಳನ್ನು ಅಳವಡಿಸಬೇಕು ಎಂದರು.

ವಿದ್ಯುತ್ ದೀಪಾಲಂಕಾರ, ಉತ್ತಮ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ, ನಿರಂತರ ವಿದ್ಯುತ್ ಸರಬರಾಜು, ಭದ್ರತಾ ವ್ಯವಸ್ಥೆ, ಮಾಹಿತಿ ಕೇಂದ್ರ, ಆರೋಗ್ಯ ಅಧಿಕಾರಿ ಸಿಬ್ಬಂದಿ ನಿಯೋಜನೆ, ದರ್ಶನ ವ್ಯವಸ್ಥೆ, ಸೇವಾ ಕೌಂಟರ್‌ಗಳ ನಿರ್ವಹಣೆ ಸೇರಿದಂತೆ ಎಲ್ಲವೂ ಅಚ್ಚುಕಟ್ಟಾಗಿ ನಡೆಯಬೇಕು. ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಜಾತ್ರಾ ಮಹೋತ್ಸವದ ಕಾರ್ಯಕ್ಕಾಗಿ ತೊಡಗಿಸಿಕೊಳ್ಳಬೇಕು. ಜಿಲ್ಲಾಧಿಕಾರಿಗಳು ಅಧಿಕಾರಿಗಳ ಸಭೆ ಕರೆದು ಅಗತ್ಯ ಸೂಚನೆ ನೀಡಿ ಎಲ್ಲಾ ಏರ್ಪಾಡುಗಳನ್ನು ಮಾಡಬೇಕು. ಹಿರಿಯ ಅಧಿಕಾರಿಗಳು ಜಾತ್ರಾ ಮಹೋತ್ಸವ ನಿರ್ವಹಣೆ ಮಾಡಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ವಿ. ಸೋಮಣ್ಣ ಅವರು ತಿಳಿಸಿದರು.

ಶಾಸಕರಾದ ಆರ್. ನರೇಂದ್ರ ಮಾತನಾಡಿ, ಭಕ್ತಾದಿಗಳಿಗೆ ಸಕಲ ಸೌಲಭ್ಯಗಳನ್ನು ಕಲ್ಪಿಸಬೇಕು. ಅತ್ಯಂತ ವ್ಯವಸ್ಥಿತವಾಗಿ ಕ್ಷೇತ್ರದಲ್ಲಿ ಜಾತ್ರಾ ಸಿದ್ಧತೆಗಳನ್ನು ಕೈಗೊಳ್ಳಬೇಕೆಂದು ತಿಳಿಸಿದರು.

ಸಾಲೂರು ಮಠದ ಶ್ರೀಗಳಾದ ಶಾಂತಮಲ್ಲಿ ಕಾರ್ಜುನಸ್ವಾಮಿ, ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಎನ್.ಮಹೇಶ್, ಸಿ.ಎಸ್. ನಿರಂಜನ್‌ಕುಮಾರ್, ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಮಲೆಮಹದೇಶ್ವರ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಹಾಗೂ ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ, ಜಿಪಂ ಸಿಇಓ ಪೂವಿತಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹೂ, ಉಪವಿಭಾಗಾಧಿಕಾರಿ ಗೀತಾ ಹುಡೇದ, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ವಿನಯ್ ಕುಮಾರ್, ಕೆಎಸ್ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್, ಪ್ರಾದೇಶಿಕ ಸಾರಿಗೆ ಅಧಿಕಾರಿ ಸುಧಾಮಣಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕೆ.ಎಂ. ವಿಶ್ವೇಶ್ವರಯ್ಯ, ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಸತ್ಯಗೀತಾ ಜ್ಞಾನ ಪಾಠ ಶಾಲೆ, ಶಿವ ದರ್ಶನ ಭವನ ಲೋಕಾರ್ಪಣೆ

ಚಾಮರಾಜನಗರ, ಫೆ.4– ಅಂತಾರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವತಿಯಿಂದ ಚಂದಕವಾಡಿ ಗ್ರಾಮದಲ್ಲಿ ನೂತವಾಗಿ ನಿರ್ಮಿಸಲಾಗಿರುವ ಶಿವ ದರ್ಶನ ಭವನ ಹಾಗೂ ಸತ್ಯಗೀತಾ ಜ್ಞಾನ ಪಾಠ ಶಾಲೆಯನ್ನು ಸಾರ್ವಜನಿಕರ ಸೇವೆಗಾಗಿ ಭಾನುವಾರ ಬೆಳಗ್ಗೆ 11 ಗಂಟೆಗೆ ಲೋಕಾರ್ಪಣೆಗೊಳಿಸಲಾಗುವುದು ಎಂದು ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜಿ ತಿಳಿಸಿದ್ದಾರೆ.

ರಾಜಯೋಗಿನಿ ಬ್ರಹ್ಮಾಕುಮಾರಿ ಪ್ರಭಾಮಣೀಜಿ ದಿವ್ಯ ಸಾನಿಧ್ಯ, ವರಲಕ್ಷ್ಮಿ ಅಧ್ಯಕ್ಷತೆ, ಜಿ ನಾಗಶ್ರೀ ಪ್ರತಾಪ್ ಉದ್ಘಾಟಣೆ, ನಂಜುಂಡಸ್ವಾಮಿ, ನಾರಾಯಣಶೆಟ್ಟಿ, ರಾಜೇಂದ್ರ, ಸಿದ್ದರಾಜು, ಪುಟ್ಟಸ್ವಾಮಿ, ಮುಖ್ಯ ಅತಿಥಿಗಳಾಗಿ ಭಾಗವಹಸಲಿದ್ದಾರೆ. ಗ್ರಾಮದ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ.

ರಂಗಸಂಭ್ರಮ ಸಮಾರೋಪ ಸಮಾರಂಭ

ಚಾ.ನಗರ, ಫೆ4– ನಗರದ ಜಿಲ್ಲಾ ಡಾ.ರಾಜ್‌ಕುಮಾರ್ ರಂಗಮಂದಿರದಲ್ಲಿ ಚೇತನ ಕಲಾವಾಹಿನಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀಮಹದೇಶ್ವರ ಕಲಾಸಂಘದ ಸಹಯೋಗದಲ್ಲಿ ನಡೆದ ದಕ್ಷಯಜ್ಞ ನಾಟಕ ಹಾಗೂ ರಂಗಸಂಭ್ರಮ ಸಾಂಸ್ಕೃತಿಕ ಸಮಾರೋಪ ಸಮಾರಂಭ ನೆರವೇರಿತು.

ಸಮಾರೋಪ ನುಡಿಗಳನ್ನಾಡಿದ ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ.ಮಂಜುನಾಥಪ್ರಸನ್ನ' ನಾಟಕ ಎಂಬುದು ಕಲೆಗಳ ಮೂಲವಾಗಿದ್ದು, ನಾಟ್ಯ, ನಾಟಕ, ಮಾಧ್ಯಮವಾಗಿ ಮೊದಲ ಹಂತದಲ್ಲಿ ಪ್ರಾರಂಭಗೊಂಡು, ಆಧುನಿಕ ಜಗತ್ತಿನಲ್ಲಿ ನಾಟಕ ಒಂದು ಕಲೆಯಾಗಿ ಹೆಮ್ಮರವಾಗಿ ಬೆಳೆದಿದೆ ಎಂದರು.

ಇಂದಿನ ಸಿನಿಮಾರಂಗಕ್ಕೂ ನಾಟಕಗಳು ಮೂಲ. ಮೊದಲು ಗ್ರಾಮೀಣ ರಂಗಭೂಮಿ, ನಂತರ ಸಂಚಾರಿ ನಾಟಕಮಂಡಳಿಗಳು, ನಂತರ ಹವ್ಯಾಸಿ ರಂಗಭೂಮಿ ತನ್ನನ್ನು ವಿಸ್ತರಿಸಿಕೊಂಡು, ಇಂದಿಗೂ ನಾಟಕ ಜೀವಂತ ಕಲೆಯಾಗಿ ಸ್ವಂತಿಕೆ ಉಳಿಸಿಕೊಂಡಿದೆ ಎಂದರು.

ಕಾರ್ಯಕ್ರಮದಲ್ಲಿ ಸಿದ್ದಮಲ್ಲೇಶ್ವರ ವಿರಕ್ತಮಠದ ಚನ್ನಬಸವಸ್ವಾಮೀಜಿ, ಇಎನ್‌ಟಿ ಸಂಘದ ರಾಜ್ಯಾಧ್ಯಕ್ಷ ಡಾ.ಎ.ಆರ್.ಬಾಬು, ಚೇತನ ಕಲಾವಾಹಿನಿ ಅಧ್ಯಕ್ಷ ಜಿ.ರಾಜಪ್ಪ, ರಂಗಕಲಾವಿದ ನಂಜಯ್ಯ ಇತರರಿದ್ದರು.

ರಾಜ್ಯ ಬಜೆಟ್‌ನಲ್ಲಿ ವಿಕಲಚೇತನರ ಬೇಡಿಕೆ ಪರಿಗಣಿಸುವಂತೆ ಆಗ್ರಹಿಸಿ ಮೌನ ಪ್ರತಿಭಟನೆ



ಚಾಮರಾಜನಗರ, ಫೆ4– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಡಿಸಲಿರುವ ಆಯವ್ಯಯದಲ್ಲಿ ವಿಕಲಚೇತನರ ಬೇಡಿಕೆಗಳನ್ನು ಪರಿಗಣಿಸಬೇಕು ಎಂದು ಆಗ್ರಹಿಸಿ ಜಿಲ್ಲಾ ಅಂಗವಿಕಲ ಕ್ಷೇಮಾಭಿವೃದ್ಧಿ ಸಮಿತಿ ವತಿಯಿಂದ ನಗರದಲ್ಲಿ ಮೌನ ಪ್ರತಿಭಟನೆ ನಡೆಯಿತು.

ನಗರದ ಜಿಲ್ಲಾಡಳಿತ ಭವನದ ಮುಖ್ಯ ಗೇಟ್ ಮುಂಭಾಗದಲ್ಲಿ ಸಮಿತಿ ಜಿಲ್ಲಾಧ್ಯಕ್ಷ ಎಂ.ರಮೇಶ್ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಜಿಲ್ಲಾಡಳಿತ ಭವನದ ಮುಂಭಾಗಕ್ಕೆ ತೆರಳಿ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪ್ರತಿಭಟನೆ ನೇತೃತ್ವ ವಹಿಸಿದ್ದ ಸಮಿತಿಯ ಜಿಲ್ಲಾಧ್ಯಕ್ಷ ಎಂ.ರಮೇಶ್ ಮಾತನಾಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ವಿಕಲಚೇತನರು ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯನ್ನು ಬೇರ್ಪಡಿಸಿ ಪ್ರತ್ಯೇಕ ವಿಕಲಚೇತನರಿಗೆ ಸಚಿವಾಲಯವನ್ನು ತೆರೆಯಬೇಕು.ವಿಕಲಚೇತನರಿಗೆ ಮೀಸಲಿಟ್ಟ 26 ಸಾವಿರ ಬ್ಯಾಕ್‌ಲಾಗ್ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ಈಗ ನೀಡುತ್ತಿರುವ ವಿಕಲಚೇತನರ ರಿಯಾಯಿತಿ ಬಸ್ ಪಾಸನ್ನು 100 ಕಿ.ಮೀ ವ್ಯಾಪ್ತಿಯಿಂದ ರಾಜ್ಯಾದ್ಯಂತ ವಿಸ್ತರಣೆ ಮಾಡಬೇಕು. ವಿಕಲಚೇತನರಿಗೆ ನೀಡುತ್ತಿರುವ ಮಾಸಾಶನವನ್ನು 5 ಸಾವಿರ ರೂ.ಗೆ ಏರಿಕೆ ಮಾಡಬೇಕು. ಆರೈಕೆದಾರರಿಗೆ ಸರ್ಕಾರಿ ಸವಲತ್ತು ನೀಡಬೇಕು. ರಾಜ್ಯದಲ್ಲಿ ಗೌರವಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಎಂಆರ್‌ಡಬ್ಲ್ಯೂ ವಿಆರ್‌ಡಬ್ಲ್ಯೂಗಳ ಗೌರವಧನವನ್ನು ತೆಗೆದು ಹಾಕಿ ಕನಿಷ್ಠ ವೇತನ ನೀಡುವುದು, ಸೇವಾ ಭದ್ರತೆ ಒದಗಿಸುವುದು, ಸಹಾಯವಾಣಿಯವರ ಸಹಾಯಕರನ್ನು ಖಾಯಂ ಮಾಡಬೇಕು ಎಂದು ರಮೇಶ್ ಒತ್ತಾಯಿಸಿದರು.

ಸಮಿತಿಯ ಜಿಲ್ಲಾ ಗೌರವ ಅಧ್ಯಕ್ಷ ಎನ್.ಕೃಷ್ಣಮೂರ್ತಿ, ತಾಲೂಕು ಅಧ್ಯಕ್ಷ ರೂಪೇಶ್, ಪ್ರಧಾನ ಕಾರ್ಯದರ್ಶಿ ವಜ್ರಮನಿ, ಗೌರಮ್ಮ, ಸಿದ್ದಯ್ಯ, ಬ್ಯಾಡಮೂಡ್ಲು ಕೃಷ್ಣ, ಮಹೇಶ್, ಪುಟ್ಟಮಾದಯ್ಯ ಇತರರು ಭಾಗವಹಿಸಿದ್ದರು.





ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಶ್ರೀಮತಿ ರೇವಮ್ಮ
ಲಲಿತಾದ್ರಿಪುರ, ಮೈಸೂರು.

ಇವರು ಮಾಡುವ ವಿಜ್ಞಾಪನೆಗಳು
ನನ್ನ ಪೂಜ್ಯ ಪತಿಯವರಾದ
ಶ್ರೀ ಎಲ್. ಮಹದೇವು ರವರು
ಪ್ರಥಮ ದರ್ಜೆ ಗುತ್ತಿಗೆದಾರರು
ದಿನಾಂಕ : 26-01-2023
ಗುರುವಾರದಂದು ಶಿವೈಕ್ಯರಾದರೆಂದು
ತಿಳಿಸಲು ವಿಷಾದಿಸುತ್ತೇವೆ.
ತತ್ಸಂಬಂಧ ಕೈಲಾಸಗಣಾರಾಧನಾ
ಕಾರ್ಯವನ್ನು
ದಿನಾಂಕ : 05-02-2023ನೇ
ಭಾನುವಾರ ಬೆಳಿಗ್ಗೆ 09-00 ಗಂಟೆಗೆ
ನಮ್ಮ ಸ್ವಗೃಹದಲ್ಲಿ ಏರ್ಪಡಿಸಿದ್ದು,
ಆಹ್ವಾನ ಪತ್ರಿಕೆ ತಲುಪದಿದ್ದವರು
ಇದನ್ನೇ ವೈಯಕ್ತಿಕ ಆಹ್ವಾನವೆಂದು
ತಿಳಿದು ಆಗಮಿಸಿ ಶಿವೈಕ್ಯರ
ಆತ್ಮಕ್ಕೆ ಚಿರಶಾಂತಿ
ಕೋರಬೇಕಾಗಿ ವಿನಂತಿ.

ಬೆಳಿಗ್ಗೆ : 9.30ಕ್ಕೆ
ದಿವ್ಯ ಪಾದಪೂಜೆ :
ಪೂಜ್ಯ ಶ್ರೀ ಷ|| ಹ|| ಬ್ರ||
ಶ್ರೀ ಗುರುಶಾಂತಸ್ವಾಮಿಗಳು
ಕುದೇರು ಮಠ, ಮೈಸೂರು.
ಭಜನೆ :
ಶ್ರೀ ಬಸವರಾಜಸ್ವಾಮಿಗಳು
ಮತ್ತು ತಂಡದವರಿಂದ
ಬಸಳ್ಳಿಹುಂಡಿ ಮಠ

ಸ್ಥಳ : ಸ್ವಗೃಹ,
ಲಲಿತಾದ್ರಿಪುರ, ಮೈಸೂರು.
ಭೋಜನ : ಮಧ್ಯಾಹ್ನ 12 ಗಂಟೆಗೆ

ಇಂತಿ ದುಃಖತಪ್ತರು :
ಶ್ರೀಮತಿ ರೇವಮ್ಮ
ಹಾಗೂ ಕುಟುಂಬವರ್ಗದವರು

ರಾತ್ರಿ 7.30 ಕ್ಕೆ ಶಿವಕಥೆ : ಶ್ರೀ ಶಿವಕುಮಾರಶಾಸ್ತ್ರಿ ಮತ್ತು ತಂಡದವರಿಂದ, ಬದನವಾಳು



ಮೈಸೂರು ಮಿತ್ರ

ಐದನೇ ಪುಟದಿಂದ

ಚುನಾವಣಾ ಉಸ್ತುವಾರಿ ಧರ್ಮೇಂದ್ರ ಪ್ರಧಾನ್

ಪ್ರಧಾನ್ ಅವರನ್ನು ತೊಡಗಿಸಿಕೊಂಡೇ ಬಂದಿದೆ. ಮುಖ್ಯಮಂತ್ರಿ ಹುದ್ದೆಯಿಂದ ಯಡಿಯೂರಪ್ಪ ಇಳಿದ ನಂತರ ಹೊಸ ನಾಯಕನ ಆಯ್ಕೆ ಸಂದರ್ಭದಲ್ಲೂ ಅವರು ಪ್ರಮುಖ ಪಾತ್ರ ವಹಿಸಿದ್ದರು. ಚುನಾವಣಾ ತಂತ್ರಗಾರಿಕೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ತಂಡದ ಜೊತೆ ಜೊತೆಯಲ್ಲೇ ಹೆಜ್ಜೆ ಇಡುತ್ತಿರುವ ಪ್ರಧಾನ್ ಕರ್ನಾಟಕದಲ್ಲೂ ಚಮತ್ಕಾರ ನಡೆಸಲಿದ್ದಾರೆ ಎಂಬ ವಿಶ್ವಾಸದಿಂದ ಅವರನ್ನು ನಿಯೋಜಿಸಲಾಗಿದೆ. ಕರ್ನಾಟಕದ ಪ್ರತಿ ನಾಯಕ ಮತ್ತು ಕಾರ್ಯಕರ್ತನೂ ಪ್ರಧಾನ್‌ಗೆ ಪರಿಚಯವಿದ್ದಾರೆ. ಇಡೀ ರಾಜ್ಯದ ಉದ್ದಗಲಕ್ಕೂ ಅವರು ಸಂಚರಿಸಿ, ಕಾರ್ಯಕರ್ತರ ನಾಡಿಮಿಡಿತ ಅರಿತಿದ್ದಾರೆ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಕೇಂದ್ರ ಅವರನ್ನು ಆಯ್ಕೆ ಮಾಡಿದೆ. ಅದರ ಜೊತೆಗೆ ಕೇಂದ್ರ ಸಚಿವ ಪಿಯುಷ್ ಗೋಯೆಲ್ ಚುನಾವಣೆಯ ಸಂಘಟನಾಕಾರಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.

ಅಣ್ಣಾಮಲೈ ಸಹ ರಾಜ್ಯದಲ್ಲಿ ಪೊಲೀಸ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. ಅವರಿಗೂ ಇಲ್ಲಿನ ಸ್ಥಿತಿಗತಿಗಳು ತಿಳಿದಿದೆ. ಇದನ್ನು ಗಮನದಲ್ಲಿಟ್ಟುಕೊಂಡು ವರಿಷ್ಠರು ಅವರನ್ನೂ ಸಹ ಉಸ್ತುವಾರಿಯನ್ನಾಗಿ ನೇಮಕ ಮಾಡಿದ್ದಾರೆ.

ಪೂರ್ಣ ಪ್ರಮಾಣದಲ್ಲಿ ಬೆಳಗಲಿದೆ

ಪೂರ್ಣಗೊಂಡಿದೆ. ಹೈಮಾಸ್ಟ್ ದೀಪ ಅಳವಡಿಸುವ ಕಾಮಗಾರಿ ಮಾತ್ರ ಬಾಕಿಯಿದೆ. ನಗರದಲ್ಲಿ 4,300 ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಲು ಉದ್ದೇಶಿಸಲಾಗಿದ್ದು, ಅವುಗಳಲ್ಲಿ 4,236 ಬಲ್ಬ್‌ಗಳ ಅಳವಡಿಕೆ ಪೂರ್ಣಗೊಂಡಿದೆ. 60 ಮಿನಿ ಹೈಮಾಸ್ಟ್ ಲೈಟ್ ಅಳವಡಿಕೆ ಬಾಕಿ ಇದೆ. 18 ಡಾರ್ಕ್‌ಸ್ಪಾಟ್‌ಗಳನ್ನು ಗುರುತಿಸಲಾಗಿದ್ದು, ಆ ಜಾಗಗಳಲ್ಲಿ ಮಿನಿ ಹೈಮಾಸ್ಟ್ ಲೈಟ್ ಅಳವಡಿಸಲಾಗುವುದು. ದೀಪಗಳನ್ನು ಆನ್ ಮತ್ತು ಆಫ್ ಮಾಡಲು ಸೆಂಟ್ರಲೈಸ್ಡ್ ಕಂಟ್ರೋಲ್ ಆ್ಯಂಡ್ ಮೋನಿಟರಿಂಗ್ ಸಿಸ್ಟಮ್ (ಸಿಸಿಎಂಎಸ್)ಗಳನ್ನು 90 ಕಡೆಗಳಲ್ಲಿ ಅಳವಡಿಸಲು ಉದ್ದೇಶಿಸಲಾಗಿದೆ. ಈಗಾಗಲೇ 70 ಕಡೆಗಳಲ್ಲಿ ಅಳವಡಿಸಲಾಗಿದೆ. ಇನ್ನು ಎರಡು ಮೂರು ದಿನಗಳ ಒಳಗೆ ಉಳಿದ 20 ಸಿಸ್ಟಮ್ ಅಳವಡಿಕೆ ಕಾರ್ಯ ಪೂರ್ಣಗೊಳಿಸಲಾಗುವುದು. ಇದೇ ವೇಳೆ 20 ಹೈಮಾಸ್ಟ್ ಲೈಟ್ ಅಳವಡಿಸಲಾಗುವುದು. ಹೈಮಾಸ್ಟ್ ಲೈಟ್ ಪೂರೈಕೆಯಲ್ಲಿ ವಿಳಂಬವಾಗಿದ್ದು, ಇನ್ನು 15 ರಿಂದ 20 ದಿನದೊಳಗೆ ಅಳವಡಿಸಲು ಕ್ರಮಕೈಗೊಳ್ಳಲಾಗುವುದು ಎಂದರು. ಸಭೆಯಲ್ಲಿ ಗುತ್ತಿಗೆದಾರರು ಮಾತನಾಡಿ, ರಿಂಗ್ ರಸ್ತೆಯ ಕೆಲವೆಡೆ ಕಂಬಗಳು ದುರ್ಬಲಗೊಂಡಿವೆ. ಇದಲ್ಲದೇ ಕೆಲವೆಡೆ ಅಪಘಾತ, ಇನ್ನಿತರ ಕಾರಣಗಳಿಂದ ಕಂಬಗಳು ಮುರಿದು ಹೋಗಿವೆ. ಅಂತಹ ಕಂಬಗಳನ್ನು ಬದಲಿಸಿ ಹೊಸ ಕಂಬಗಳನ್ನು ಅಳವಡಿಸಲಾಗುತ್ತಿದೆ. ಮತ್ತೆ ಕೆಲವೆಡೆ ಇರುವ ಕಂಬಗಳಿಗೆ ಕಾಂಕ್ರಿಟ್ ಹಾಕಿ ನಿಲ್ಲಿಸಬೇಕಿದೆ. ಕ್ಯೂರಿಂಗ್ ಆಗಲು ಕನಿಷ್ಠ 20 ದಿನ ಬೇಕಾಗುತ್ತದೆ ಎಂದು ತಿಳಿಸಿದರು.

ಅರಮನೆ ಸುತ್ತಮುತ್ತ ಬೀದಿ ಬದಿ ವ್ಯಾಪಾರಿಗಳ ಸ್ಥಳಾಂತರಿಸಲು ಸೂಚನೆ: ಮೈಸೂರಿನ ಪ್ರಮುಖ ಪ್ರವಾಸಿ ತಾಣವಾದ ಅರಮನೆಯ ಸುತ್ತಲೂ ರಾಜ ಮಾರ್ಗದ ಎರಡೂ ಬದಿಯಲ್ಲಿ ಬೀದಿ ವ್ಯಾಪಾರಿಗಳಿದ್ದಾರೆ. ಅರಮನೆ ಸುತ್ತಮುತ್ತ ಸೌಂದರ್ಯ ಕಾಪಾಡಲು ಇಂತಹ ವ್ಯಾಪಾರಿಗಳನ್ನು ಸ್ಥಳಾಂತರಿಸುವಂತೆಯೂ ಅಧಿಕಾರಿಗಳಿಗೆ ಸಂಸದ ಪ್ರತಾಪ ಸಿಂಹ ಸೂಚನೆ ನೀಡಿದ್ದಾರೆ. ಮೈಸೂರು, ರಾಜ್ಯದ ದೊಡ್ಡ, ಸುಂದರ ನಗರವಾಗಿ ರೂಪುಗೊಳ್ಳುತ್ತಿದೆ. ದಶಪಥ, ರೈಲ್ವೆ, ವಿಮಾನ ಸೌಲಭ್ಯಗಳು ದೊರೆತಿವೆ. ಪ್ರವಾಸಿಗರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಸನ್ನಿವೇಶಕ್ಕೆ ತಕ್ಕಂತೆ ನಗರದಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳುವುದು ಅನಿವಾರ್ಯ. ರಾಜ ಮಾರ್ಗದಲ್ಲಿ ಸಂಚರಿಸುವ ಪ್ರವಾಸಿಗರು, ನಾಗರಿಕರಿಗೆ ರಸ್ತೆ ಬದಿ ವ್ಯಾಪಾರಸ್ಥರಿಂದ ಹಾಗೂ ಓಡಾಡಿಕೊಂಡು ವ್ಯಾಪಾರ ಮಾಡುವವರಿಂದ ಸಮಸ್ಯೆಯಾಗುತ್ತಿದೆ. ಸಂಚಾರ ದಟ್ಟಣೆಯೂ ಕಂಡು ಬರುತ್ತಿದೆ. ಮಂಗಳಮುಖಿಯರು ವಾಹನ ಸವಾರರನ್ನು ಪೀಡಿಸುವುದು ಹೆಚ್ಚಾಗಿದೆ. ಕೂಡಲೇ ಈ ಸಮಸ್ಯೆ ಬಗೆಹರಿಸಬೇಕು ಎಂದು ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ ಅವರಿಗೆ ಸೂಚನೆ ನೀಡಿದರು.

ಬೀದಿ ಬದಿ ವ್ಯಾಪಾರಿಗಳಿಗೆ ಸೂಕ್ತ ವ್ಯವಸ್ಥೆ: ಪ್ರತಿಯೊಂದು ವಾರ್ಡ್‌ನಲ್ಲಿಯೂ ಜನರಿಗೆ ಅಗತ್ಯ ವಸ್ತುಗಳು ಹಾಗೂ ಆಹಾರ ಸೇರಿದಂತೆ ಇನ್ನಿತರ ವಸ್ತುಗಳು ನಿಗದಿತ ಪ್ರತ್ಯೇಕ ಸ್ಥಳಗಳಲ್ಲಿ ದೊರೆಯುವಂತೆ ವ್ಯವಸ್ಥೆ ಮಾಡಬೇಕು. ಅರಮನೆ ಸುತ್ತಲ ವ್ಯಾಪಾರಿಗಳಿಗೆ ಪ್ರತ್ಯೇಕ ಸ್ಥಳದಲ್ಲಿ ವ್ಯಾಪಾರಕ್ಕೆ ಅವಕಾಶ ಮಾಡಿಕೊಡಬೇಕು. ಸಂಚಾರಕ್ಕೆ ತೊಂದರೆಯಾಗದಂತೆ ಜನರಿಗೂ ಅನುಕೂಲವಾಗುವಂತೆ, ವ್ಯಾಪಾರಿಗಳಿಗೂ ಯಾವುದೇ ತೊಂದರೆಯಾಗದಂತೆ ಸ್ಥಳ ಪರಿಶೀಲನೆ ಮಾಡಲು ದಿನಾಂಕ ನಿಗದಿಗೊಳಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಭಾರತದತ್ತ ಮುಖ ಮಾಡಿದ ವಿಶ್ವ ನಾಯಕರು

ನಡುವಿನ ಯುದ್ಧವನ್ನು ಮೊದಲು ತಿರಸ್ಕರಿಸಿದ ದೇಶ ಭಾರತ. ಭಾರತವು ರಷ್ಯಾ, ಯುನೈಟೆಡ್ ಸ್ಟೇಟ್ಸ್ ಮತ್ತು ಯುರೋಪಿಯನ್ ದೇಶಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ. ಅದಾಗ್ಯೂ ಭಾರತ ತನ್ನ ಹಿತದೃಷ್ಟಿಗೆ ಪೂರಕ ನಿಲುವನ್ನು ತೆಗೆದುಕೊಂಡಿದೆ ಎಂದರು.

ಮಾನವೀಯತೆ ಮೆರೆದ ಭಾರತ: ಮಾರಣಾಂತಿಕ ಕೋವಿಡ್–19 ಸಾಂಕ್ರಾಮಿಕವು ಜಗತ್ತಿಗೆ ಅಪ್ಪಳಿಸಿದ ಸಂದರ್ಭದಲ್ಲಿ ಯಾವುದೇ ದೇಶಗಳು ಮತ್ತು ಅವರ ವಿಜ್ಞಾನಿಗಳು ಈ ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡುವ ಬಗ್ಗೆ ಯಾವುದೇ ಸುಳಿವು ಹೊಂದಿರಲಿಲ್ಲ. ಅನೇಕ ಅಭಿವೃದ್ಧಿ ಹೊಂದಿದ ದೇಶಗಳು ಲಸಿಕೆಗಳನ್ನು ಕಂಡು ಹಿಡಿದವು. ಅಲ್ಲದೆ, ತಮ್ಮ ಅಗತ್ಯಕ್ಕಿಂತಲೂ ಹೆಚ್ಚು ಸಂಗ್ರಹ ಮಾಡಿದವು. ಇದೇ ಅವಕಾಶವನ್ನು ಬಳಸಿಕೊಂಡು ತಮ್ಮ ಫಾರ್ಮಾ ಕಂಪನಿಗಳ ಲಾಭಕ್ಕಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದವು. ಆದರೆ ಭಾರತ ಇಂತಹ ಸನ್ನಿವೇಶವನ್ನು ಹಣಗಳಿಸುವ ಅವಕಾಶವೆಂದು ನೋಡದೇ ಮಾನವೀಯತೆ ಮೆರೆಯಿತು. 120 ರಾಷ್ಟ್ರಗಳಿಗೆ ಉಚಿತವಾಗಿ ಲಸಿಕೆಗಳನ್ನು ನೀಡಿತು. ಲಸಿಕೆಗಳನ್ನು ಕಂಡು ಹಿಡಿದ ಭಾರತೀಯ ವಿಜ್ಞಾನಿಗಳಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದು ತಿಳಿಸಿದರು. ಚೀನಾ ಸಾಲದಿಂದ ಶ್ರೀಲಂಕಾದ ಸಾರ್ವಭೌಮತ್ವ ಮತ್ತು ಸಮಗ್ರತೆಗೆ ಧಕ್ಕೆ ಬರುವ ಸಂದರ್ಭ ಎದುರಾದಾಗ, ಭಾರತವೇ ಶ್ರೀಲಂಕಾಗೆ ಐದು ಶತಕೋಟಿ ಡಾಲರ್ ನೆರವು ನೀಡಿತು. ಈ ನೆರವಿನಿಂದ ಶ್ರೀಲಂಕಾದಲ್ಲಿ ಆಸ್ಪತ್ರೆ, ಶಾಲೆ, ರಸ್ತೆಗಳ ನಿರ್ಮಾಣ ಸಾಧ್ಯವಾಯಿತು. ಜೊತೆಗೆ ಲಂಕಾದವರು ಜೀವನಮಟ್ಟ ಸುಧಾರಿಸಿತು. ಭಾರತವು ಪಾಶ್ಚಿಮಾತ್ಯ ದೇಶಗಳಿಗಿಂತ ಭಿನ್ನ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಏಕೆಂದರೆ ಭಾರತವು ಅವುಗಳಂತೆ ರಾಜ ಪ್ರಭುತ್ವದಲ್ಲಿ ಉದಯಿಸದೇ ಸಾವಿರಾರು ವರ್ಷಗಳಿಂದ ಸಂಭವಿಸಿದ ನಾಗರಿಕತೆ ಮತ್ತು ಸಾಂಸ್ಕೃತಿಕ ವಿಕಾಸದಿಂದ ನೆಲೆಗೊಂಡಿದೆ ಎಂದು ಹೇಳಿದರು.

'ಭಾರತ್' ಪದ ಬಳಕೆಗೆ ಆದ್ಯತೆ: ತಿರು ಆರ್.ಎನ್.ರವಿ, ತಮ್ಮ ಭಾಷಣದ ಉದ್ದಕ್ಕೂ 'ಭಾರತ್' ಎಂದು ಸಂಬೋಧಿಸಿದರು. ಕೊನೆಯಲ್ಲಿ ಒಮ್ಮೆ ಮಾತ್ರವೇ 'ಇಂಡಿಯಾ' ಎಂದು ಉಚ್ಚರಿಸಿದರು. ಆ ಮೂಲಕ ರಾಷ್ಟ್ರದ ಸೊಗಡು ಮತ್ತು ಪರಂಪರೆಯಿಂದ ಬಂದ 'ಭಾರತ್' ಎಂಬ ಹೆಸರೇ ಸೂಕ್ತ ಎನ್ನುವ ಸಂದೇಶ ರವಾನಿಸಿರಬೇಕೆಂಬುದು ಅನೇಕ ಸಭಿಕರ ಅಭಿಪ್ರಾಯವಾಗಿತ್ತು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ್, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಪ್ರಕಟಣೆ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಸೇರಿದಂತೆ ಹಲವು ಗಣ್ಯರು ಹಾಜರಿದ್ದರು.

ಜನಚಳವಳಿ ಸ್ಪರ್ಶ ನೀಡಿದ ಪ್ರಧಾನಿ ಮೋದಿ

ಭವಿಷ್ಯ ರೂಪಿಸುವಲ್ಲಿ ಜಿ–20 ರಾಷ್ಟ್ರಗಳ ಒಕ್ಕೂಟದ ಪಾತ್ರ ಎಷ್ಟು ಮಹತ್ತರ ಎಂಬುದು ನಮಗೆ ತಿಳಿದಿದೆ. ಜಿ–20ರ ಸದಸ್ಯ ರಾಷ್ಟ್ರಗಳ ಜೊತೆಗೆ ಇಡೀ ಜಗತ್ತೇ ಭವಿಷ್ಯದ ಹಾದಿಯನ್ನು ತೋರಿಸಲು ಭಾರತದಿಂದ ಹೆಚ್ಚಿನ ನಿರೀಕ್ಷೆಗಳನ್ನು ಹೊಂದಿವೆ ಎಂದರು. ಭಾರತ ಸರ್ಕಾರದ ಎಲ್ಲಾ ಯೋಜನೆ ಮತ್ತು ಕಾರ್ಯಕ್ರಮಗಳ ಮಾದರಿಯಲ್ಲಿ ಜಿ–20ರ ಅಧ್ಯಕ್ಷತೆಯನ್ನು ಒಂದು ಜನ ಚಳುವಳಿಯಾಗಿ ನಮ್ಮ ಪ್ರಧಾನಿ ಮೋದಿ ಮಾಡಿದ್ದಾರೆ. ಮೋದಿಯವರ ಕ್ರಿಯಾಶೀಲ ಮತ್ತು ದೂರದೃಷ್ಟಿಯ ನಾಯಕತ್ವದಲ್ಲಿ ನವ ಭಾರತ ನಿರ್ಮಾಣಗೊಳ್ಳುತ್ತಿದೆ. ಆತ್ಮವಿಶ್ವಾಸ ಮತ್ತು ಸಮರ್ಥ ಭಾರತವು ತನ್ನ ವೈಭವಯುತ ಪರಂಪರೆ ಬಗ್ಗೆ ಹೆಮ್ಮೆಯೊಂದಿದೆ. 2047ರ ವೇಳೆಗೆ ವಿಶ್ವಕ್ಕೆ ನಾಯಕ ಸ್ಥಾನ ಹೊಂದುವ ಬಗ್ಗೆ ಭಾರತ ಜಾಗೃತವಾಗಿ ಕಾರ್ಯನಿರ್ವಹಿಸುತ್ತಿದ್ದು, 'ವಸುಧೈವ ಕುಟುಂಬಕಂ' (ವಿಶ್ವವೇ ಒಂದು ಕುಟುಂಬ) ಎಂಬ ಬಗ್ಗೆ ಬದ್ಧತೆ ಹೊಂದಿದೆ ಎಂದು ಹೇಳಿದರು.

ಸುತ್ತೂರು ಮಠದ ಸೇವಾ ಕಾರ್ಯದ ಸ್ಮರಣೆ

ಸುತ್ತೂರು ಮಠ ರಾಷ್ಟ್ರಕ್ಕೆ ಅಪಾರ ಸೇವೆ ಸಲ್ಲಿಸುತ್ತಿದೆ. ಇದಕ್ಕಾಗಿ ಮಠಕ್ಕೆ ಅಭಿನಂದಿಸುವುದಾಗಿ ತಿಳಿಸಿದ ತಮಿಳುನಾಡು ರಾಜ್ಯಪಾಲ ತಿರು ಆರ್.ಎನ್.ರವಿ, ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಕೊಡುಗೆಗಳನ್ನು ಸ್ಮರಿಸಿದರು. ಭಾರತದ ವಿಶಾಲ ಭೌಗೋಳಿಕತೆ, ಸಂಪನ್ಮೂಲ, ಆರ್ಥಿಕತೆ, ಶಿಕ್ಷಣ ಮತ್ತು ಆಧ್ಯಾತ್ಮಿಕತೆ ನಾಶ ಮಾಡಿದ ಬ್ರಿಟಿಷರು, ದೇಶ ತೊರೆದ ಸಂದರ್ಭದಲ್ಲಿ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು ಯುವ ಮನಸ್ಸುಗಳಿಗೆ ಶಿಕ್ಷಣ, ಆಹಾರ, ವಸತಿ ಮತ್ತು ಆಧ್ಯಾತ್ಮಿಕ ತರಬೇತಿ ನೀಡಲು ಜೆಎಸ್‌ಎಸ್ ಮಹಾವಿದ್ಯಾಪೀಠ ಸ್ಥಾಪಿಸಿದರು. ಆ ಮೂಲಕ ಭಾರತದ ಭವಿಷ್ಯಕ್ಕೆ ತಮ್ಮ ಅಪಾರ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ಜವಾಬ್ದಾರಿಯುತ ಸ್ಥಾನದಲ್ಲಿದ್ದೂ ಭಾರತದ ಅಭಿವೃದ್ಧಿ ವಿಚಾರದಲ್ಲಿ 'ಬ್ರಿಟಿಷ್ ಸರ್ಕಾರ' ಉಲ್ಲೇಖಿಸುವವರ ಬಗ್ಗೆ ಟೀಕಾಪ್ರಹಾರ ನಡೆಸಿದ ತಿರು ಆರ್.ಎನ್.ರವಿ, ಭಾರತದ ಜನತೆ ತಮ್ಮ ತಾಯ್ನೆಲದ ಪರಂಪರೆಯ ಬಗ್ಗೆ ಹೆಮ್ಮೆಪಡಬೇಕು. ವಸಾಹತುಶಾಹಿ ಆಳ್ವಿಕೆಯ ಪ್ರಭಾವದಿಂದ ತಮ್ಮನ್ನು ತಾವು ಮಾನಸಿಕವಾಗಿ ಮುಕ್ತಗೊಳಿಸಿಕೊಳ್ಳಬೇಕು. ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರು ಬ್ರಿಟಿಷ್ ಸರ್ಕಾರ ಇಲ್ಲದೇ ಇದ್ದರೆ ನಮ್ಮ ದೇಶದ ಅಭಿವೃದ್ಧಿಯೇ ಆಗುತ್ತಿರಲಿಲ್ಲ ಎಂದು ಇಂದಿಗೂ ಉಲ್ಲೇಖಿಸುವುದು ಬೇಸರದ ಸಂಗತಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಅಂತಾರಾಜ್ಯ ಗಡಿ, ಜಲವಿವಾದಗಳನ್ನು ನಿಯಂತ್ರಿಸುವ ಕಾನೂನು' ಕುರಿತ ವಿಚಾರ ಸಂಕಿರಣ

ಮೇಕೆದಾಟು ಯೋಜನೆ ನ್ಯಾಯಾಲಯಕ್ಕೆ ಹೋಗಿದ್ದು ಸೂಕ್ತವಲ್ಲ

ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ ಬೇಸರ



ಮೈಸೂರಿನ ವಿವಿಇಟಿ ಆವರಣದಲ್ಲಿ ನಡೆದ 'ಅಂತಾರಾಜ್ಯ ಗಡಿ ಮತ್ತು ಜಲ ವಿವಾದಗಳನ್ನು ನಿಯಂತ್ರಿಸುವ ಕಾನೂನು' ಕುರಿತ ಸೆಮಿನಾರ್‌ಗೆ ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿ ಚಾಲನೆ ನೀಡಿದರು. ಚಿತ್ರದಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ, ಕರ್ನಾಟಕ ಕಾನೂನು ಸಂಸದೀಯ ಸುಧಾರಣೆಗಳ ಸಂಸ್ಥೆಯ ನಿರ್ದೇಶಕ. ಕೆ.ದ್ವಾರಕನಾಥ್ ಬಾಬು, ವಿವಿಇಟಿ ಅಧ್ಯಕ್ಷರಾದ ಮಾಜಿ ಶಾಸಕ ವಾಸು, ಕಾರ್ಯದರ್ಶಿ ವಿ.ಕವೀಶ್‌ಗೌಡ, ಮಾಜಿ ಅಡ್ವೋಕೆಟ್ ಜನರಲ್ ಉದಯ ಹೊಳ್ಳ ಅವರನ್ನು ಕಾಣಬಹುದು.

ಮೈಸೂರು, ಫೆ.4(ಆರ್‌ಕೆಬಿ)– ರಾಮನಗರ ಜಿಲ್ಲೆಯ ಮೇಕೆದಾಟು ಯೋಜನೆ ಕುರಿತು ಕರ್ನಾಟಕ ಮತ್ತು ತಮಿಳುನಾಡು ನಡುವೆ ವಿವಾದ ಸೃಷ್ಟಿಯಾಗಿ ಅದು ನ್ಯಾಯಾಲಯದ ಕಟಕಟೆ ಹತ್ತಿದ್ದು ಸೂಕ್ತವಲ್ಲ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ ಇಂದಿಲ್ಲಿ ಅಭಿಪ್ರಾಯಪಟ್ಟರು.

ತಮಿಳುನಾಡು ಸರ್ಕಾರವು ಅನಗತ್ಯವಾಗಿ ವಿವಾದವನ್ನು ನ್ಯಾಯಾಲಯಕ್ಕೆ ಕೊಂಡೊಯ್ಯಿತು. ಪಟ್ಟಭದ್ರ ಹಿತಾಸಕ್ತಿ ಹೊಂದಿರುವ ಕೆಲವರು ವಿವಾದಗಳನ್ನು ಹುಟ್ಟುಹಾಕುತ್ತಾರೆ. ಅದರಿಂದಾಗಿ ಇಂತಹ ಸಮಸ್ಯೆಗಳು ಬಗೆಹರಿಯದೇ ಉಳಿದಿವೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣೆಗಳ ಸಂಸ್ಥೆ ಮತ್ತು ವಿದ್ಯಾವಿಕಾಸ ಎಜುಕೇಷನಲ್ ಟ್ರಸ್ಟ್ (ವಿವಿಇಟಿ) ಸಹಯೋಗದಲ್ಲಿ ವಿದ್ಯಾವಿಕಾಸ ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್ ಮೈಸೂರಿನ ಬನ್ನೂರು ರಸ್ತೆಯಲ್ಲಿರುವ ವಿವಿಇಟಿ ಆವರಣದಲ್ಲಿರುವ ಸಂಸ್ಥೆಯ ಲಲಿತಾ ಸ್ಮಾರಕ ಭವನದಲ್ಲಿ ಶನಿವಾರ ಏರ್ಪಡಿಸಿದ್ದ 'ಅಂತಾರಾಜ್ಯ ಗಡಿ ಮತ್ತು ಜಲವಿವಾದಗಳನ್ನು ನಿಯಂತ್ರಿಸುವ ಕಾನೂನು' ಕುರಿತ ಸೆಮಿನಾರ್‌ನಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಕರ್ನಾಟಕಕ್ಕೆ ಸಂಬಂಧಿಸಿದ ಹಲವಾರು ಜಲವಿವಾದಗಳನ್ನು ಉಲ್ಲೇಖಿಸಿದ ಸಚಿವ ಮಾಧುಸ್ವಾಮಿ, ಅತ್ತ ಆಂಧ್ರಪ್ರದೇಶ, ಇತ್ತ ತಮಿಳುನಾಡು ಹೀಗೆ ನೀರು ಬಿಟ್ಟುಕೊಡುತ್ತಾ, ನಾವು 'ಅತಿಥಿ ದೇವೋ ಭವ' ಎಂಬಂತಾಗಿದ್ದೇವೆ ಎಂದು ವಿಷಾದಿಸಿದರು.

ನದಿ ನೀರಿನ ವಿವಾದಗಳನ್ನು ಕಾನೂನು ವ್ಯಾಪ್ತಿಯಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಚರ್ಚಿಸಬೇಕು. ಇದಕ್ಕಾಗಿ ರಾಜ್ಯವನ್ನು ಪ್ರತಿನಿಧಿಸುವ ನಾಯಕತ್ವದ ಕೊರತೆ ಇದೆ. ಅಂತಹ ವಿವಾದಗಳನ್ನು ಕಾನೂನಿನ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಚರ್ಚಿಸಬೇಕು. ಅಲ್ಲದೆ, ಕೇಂದ್ರದಲ್ಲಿ ನಾನು ಸಮಸ್ಯೆಯನ್ನು ಬಗೆಹರಿಸಿಕೊಡಬಲ್ಲೇ ಎಂಬ ನಾಯಕತ್ವದ ಕೊರತೆಯಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಮತ್ತು ತಮಿಳುನಾಡು ನಡುವೆ ದೀರ್ಘಕಾಲದ ಕಾವೇರಿ ನದಿ ನೀರು ವಿವಾದದ ಕುರಿತು ಪ್ರಸ್ತಾಪಿಸಿದ ಕಾನೂನು ಸಚಿವರು, ಕಾವೇರಿ ನದಿಗೆ ಮಂಡ್ಯದ ಕನ್ನಂಬಾಡಿ ಕಟ್ಟೆ (ಕೃಷ್ಣರಾಜ ಸಾಗರ ಅಣೆಕಟ್ಟು) ನಿರ್ಮಾಣದ ಸಂದರ್ಭದಲ್ಲಿ ಬ್ರಿಟಿಷರ ಕಾಲದಲ್ಲಿ ಮೆಟ್ಟೂರು ಜಲಾಶಯಕ್ಕೆ ನೀರು ಬಿಡಲು ಲಿಖಿತವಾಗಿ ನೀಡಿದ್ದ ಭರವಸೆಯೇ ಇಷ್ಟೆಲ್ಲಾ ವಿವಾದಕ್ಕೆ ಕಾರಣವಾಗಿದೆ. ತಮಿಳುನಾಡಿನ ಮೆಟ್ಟೂರು ಅಣೆಕಟ್ಟು, ಕಾವೇರಿ ಜಲವಿವಾದಗಳ ನ್ಯಾಯಮಂಡಳಿಯ (ಸಿಡಬ್ಲ್ಯೂಡಿಟಿ) ತೀರ್ಪು ನಮ್ಮ ಪರವಾಗಿಲ್ಲದ ಕಾರಣ ವಿವಾದವು ದೀರ್ಘವಾಗುತ್ತಲೇ ಇದೆ. ಆದರೂ ನಂತರದ ವರ್ಷಗಳಲ್ಲಿ ನಾವು ನಮ್ಮ ಜಲಾನಯನ ಪ್ರದೇಶದಲ್ಲಿ ನೀರಾವರಿ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ವಿಫಲರಾಗಿದ್ದೇವೆ ಜಲವಿವಾದಗಳ ಪ್ರಸ್ತಾಪ ಬಂದಾಗಲೆಲ್ಲಾ ನಾವು ಕೈಕಟ್ಟಿ ಕುಳಿತುಕೊಂಡು ಸುಮ್ಮನಿರುತ್ತೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ, ಮಹಾರಾಷ್ಟ್ರ ಮತ್ತು ಇತರ ರಾಜ್ಯಗಳನ್ನು ಒಳಗೊಂಡಿರುವ ಅಂತಾರಾಜ್ಯ ಗಡಿ ವಿವಾದಗಳಿಗೆ ನಮ್ಮ ವಿಧಾನವೂ ಇದೇ ಆಗಿದೆ. ಗಡಿ ವಿವಾದದ (ಕರ್ನಾಟಕ ಮತ್ತು ಮಹಾರಾಷ್ಟ್ರದ ನಡುವೆ) ಮಹಾಜನ್ ಆಯೋಗದ ಶಿಫಾರಸುಗಳನ್ನು ನಾವು ಅರೆ ಮನಸ್ಸಿನಿಂದ ಅಂಗೀಕರಿಸಿದ್ದರೂ, ಮಹಾರಾಷ್ಟ್ರವು ಅದನ್ನು ವಿರೋಧಿಸುತ್ತಿದೆ. ಭಾಷೆಗಳ ಆಧಾರದ ಮೇಲೆ ಪ್ರತ್ಯೇಕ ರಾಜ್ಯ ರಚನೆಯ ಬೇಡಿಕೆಗೆ ನಾವು ಒಪ್ಪಿಗೆ ನೀಡಿದರೆ, ಮುಂದೊಂದು ದಿನ ಹಳೇ ಮೈಸೂರು ಪ್ರದೇಶ ಮಾತ್ರ ಉಳಿಯುವ ಪರಿಸ್ಥಿತಿ ಎದುರಾಗಬಹುದು ಎಂದು ಸಚಿವ ಮಾಧುಸ್ವಾಮಿ ಆತಂಕ ವ್ಯಕ್ತಪಡಿಸಿದರು.

ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣೆಗಳ ಸಂಸ್ಥೆಯ ನಿರ್ದೇಶಕ ಕೆ.ದ್ವಾರಕನಾಥ್ ಬಾಬು, ವಿವಿಇಟಿ ಅಧ್ಯಕ್ಷರೂ ಆದ ಮಾಜಿ ಶಾಸಕ ವಾಸು, ಕಾರ್ಯದರ್ಶಿ ವಿ.ಕವೀಶ್‌ಗೌಡ, ರಾಜ್ಯ ಕಾನೂನು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಪಿ.ಈಶ್ವರ ಭಟ್, ಮಾಜಿ ಅಡ್ವೋಕೆಟ್ ಜನರಲ್ ಉದಯ ಹೊಳ್ಳ ಇನ್ನಿತರರು ಉಪಸ್ಥಿತರಿದ್ದರು.

ನದಿ ನೀರಿನ ವಿವಾದವನ್ನು ಕೇಂದ್ರವೇ ಪರಿಹರಿಸಬೇಕಿತ್ತು

ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಅಭಿಮತ


ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರವೇ ಒಪ್ಪಿಗೆ ನೀಡಬೇಕಿತ್ತು. ಆದರೆ ಈ ವಿಚಾರ ಅನಗತ್ಯವಾಗಿ ನ್ಯಾಯಾಲಯಕ್ಕೆ ಹೋಗಿದೆ ಎಂದು ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಬೇಸರ ವ್ಯಕ್ತಪಡಿಸಿದರು.

'ಅಂತಾರಾಜ್ಯ ಗಡಿ ಮತ್ತು ಜಲವಿವಾದಗಳನ್ನು ನಿಯಂತ್ರಿಸುವ ಕಾನೂನು' ಕುರಿತ ಸೆಮಿನಾರ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಕಾವೇರಿ ವಿವಾದದ ಆರಂಭದಿಂದ ಇಲ್ಲಿಯವರೆಗೆ ನಡೆದುಬಂದ ದಾರಿ ಕುರಿತು ವಿವರಿಸಿದರು. ಕಾವೇರಿ ವಿವಾದ 100 ವರ್ಷಗಳಿಂದ ಇದೆ. ಇಂತಹ ನದಿ ನೀರಿನ ವಿವಾದಗಳನ್ನು ನ್ಯಾಯಾಲಯದವರೆಗೆ ಹೋಗಲು ಬಿಡದೇ ಕೇಂದ್ರ ಸರ್ಕಾರವೇ ತನ್ನ ಮಟ್ಟದಲ್ಲಿ ಬಗೆಹರಿಸಬೇಕಿತ್ತು ಎಂದರು.

ಇಂತಹ ವಿಚಾರಗಳ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆ, ವಿಚಾರ ಸಂಕಿರಣಗಳನ್ನು ಹೆಚ್ಚು ಆಯೋಜಿಸುವ ಮೂಲಕ ಇಂತಹ ವಿಚಾರಗಳನ್ನು ವಿವಾದಗೊಳಿಸದೆ ಬಗೆಹರಿಸಿಕೊಳ್ಳಬೇಕು ಎಂದು ಹೇಳಿದರು.

ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣೆಗಳ ಸಂಸ್ಥೆಯ ನಿರ್ದೇಶಕ ಕೆ.ದ್ವಾರಕನಾಥ್ ಬಾಬು, ವಿವಿಇಟಿ ಅಧ್ಯಕ್ಷರೂ ಆದ ಮಾಜಿ ಶಾಸಕ ವಾಸು, ಕಾರ್ಯದರ್ಶಿ ವಿ.ಕವೀಶ್‌ಗೌಡ, ರಾಜ್ಯ ಕಾನೂನು ವಿಶ್ವವಿದ್ಯಾಯಲದ ವಿಶ್ರಾಂತ ಕುಲಪತಿ ಪ್ರೊ.ಪಿ.ಈಶ್ವರ ಭಟ್, ಮಾಜಿ ಅಡ್ವೋಕೆಟ್ ಜನರಲ್ ಉದಯ ಹೊಳ್ಳ ಇನ್ನಿತರರು ಉಪಸ್ಥಿತರಿದ್ದರು.

ಭಕ್ತರ ಸಮ್ಮುಖದಲ್ಲಿ ಗಣಪತಿ ಸಚ್ಚಿದಾನಂದ ಶ್ರೀಗಳಿಗೆ ಕನಕಾಭಿಷೇಕ



ಮೈಸೂರು, ಫೆ.4(ಆರ್‌ಕೆಬಿ)– ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ವರ್ಷದ ಜನ್ಮ ದಿನೋತ್ಸವದ ಪ್ರಯುಕ್ತ ಆಶ್ರಮದಲ್ಲಿ ಸಹಸ್ರ ಚಂದ್ರ ದರ್ಶನ ಶಾಂತಿ ಮಹೋತ್ಸವದಲ್ಲಿ ಶನಿವಾರ ಪ್ರಧಾನಯಾಗ– ಆಯುಷ್ಯ ಹೋಮ, ಲಕ್ಷ್ಮಿ ನಾರಾಯಣ ಹೋಮಗಳು ನೆರವೇರಿದವು. ನಂತರ ಶ್ರೀಗಳು ಋತ್ವಿಕರಿಗೆ ದಶದಾನಗಳನ್ನು ನೀಡಿದರು.

ಸಹಸ್ರ ಚಂದ್ರದರ್ಶನ ಶಾಂತಿಯ ನಾಲ್ಕನೇ ದಿನವಾದ ಶನಿವಾರ ಗಣಪತಿ ಸೇರಿ ಎಲ್ಲಾ ದೇವರುಗಳಿಗೆ ಗಣಪತಿ ಸಚ್ಚಿದಾನಂದ ಶ್ರೀಗಳು ಹಾಗೂ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಯವರು ಧನ ಕನಕ ಸಹಿತ ಪೂಜೆ ನೆರವೇರಿಸಿದರು. ಇದೇ ವೇಳೆ ವಿಷ್ಣು ಸಹಸ್ರನಾಮ ಪಾರಾಯಣವೂ ನಡೆಯಿತು.


ಅತ್ಯಂತ ಪ್ರಮುಖವಾದ ಕನಕಾಭಿ ಷೇಕವನ್ನು ಭಕ್ತರ ಪರವಾಗಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ ಕಿರಿಯ ಶ್ರೀಗಳು ನೆರವೇರಿಸಿದರು. ಶ್ರೀಗಳ ಶಿರದ ಮೇಲೆ ಚಿನ್ನದ ನಾಣ್ಯಗಳನ್ನಿಟ್ಟು ದೇವಾನುದೇವತೆಗಳನ್ನು ಆವಾಹನೆ ಮಾಡಿದ ಜಲದಿಂದ ಕಿರಿಯ ಶ್ರೀಗಳು ಅಭಿಷೇಕ ಮಾಡಿ ಪೂಜಿಸಿ, ನಮಸ್ಕರಿಸಿದರು. ಆಧ್ಯಾತ್ಮಿಕ ಮೇರು ಪರ್ವತವಾದ ಶ್ರೀ ಗಣಪತಿ ಸಚ್ಚಿದಾ ನಂದ ಸ್ವಾಮೀಜಿಯವರಿಗೆ ಸಹಸ್ರಚಂದ್ರ ದರ್ಶನ ಶಾಂತಿ, ಕನಕಾಭಿಷೇಕ ನಡೆಯುತ್ತಿರುವುದು ಭಕ್ತರಲ್ಲಿ ಅತ್ಯಂತ ಸಡಗರ ಸಂಭ್ರಮ ತಂದಿದೆ.

ಶಾಸ್ತ್ರದಲ್ಲಿ ತಿಳಿಸಿರುವಂತೆ ಸಹಸ್ರ ಚಂದ್ರ ದರ್ಶನ ಶಾಂತಿ ಬಗ್ಗೆ ಶ್ರೀ ಗಣ ಪತಿ ಸ್ವಾಮೀಜಿಯವರು ಪಾಲಿಸುವವ ರಾಗಿದ್ದಾರೆ. ಶ್ರೀಗಳವರಿಗೆ ನೆರವೇರುತ್ತಿ ರುವ ಕನಕಾಭಿಷೇಕ ದರ್ಶನ ಮಾಡು ವುದೇ ಮಹಾ ಪುಣ್ಯವಾಗಿದೆ. ಕನಕಾಭಿಷೇಕ ಮಾಡಿಸಿ ಕೊಂಡವರು, ಮಾಡಿ ದವರು, ಇದರಲ್ಲಿ ಪಾಲ್ಗೊಂಡವರಿಗೆ ಪುಣ್ಯ ಲಭಿಸುತ್ತದೆ. ಅಪಮೃತ್ಯು ನಿವಾರಣೆಯಾಗಿ, ಆಯಸ್ಸು ವೃದ್ಧಿಯಾಗುತ್ತದೆ ಎಂದು ಶಾಸ್ತ್ರ ಹೇಳುತ್ತದೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಯವರು ಲೋಕ ಕಲ್ಯಾಣಾರ್ಥವಾಗಿ ಇದನ್ನೆಲ್ಲಾ ಮಾಡುತ್ತಿದ್ದು, ನಾಡಿನಲ್ಲಿ ಉತ್ತಮ ಮಳೆ, ಬೆಳೆ ಆಗಿ ಸುಭಿಕ್ಷವಾಗಲಿ. ಧನ– ಧಾನ್ಯ ಸಮೃದ್ಧವಾಗಲಿ. ದೇಶದಲ್ಲಿ ಕಷ್ಟ–ಕಾರ್ಪಣ್ಯ ಹೋಗಿ, ಎಲ್ಲರಿಗೂ ನೆಮ್ಮದಿ ಸಿಗಲಿ ಎಂದು ಪ್ರಾರ್ಥಿಸಿದ್ದಾರೆ.

ನಾಳೆ ಮೈಸೂರಲ್ಲಿ ಸಿದ್ಧರಾಮೇಶ್ವರರ ಜಯಂತ್ಯುತ್ಸವ

ಮೈಸೂರು, ಫೆ.4(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಫೆ.6ರಂದು ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಅವರ 851 ಜಯಂತ್ಯೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಭೋವಿ ಹಿತರಕ್ಷಣಾ ಸಮಿತಿ ಜಿಲ್ಲಾಧ್ಯಕ್ಷ ಬಿ.ನಾಗರಾಜು ತಿಳಿಸಿದ್ದಾರೆ.




ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಭೋವಿ ಹಿತ ರಕ್ಷಣಾ ಸಮಿತಿ ವತಿಯಿಂದ ಕಾರ್ಯಕ್ರಮ ನಡೆಸಲಾಗುತ್ತಿದೆ. ಫೆ.6ರಂದು ಬೆಳಗ್ಗೆ 9ಕ್ಕೆ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರ ಸಮ್ಮುಖದಲ್ಲಿ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗ ಬೆಳ್ಳಿರಥದೊಂದಿಗೆ ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆ ಆರಂಭಿಸಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ನಂತರ ದೇವರಾಜ ಅರಸು ರಸ್ತೆ ಮೂಲಕ ಕಲಾಮಂದಿರ ತಲುಪಿ ಸ್ವಾಮೀಜಿ, ರಾಜಕಾರಣಿ ಹಾಗೂ ಸರ್ಕಾರಿ ಅಧಿಕಾರಿಗಳ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಗೌರವಾಧ್ಯಕ್ಷ ಆರ್.ಮಾಲಕೊಂಡಯ್ಯ, ಉಪಾಧ್ಯಕ್ಷ ಪಿ.ಎಲ್.ಚಿನ್ನಸ್ವಾಮಿ, ಪ್ರಧಾನ ಕಾರ್ಯದರ್ಶಿ ಪಿ.ಮಲ್ಲಯ್ಯ, ಖಜಾಂಚಿ ಪಿ.ಬಸವರಾಜು, ದಾಸಣ್ಣ ಇದ್ದರು.

ಉಚಿತ ಮೂತ್ರಪಿಂಡ ತಪಾಸಣೆ ಶಿಬಿರ

ಮೈಸೂರು, ಫೆ. 4– ಮೈಸೂರಿನ ರಾಮ ಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಫೆ.6 ರಿಂದ 11 ರವರೆವಿಗೆ ಉಚಿತ ಮೂತ್ರಪಿಂಡ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ ಮೂತ್ರಪಿಂಡ ತಜ್ಞವೈದ್ಯರಾದ ಡಾ.ಅರುಣ್ ಕೆ.ಜಿ. ನೇತೃತ್ವದಲ್ಲಿ ಶಿಬಿರ ನಡೆಯಲಿದೆ. ಶಿಬಿರದಲ್ಲಿ 50 ವರ್ಷ ಮೇಲ್ಪಟ್ಟ ವಯಸ್ಕರು, ಮಧುಮೇಹ ರೋಗಿಗಳು, ಅಧಿಕ ರಕ್ತದೊತ್ತಡ ಇರುವವರು, ಮೂತ್ರಪಿಂಡದಲ್ಲಿ ಕಲ್ಲು ಹಾಗೂ ಸೋಂಕು ಹೊಂದಿರುವವರು, ಕುಟುಂಬದಲ್ಲಿ ಮೂತ್ರಪಿಂಡದ ಸಮಸ್ಯೆ ಇರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ವಿಶೇಷ ವೈದ್ಯರು ಸೂಚಿಸುವ ಪರೀಕ್ಷೆಗಳಿಗೆ ಶೇ.50 ರಷ್ಟು ರಿಯಾಯಿತಿ ಇದೆ ಹೆಚ್ಚಿನ ಮಾಹಿತಿಗಾಗಿ 0821–2533600, 99863 99862 ಸಂಪರ್ಕಿಸಬಹುದು.



ಸಿವಿಲ್ ಇಂಜಿನಿಯರ್ಸ್ ಪಾರಂಪರಿಕ ಕಟ್ಟಡ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕು

- ಪುರಾತತ್ವ ರಸಾಯನಶಾಸ್ತ್ರಜ್ಞರೂ ಆದ ಪದ್ಮಶ್ರೀ ಪುರಸ್ಕೃತ ಎಸ್.ಸುಬ್ಬರಾಮನ್ ಕಿವಿಮಾತು
- ಲ್ಯಾನ್ಸ್‌ಡೌನ್ ಬಿಲ್ಡಿಂಗ್, ದೇವರಾಜ ಮಾರುಕಟ್ಟೆ ಸಂರಕ್ಷಣೆಯ ಅಗತ್ಯತೆ ಒತ್ತಿ ಹೇಳಿದ ಸುಬ್ಬರಾಮನ್



ಮೈಸೂರು,ಫೆ.4(ಪಿಎಂ)–ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಸಿವಿಲ್ ಇಂಜಿನಿಯರ್ಸ್ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಖ್ಯಾತ ಪುರಾತತ್ವ ರಸಾಯನಶಾಸ್ತ್ರಜ್ಞರೂ ಆದ ಪದ್ಮಶ್ರೀ ಪುರಸ್ಕೃತ ಎಸ್.ಸುಬ್ಬರಾಮನ್ ಹೇಳಿದರು.

ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್‌ನ ಸಭಾಂಗಣದಲ್ಲಿ ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ (ಇಂಡಿಯಾ) ಮೈಸೂರು ಕೇಂದ್ರದ (ಎಸಿಸಿಇ–ಐ) ವತಿಯಿಂದ ರೇಸ್–23 (ರಿಸೆಂಟ್ ಅಡ್ವಾನ್ಸ್ ಇನ್ ಸಿವಿಲ್ ಇಂಜಿನಿಯರಿಂಗ್) ಶೀರ್ಷಿಕೆಯಡಿ 'ಇನ್ನೋವೇಟಿವ್ ಇನ್ಫ್ರಾ ಇನ್ ಸಿವಿಲ್ ಇಂಜಿನಿಯರಿಂಗ್' ಕುರಿತು ಹಮ್ಮಿಕೊಂಡಿದ್ದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಎರಡನೇ ದಿನವಾದ ಶನಿವಾರ ಸನ್ಮಾನ ಸ್ವೀಕರಿಸಿದ ನಂತರ ಮಾತನಾಡಿದರು.

ಪದ್ಮ ಪ್ರಶಸ್ತಿಗೆ ಭಾಜನರಾದ ರಾಜ್ಯದ 8 ಜನರಲ್ಲಿ ಒಬ್ಬರಾದ ಸುಬ್ಬರಾಮನ್, ಮೈಸೂರು ನಗರದ ಎರಡು ಪಾರಂಪರಿಕ ಕಟ್ಟಡಗಳ (ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಮತ್ತು ದೇವರಾಜ ಮಾರುಕಟ್ಟೆ) ಸಂರಕ್ಷಣೆಯ ಅಗತ್ಯತೆ ಬಗ್ಗೆ ಒತ್ತಿ ಹೇಳಿದರಲ್ಲದೆ, ಅವುಗಳ ಸಂರಕ್ಷಣೆಗೆ ನುರಿತ ಇಂಜಿನಿಯರ್‌ಗಳ ಅಗತ್ಯವನ್ನು ಉಲ್ಲೇಖಿಸಿದರು. ಆರ್ಕಿಯಲಾಜಿಕಲ್ ಸರ್ವೇ ಆಫ್ ಇಂಡಿಯಾದ ಅಧೀಕ್ಷಕ ಪುರಾತತ್ವ ರಸಾಯನಶಾಸ್ತ್ರಜ್ಞರಾಗಿ ನಿವೃತ್ತಿ ಹೊಂದಿರುವ ಸುಬ್ಬರಾಮನ್, ಮೈಸೂರಿನಲ್ಲಿ ನೆಲೆಸಿದ್ದು, ತಮ್ಮ ವೃತ್ತಿ ಜೀವನದ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಯಲ್ಲಿ ಮಾಡಿದ ಕೆಲಸಗಳನ್ನು ಕಾರ್ಯಕ್ರಮದಲ್ಲಿ ನೆನೆಸಿಕೊಂಡರು.

ಮಹಾರಾಷ್ಟ್ರದ ಅಂಜತಾ ಗುಹೆಯ ಭಿತ್ತಿಚಿತ್ರ ಮತ್ತು ವರ್ಣಚಿತ್ರಗಳ ಸಂರಕ್ಷಣಾ ಕಾರ್ಯ, ಕಾಂಬೋಡಿಯಾದ ಅಂಕೋರ್ ವಾಟ್ ದೇವಾಲಯದ ಸಂಕೀರ್ಣ, ತಮಿಳುನಾಡಿನ ತಂಜಾವೂರಿನ ಬೃಹದೀಶ್ವರ ದೇವಾಲಯದಲ್ಲಿ ಚೋಳ ಮತ್ತು ನಾಯಕರ ಕಾಲದ ವರ್ಣಚಿತ್ರಗಳು ಮತ್ತು ಬಮಿಯಾನ್ ಬುದ್ಧರು (ಅಫ್ಘಾನಿಸ್ತಾನದ ಎರಡು ದೊಡ್ಡ ಪ್ರತಿಮೆಗಳು) ಸಂರಕ್ಷಣೆಯಲ್ಲಿ ಕಾರ್ಯನಿರ್ವಹಿಸಿದ ಬಗ್ಗೆ ಪ್ರಸ್ತಾಪಿಸಿದರು.

1955ರ ಫೆಬ್ರವರಿಯಲ್ಲಿ ಅಜಂತಾಗೆ ಹೋಗಿದ್ದೆ. ಅಲ್ಲಿನ ಅಂಕುಡೊಂಕಿನ ಮಾರ್ಗದಲ್ಲಿ ನಡೆದಾಡಿಕೊಂಡು ಅಲ್ಲಿನ ಮನಮೋಹಕ ಸುಂದರ ಚಿತ್ತಾರಗಳನ್ನು ನೋಡಿದಾಗ ನಿಜಕ್ಕೂ ಪುಳಕ ಉಂಟಾಯಿತು.



ಮೈಸೂರಿನ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್‌ನ ಸಭಾಂಗಣದಲ್ಲಿ ಇತ್ತೀಚೆಗೆ ಮೈಸೂರಿನಿಂದ 'ಪದ್ಮಶ್ರೀ' ಪ್ರಶಸ್ತಿಗೆ ಭಾಜನರಾದ ಭಾರತೀಯ ಪುರಾತತ್ವ ಸರ್ವೇಕ್ಷಣಾಲಯದ (ಆರ್ಕಿಯಲಾಜಿಕಲ್ ಸರ್ವೇ ಆಫ್ ಇಂಡಿಯಾದ) ನಿವೃತ್ತ ಅಧೀಕ್ಷಕ ಪುರಾತತ್ವ ರಸಾಯನಶಾಸ್ತ್ರಜ್ಞ ಎಸ್.ಸುಬ್ಬರಾಮನ್ ಅವರನ್ನು ರೇಸ್–23ರ ವಿಚಾರ ಸಂಕಿರಣದ ಎರಡನೇ ದಿನ ಮತ್ತು ಅಂತಿಮ ದಿನವಾದ ಶನಿವಾರ ಸನ್ಮಾನಿಸಲಾಯಿತು.

ಅಜಂತಾವನ್ನು ಭಾರತದ ಕಲೆಯ ಶಿಖರ ಎಂದು ವರ್ಣಿಸಲಾಗಿದೆ. ಇಲ್ಲಿ ಬುದ್ಧನ ಆರಂಭಿಕ ಜೀವನ, ಮಾನವ ಭಾವನೆಗಳನ್ನು ಸಂಪೂರ್ಣವಾಗಿ, ಅತ್ಯಂತ ಸುಂದರವಾಗಿ ಚಿತ್ರಿಸಲಾಗಿದೆ. ಇಲ್ಲಿನ ಚಿತ್ರಣ ಮೂರು ಆಯಾಮದ (3ಡಿ) ಪರಿಣಾಮ ಹೊಂದಿವೆ ಇಲ್ಲಿ ಕಾರ್ಯ ನಿರ್ವಹಿಸುವುದು ನಿಜಕ್ಕೂ ಪ್ರತಿಷ್ಠೆಯೊಂದಿಗೆ ಸವಾಲೂ ಆಗಿತ್ತು ಎಂದು 94 ವರ್ಷ ಪ್ರಾಯದ ಹಿರಿಯರಾದ ಸುಬ್ಬರಾಮನ್ ತಮ್ಮ ಹಳೇ ನೆನೆಪಿಗೆ ಜಾರಿದರಲ್ಲದೆ, ಇಲ್ಲಿನ (ಅಜಂತಾ) ವರ್ಣಚಿತ್ರಗಳ ಸಂರಕ್ಷಣೆಗೆ ಮೊದಲ ಪ್ರಯತ್ನ ಮಾಡಿದ ಕೀರ್ತಿ ಹೈದರಾಬಾದಿನ ನಿಜಾಮನಿಗೆ ಸಲ್ಲುತ್ತದೆ ಎಂದು ಸ್ಮರಿಸಿದರು.

ಅಫ್ಘಾನಿಸ್ತಾನದ ಬಮಿಯಾನ್ ಬುದ್ಧನ ಎರಡು ಪ್ರತಿಮೆಗಳ ಸಂರಕ್ಷಣೆ ಮತ್ತು ಸಂಶೋಧನೆ ಸಂಬಂಧ ಸಹೋದ್ಯೋಗಿಗಳ ಜೊತೆಗೆ 1969ರಿಂದ 1977ರವರೆಗೆ ಕೆಲಸ ಮಾಡಿದ್ದೇನೆ. ಪ್ರತಿ ವರ್ಷ ನಾಲ್ಕು ತಿಂಗಳ ಕಾಲ ಇಲ್ಲಿಗೆ ಭೇಟಿ ನೀಡುತ್ತಿದ್ದೆವು. ನಂತರದಲ್ಲಿ ಈ ಸ್ಥಳವನ್ನು ಭಾರತದ ಅಂದಿನ ವಿದೇಶಾಂಗ ವ್ಯವಹಾರಗಳ ಸಚಿವ ಅಟಲ್ ಬಿಹಾರಿ ವಾಜಪೇಯಿ (ನಂತರ ಅವರು ಭಾರತದ ಪ್ರಧಾನಿಯಾಗಿ ಸೇವೆ ಸಲ್ಲಿಸಿದರು) ಅಂದಿನ ಆಫ್ಘಾನಿಸ್ತಾನ ಸರ್ಕಾರಕ್ಕೆ ಹಸ್ತಾಂತರಿಸಿದರು. ಅದೇ ಪ್ರತಿಮೆಗಳನ್ನು 2001ರಲ್ಲಿ ತಾಲಿಬಾನಿಗಳು ನೆಲಸಮಗೊಳಿಸಿದರು ಎಂದು ಬೇಸರ ವ್ಯಕ್ತಪಡಿಸಿದರು. ಮೈಸೂರು ಕೇಂದ್ರದ ಅಧ್ಯಕ್ಷ ಹೆಚ್.ಎಸ್.ದೀಪಕ್, ಕಾರ್ಯದರ್ಶಿ ಎಸ್.ಶಶಿರಾಜ್, ರೇಸ್–23ರ ಅಧ್ಯಕ್ಷ ಡಾ.ಜಿ.ಪಿ.ಚಂದ್ರಧರ, ಕಾರ್ಯದರ್ಶಿ ಡಾ.ಪಿ.ನಂಜುಂಡ ಸ್ವಾಮಿ ಮತ್ತಿತರರು ಹಾಜರಿದ್ದರು.

ಮೈಸೂರು ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಆಯ್ಕೆ ಚುನಾವಣೆ ಮುಂದೂಡಿಕೆ ಹಿನ್ನೆಲೆ

ಪ್ರಾದೇಶಿಕ ಆಯುಕ್ತರಿಗೆ ಕಾಂಗ್ರೆಸ್ ದೂರು



ಮೈಸೂರು, ಫೆ.4(ಎಸ್‌ಬಿಡಿ)– ಮೈಸೂರು ಮಹಾನಗರ ಪಾಲಿಕೆ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಆಯ್ಕೆ ಚುನಾವಣೆ ನಡೆಸಲು ಸೂಚಿಸುವಂತೆ ನಗರ ಕಾಂಗ್ರೆಸ್ ವತಿಯಿಂದ ಪ್ರಾದೇಶಿಕ ಆಯುಕ್ತರ ಕಚೇರಿಗೆ ಶನಿವಾರ ಮನವಿ ಸಲ್ಲಿಸಲಾಯಿತು.

ಕೂಡಲೇ ಚುನಾವಣೆಗೆ ಸೂಚಿಸುವಂತೆ ಮನವಿ

ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಮಾಜಿ ಮೇಯರ್ ನಗರ ಪಾಲಿಕೆ ಸದಸ್ಯರಾದ ಅಯೂಬ್‌ಖಾನ್, ಹೆಚ್.ಎಂ.ಶಾಂತಕುಮಾರಿ, ಶ್ರೀಧರ್, ಗೋಪಿ, ಪ್ರದೀಪ್‌ಚಂದ್ರ, ಮಾಜಿ ಸದಸ್ಯ ಶೌಕತ್, ಕಾಂಗ್ರೆಸ್ ನಗರ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಮಾಧ್ಯಮ ವಕ್ತಾರ ಮಹೇಶ್ ಮತ್ತಿತರರು ನೀಡಿದ ಮನವಿಯನ್ನು ಪ್ರಾದೇಶಿಕ ಆಯುಕ್ತರ ಪರವಾಗಿ ಹೆಚ್ಚುವರಿ ಆಯುಕ್ತ ಪಿ.ಶಿವರಾಜು ಸ್ವೀಕರಿಸಿದರು.

ಪಾಲಿಕೆ ಸ್ಥಾಯಿ ಸಮಿತಿ ಚುನಾವಣೆಯನ್ನು ಮೇಯರ್ ದುರುದ್ದೇಶದಿಂದ ಮುಂದೂಡುತ್ತಿದ್ದಾರೆ. ಫೆ.2ರಂದು ಬೆಳಗ್ಗೆ 10.30ಕ್ಕೆ ಚುನಾವಣೆ ನಿಗದಿಯಾಗಿತ್ತಾದರೂ ಮಧ್ಯಾಹ್ನ 12 ಗಂಟೆಯಾದರೂ ಮೇಯರ್ ಸಭಾಂಗಣಕ್ಕೆ ಬಾರದೆ ಅವರ ಕಚೇರಿಯಲ್ಲೇ ಕುಳಿತಿದ್ದರು. ನಂತರ ನಿರ್ದಿಷ್ಟ ಕಾರಣವನ್ನೂ ನೀಡದೆ ಏಕಾಏಕಿ ಚುನಾವಣೆ ಮುಂದೂಡಿದರು. ಹೀಗೆ ನಿಖರ ಕಾರಣವಿಲ್ಲದೆ ನಿಯಮಬಾಹಿರವಾಗಿ ದಿಢೀರ್ ಚುನಾವಣೆ ಮುಂದೂಡಲು ಕಾನೂನಿನಲ್ಲಿ ಅವಕಾಶವಿಲ್ಲ. ಹಾಗಾಗಿ ಮೇಯರ್ ಅವರು ಕಾನೂನು ಉಲ್ಲಂಘಿಸುವುದರ ಜೊತೆಗೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಪಮಾನ ಮಾಡಿದ್ದಾರೆ. ಇದು ಆತಂಕಕಾರಿ ಬೆಳವಣಿಗೆ. ಕಾನೂನಾತ್ಮಕ ಹಕ್ಕುಗಳನ್ನು ಹೊಂದಿರುವ ಸ್ಥಾಯಿ ಸಮಿತಿಗಳಿಗೆ ಕಳೆದ 14 ತಿಂಗಳಿಂದ ಅಧ್ಯಕ್ಷರಿಲ್ಲದ ಕಾರಣ ಸಾರ್ವಜನಿಕ ಕಾರ್ಯಗಳಿಗೆ ಅಡ್ಡಿಯಾಗಿದೆ. ಕಾಮಗಾರಿಗಳ ಗುಣಮಟ್ಟ ಪರಿಶೀಲನೆ ಹಾಗೂ ಹೊಸ ಯೋಜನೆಗಳಿಗೆ ಅನುಮೋದನೆ ನೀಡಲು ಸಾಧ್ಯವಾಗುತ್ತಿಲ್ಲ. ಈ ಮೂಲಕ ತೆರಿಗೆ ಪಾವತಿಸುವ ನಾಗರಿಕರಿಗೆ ವಂಚಿಸಿದಂತಾಗುತ್ತಿದೆ. ಪ್ರಸಕ್ತ ತಿಂಗಳ 2023–24ನೇ ಸಾಲಿನ ಬಜೆಟ್ ಮಂಡನೆಗೂ ಅಡ್ಡಿಯಾಗುತ್ತದೆ ಎಂದು ಮೇಯರ್ ವಿರುದ್ಧ ದೂರಿದ ಕಾಂಗ್ರೆಸ್ ಮುಖಂಡರು, ಕೂಡಲೇ ಸ್ಥಾಯಿ ಸಮಿತಿಗಳ ಚುನಾವಣೆ ನಡೆಸಲು ಪಾಲಿಕೆ ಆಯುಕ್ತರಿಗೆ ಸೂಚಿಸುವಂತೆ ಒತ್ತಾಯಿಸಿದರು.

ಸಾಲಗಾರರ ಕಾಟ: ಕುಟುಂಬದ 7 ಮಂದಿ ಆತ್ಮಹತ್ಯೆ ಯತ್ನ

ಮಹಿಳೆ ಸಾವು, ಆರು ಮಂದಿ ಸ್ಥಿತಿ ಗಂಭೀರ

ರಾಮನಗರ/ಮಂಡ್ಯ, ಫೆ.4 (ಮೋಹನ್‌ರಾಜ್)– ಸಾಲಬಾಧೆಯಿಂದ ಒಂದೇ ಕುಟುಂಬದ 7 ಮಂದಿ ಆತ್ಮಹತ್ಯೆಗೆ ಯತ್ನಿಸಿರುವ ಹೃದಯವಿದ್ರಾವಕ ಘಟನೆ ರಾಮನಗರ ತಾಲೂಕಿನ ಕುಂಬಳಗೂಡು ಸಮೀಪದ ದೊಡ್ಡಮಣ್ಣುಗುಡ್ಡೆ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ರಾಜು ಎಂಬುವರ ಇಡೀ ಕುಟುಂಬ ಸಾಲಬಾಧೆ ತಾಳಲಾರದೇ ಆತ್ಮಹತ್ಯೆಗೆ ಯತ್ನಿಸಿದ್ದು, ಈ ಪೈಕಿ ಓರ್ವ ಮಹಿಳೆ ಸಾವನ್ನಪ್ಪಿದರೆ, ಮೂವರು ಮಕ್ಕಳು ಸೇರಿದಂತೆ 6 ಮಂದಿ ಸಾವು ಬದುಕಿನ ನಡುವೆ ಮಿಮ್ಸ್ ಆಸ್ಪತ್ರೆಯಲ್ಲಿ ಹೋರಾಟ ಮಾಡುತ್ತಿದ್ದಾರೆ.

ಮೂಲತಃ ರಾಮನಗರ ತಾಲೂಕಿನ ಕುಂಬಳಗೂಡಿನ ನಿವಾಸಿ ರಾಜು ಕೂಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಅಲ್ಲದೇ ವಿಪರೀತ ಸಾಲ ಮಾಡಿ ಕೊಂಡು ಸಾಲಗಾರರ ಕಾಟ ತಾಳಲಾರದೇ ಹುಟ್ಟೂರು ತೊರೆದು ಅತ್ತೆ ಮನೆ ಕುಂಬಳಗೂಡು ಸಮೀಪದ ದೊಡ್ಡಮಣ್ಣುಗುಡ್ಡೆ ಗ್ರಾಮದಲ್ಲಿ ಕೂಲಿ ಮಾಡಿಕೊಂಡು ವಾಸವಿದ್ದರು. ಹುಟ್ಟೂರು ತೊರೆದರೂ ರಾಜುಗೆ ಸಾಲಗಾರರ ಕಾಟ ಮಾತ್ರ ತಪ್ಪಿರಲಿಲ್ಲ. ಪಡೆದ ಹಣಕ್ಕೆ ಬಡ್ಡಿಯನ್ನು ಕಟ್ಟಲಾಗದ ಬಡ ಕುಟುಂಬ, ಸಾಲ ಪಡೆದವರಿಂದ ನಿರಂತರ ಕಿರುಕುಳಕ್ಕೆ ಒಳಗಾಗಿ ಬೇಸತ್ತು ಕೊನೆಗೆ ಇಡೀ ಕುಟುಂಬ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಶನಿವಾರ ಊರ ಹೊರಗಿದ್ದ ರಾಜು ಮಾವನ ಸಮಾಧಿ ಬಳಿ ಊಟದಲ್ಲಿ ಇಲಿ ಪಾಷಾಣ ಬೆರೆಸಿ ಸೇವಿಸಿದ್ದಾರೆ. ಇದೇ ವೇಳೆ ಸಕ್ಕರೆ ಅಚ್ಚು, ಬಾಳೆ ಹಣ್ಣು ತಿಂದಿದ್ದಾರೆ. ಕೆಲ ಹೊತ್ತಿನ ಬಳಿಕ ರಾಜು ಪತ್ನಿ ಮಂಗಳಮ್ಮ(28) ತೀವ್ರವಾಗಿ ನರಳಿ ಸಾವನ್ನಪ್ಪಿದ್ದಾರೆ. ಉಳಿದವರು ಸಂಕಟ ತಾಳಲಾರದೇ ಅಲ್ಲಿಂದ ಹೊರಟು ಊರ ಬಳಿ ಬಂದು ಗ್ರಾಮದ ಜನರಿಗೆ ವಿಷಯ ತಿಳಿಸಿದ್ದಾರೆ. ಗ್ರಾಮಸ್ಥರು ತಕ್ಷಣವೇ ಎಲ್ಲರನ್ನೂ ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಬಳಿಕ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ರವಾನಿಸಿದ್ದಾರೆ.

ರಾಜು (31), ಅತ್ತೆ ಸೊಲ್ಲಾಪುರದಮ್ಮ (48), ಮಕ್ಕಳಾದ ಆಕಾಶ್ (9), ಕೃಷ್ಣ (13), ಮಂಗಳಮ್ಮ ತಂಗಿ ಸವಿತಾ (24), ಸವಿತಾ ಮಗಳು ದರ್ಶಿನಿ (4) ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾರೆ. ತಾನು ಸತ್ತರೆ ಕುಟುಂಬಸ್ಥರಿಗೂ ಸಾಲಗಾರರ ಕಾಟ ತಪ್ಪುವುದಿಲ್ಲ ಎಂದು ಎಲ್ಲರಿಗೂ ವಿಷ ಉಣಿಸುವ ನಿರ್ಧಾರಕ್ಕೆ ರಾಜು ಬಂದಿದ್ದರು ಎನ್ನಲಾಗಿದೆ. ಸದ್ಯ ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿರುವ ರಾಜು ಸಾಲಗಾರರ ಕಾಟಕ್ಕೆ ಈ ತೀರ್ಮಾನ ಮಾಡಿದ್ದಾಗಿ ತಿಳಿಸಿದ್ದಾರೆ. ಮಾಡದ ತಪ್ಪಿಗೆ ಇಡೀ ಕುಟುಂಬ ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದು, ಈ ಸಂಬಂಧ ಕುಂಬಳಗೂಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಸನ್ನಿ ಲಿಯೋನ್ ಫ್ಯಾಶನ್ ಶೋ ವೇದಿಕೆ ಬಳಿ ಪ್ರಬಲ ಬಾಂಬ್ ಸ್ಫೋಟ



ಇಂಫಾಲ: ಮಣಿಪುರದ ರಾಜಧಾನಿ ಇಂಫಾಲದಲ್ಲಿ ಬಾಲಿವುಡ್ ನಟಿ ಸನ್ನಿ ಲಿಯೋನ್ ಭಾನುವಾರ ಪಾಲ್ಗೊಳ್ಳಬೇಕಿದ್ದ ಫ್ಯಾಶನ್ ಶೋ ವೇದಿಕೆ ಬಳಿ ಇಂದು ಪ್ರಬಲ ಬಾಂಬ್ ಸ್ಫೋಟ ಸಂಭವಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇಂಫಾಲದ ಹಟ್ಟಾ ಕಾಂಗ್ಜೆಬುಂಗ್ ಪ್ರದೇಶದಲ್ಲಿ ಈ ಘಟನೆ ನಡೆದಿದ್ದು, ಹಾನಿ ಬಗ್ಗೆ ಯಾವುದೇ ವರದಿಯಾಗಿಲ್ಲ. ಫ್ಯಾಶನ್ ಶೋ ವೇದಿಕೆಯಿಂದ ಕೇವಲ 100 ಮೀಟರ್ ಅಂತರದಲ್ಲಿ ಶನಿವಾರ ಬೆಳಗ್ಗೆ 6.30ರ ಸುಮಾರಿನಲ್ಲಿ ಸ್ಫೋಟ ಸಂಭವಿಸಿದೆ. ಸ್ಫೋಟಕ್ಕೆ ಸುಧಾರಿತ ಸಾಧನ ಬಳಸಲಾಗಿದೆಯೇ ಅಥವಾ ಗ್ರೆನೇಡ್‌ನಿಂದ ಸ್ಫೋಟ ಸಂಭವಿಸಿದೆಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ ಎಂದು ಅವರು ಹೇಳಿದ್ದಾರೆ.

STAR OF MYSORE
SPECIAL ISSUE
Star of Mysore is completing 45 years of service on 16th February 2023 and entering 46th year of publication. As in the past, this year too we will be publishing a Special Issue.
We request our advertisers and patrons to release their advertisements before 10th February to facilitate printing as per schedule.
HEAD OFFICE
0821-2496520 (5-LINES)
0821-2496522 / 23
Email : ad@starofmysore.com
Maria G. Fernandes
Advt. Manager: 94485-25060
Joy Anthony Dove
Sr. Executive-Ad Sales
89516-68960
Prema
Sr. Executive Advertising
98805-49879
K.R. Circle Office : 0821-2431774
D.D. Urs Road Office : 0821-2428695
Kodagu Office : 97314-69871
Mandya Office : 87629-60325
Chamarajanagar : 92422-65657
Nanjangud : 99016-02226
Hassan : 94484-01175
Bengaluru : 98440-46761









ನಗರಸಭಾ ಕಾರ್ಯಾಲಯ, ಹೂಟಗಳ್ಳಿ, ಮೈಸೂರು
ಎಸ್.ಆರ್.ಎಸ್. ಸ್ಟೇಷನ್ ಎದುರು, ಹೈಟೆನ್ಷನ್ ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು–570018.
ಸಹಾಯವಾಣಿ:0821–2001737 ಇಮೇಲ್: itstaff_ulb_hootagalli@yahoo.com

ಸಂಖ್ಯೆ:ನಸಹೂ/ಕಂಶಾ/03/2022–23 ದಿನಾಂಕ:04.02.2023

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಹೂಟಗಳ್ಳಿ ನಗರಸಭೆಯ ವ್ಯಾಪ್ತಿಯಲ್ಲಿರುವ ವಾಣಿಜ್ಯ ಆಸ್ತಿಗಳ ಜಿಐಎಸ್ ಸರ್ವೆ ಕಾರ್ಯ ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ನೋಂದಾಯಿತ ಸಂಸ್ಥೆ/ಗುತ್ತಿಗೆದಾರರು **https://eproc.karnataka.nic.in** ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗೆ ಕಛೇರಿಯಲ್ಲಿ ಸಂಪರ್ಕಿಸಬಹುದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 13.02.2023 ಸಂಜೆ 4.30 ಗಂಟೆ**, ಟೆಂಡರ್ ತೆರೆಯುವ **ದಿನಾಂಕ: 14.02.2023 ಸಂಜೆ 5.00 ಗಂಟೆ**. ಇಂಡೆಂಟ್ ನಂ. **CMC/HTGL/CS/GIS/01/2022-23**

ಸಹಿ/–ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ

DIPR/MYS/KAVITA/973/2022-23

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ,
ಮಂಡ್ಯ. ದೂರವಾಣಿ ಸಂಖ್ಯೆ : 224027
E mail ID : dho.mandya@gmail.com
ಪತ್ರ ಸಂಖ್ಯೆ/ಸಿಬ್ಬಂದಿ(1)/122/2022–23 ದಿನಾಂಕ:02.02.2023

ನೇಮಕಾತಿ ಪ್ರಕಟಣೆ

ಗುತ್ತಿಗೆ ಆಧಾರದ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ನೇಮಕಕ್ಕೆ ಅರ್ಜಿ ಆಹ್ವಾನ

ಉಲ್ಲೇಖ:– (1) ಸರ್ಕಾರದ ಆದೇಶ ಸಂಖ್ಯೆ: ಆಕುಕ/479/ಹೆಚ್.ಎಸ್.ಹೆಚ್/2014 ದಿನಾಂಕ:06.01.2015. (2) ಸರ್ಕಾರದ ಆದೇಶ ಸಂಖ್ಯೆ: ಆಕುಕ/297/ಹೆಚ್.ಎಸ್.ಹೆಚ್/2015 ದಿನಾಂಕ:22.04.2016. (3) ಸರ್ಕಾರದ ಆದೇಶ ಸಂಖ್ಯೆ: ಆಕುಕ/365/ಹೆಚ್.ಎಸ್.ಹೆಚ್/2020 ದಿನಾಂಕ:19.05.2020 ಮತ್ತು ಪತ್ರ ಸಂಖ್ಯೆ:431/ಹೆಚ್.ಎಸ್.ಹೆಚ್/2020 ದಿನಾಂಕ:12.10.2020. (4) ಆಯುಕ್ತಾಲಯದ ಸುತ್ತೋಲೆ ಸಂಖ್ಯೆ:ಜೆ.ಆರ್.ಓ(2)/27/2020–21 ದಿನಾಂಕ:16.12.2020. (5) ಸರ್ಕಾರದ ಪತ್ರ ಸಂಖ್ಯೆ:ಆಕುಕ/453/ಹೆಚ್.ಎಸ್.ಹೆಚ್/2022 ದಿನಾಂಕ:13.09.2022, 02.11.2022 ಮತ್ತು 13.12.2022. (6) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಪತ್ರ ಸಂಖ್ಯೆ:ಜೆ.ಆರ್.ಓ(3)/134/2021–22 ದಿನಾಂಕ:29.12.2022. (7) ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ರವರ ಕಛೇರಿ ಟಿಪ್ಪಣಿಯ ದಿನಾಂಕ:01.02.2023 ರಂದು ನೀಡಿರುವ ಆದೇಶದ ಮೇರೆಗೆ.

ಮಂಡ್ಯ ಜಿಲ್ಲೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿನ ಖಾಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಆರೋಗ್ಯ ವಿಸ್ತರಣಾ ಕೇಂದ್ರಗಳಿಗೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ರೋಸ್ಟರ್ ಕಂ–ಮೆರಿಟ್ ಆದರಿಸಿ, ಮಾಸಿಕ ಸಂಭಾವನೆ **ರೂ.60,000/–** ರೊಂದಿಗೆ ನೇಮಕ ಮಾಡಲು ಎಂ.ಬಿ.ಬಿ.ಎಸ್ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು Rolling Advertisement ಆಹ್ವಾನಿಸಲಾಗಿದೆ.

(1) ಅರ್ಜಿಗಳು ದೊರೆಯುವ ಸ್ಥಳ ಮತ್ತು ದಿನಾಂಕ : ಜಿಲ್ಲೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆ, ಮಂಡ್ಯ ದಿನಾಂಕ: **03.02.2023 ಬೆಳಿಗ್ಗೆ: 10:30 ರಿಂದ 05:30ರವರೆಗೆ.** (2) ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **09.02.2023 ಸಮಯ: ಸಂಜೆ: 05:30ರ** ಒಳಗೆ. (3) ಅರ್ಜಿಗಳನ್ನು ಪರಿಶೀಲಿಸುವ ದಿನಾಂಕ : **10.02.2023.**

ನಿಭಂದನೆಗಳು:– ನೇಮಕಾತಿಯು ಸರ್ಕಾರದ ಆದೇಶದ ರೀತ್ಯ ಗುತ್ತಿಗೆ ಆಧಾರದ ನೇಮಕಾತಿ ಷರತ್ತು ಮತ್ತು ನಿಭಂದನೆಗಳಿಗೆ ಒಳಪಟ್ಟಿರುತ್ತದೆ.

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ,
ಮಂಡ್ಯ ಜಿಲ್ಲೆ, ಮಂಡ್ಯ.

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/647/2022–23

ಸ್ಥಾಪನೆ : 1916

ದಿ–ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿ.
ಶ್ರೀ ಹರ್ಷ ರಸ್ತೆ, ಮೈಸೂರು – 570001, ದೂ.: 2520026

ಹರಾಜು ಮಾರಾಟ

2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯಡಿ ಮತ್ತು 2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ಅನ್ವಯ ಬ್ಯಾಂಕಿಗೆ ಆಧಾರ ಮಾಡಿರುವ ಸ್ಥಿರ ಸ್ವತ್ತುಗಳ ಬಹಿರಂಗ ಹರಾಜು ಮಾರಾಟ.

ಕ್ರ.ಸಂ.	ಸಾಲಗಾರರ ಹೆಸರು	ಬಾಕಿ ಇರುವ ಮೊಬಲಗು + ಅಸಲು+ಬಡ್ಡಿ+ಇತರೆ	ಮೀಸಲು ಬೆಲೆ ಲಕ್ಷ ರೂಗಳಲ್ಲಿ	ಹರಾಜಿನ ದಿನಾಂಕ ಮತ್ತು ಸಮಯ	ಬ್ಯಾಂಕಿಗೆ ಆಧಾರವಾಗಿರುವ ಸ್ಥಿರಾಸ್ತಿಯ ಸ್ವತ್ತಿನ ವಿವರಗಳು
1	ಟಿ.ಹೇಮಾವತಿ W/o ಶ್ರೀನಿವಾಸ್ 632951	3700000	9800000	21.2.2023 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ನಜರ್‌ಬಾದ್ ಮೊಹಲ್ಲಾ ಕುರುಬಾರಳ್ಳಿ, 4ನೇ ಕ್ರಾಸ್, ಮನೆ ನಂ.45, ಪೂ+ಪ 50 ಅಡಿ, ದಕ್ಷಿಣೋತ್ತರ 30 ಅಡಿ, ಪೂ – ಚಿಕ್ಕಮ್ಮನವರ ಮನೆ, ಪ – ರಸ್ತೆ, ಉ– ರಸ್ತೆ, ದ– ಹುಚ್ಚಮ್ಮರವರ ಮನೆ
2	ಆರ್.ಸುಜಾತ W/o ವಿ.ರಾಜಕುಮಾರ್ 632907	3700000	13000000	21.2.2023 ಮಧ್ಯಾಹ್ನ 3 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ ಆಲನಹಳ್ಳಿ ಕಸಬಾ ಹೋಬಳಿ, ಸರ್ವೆ ನಂ.104/5, DNO01 ಪೂ+ಪ 12.5+9.95 / 2 ಅಡಿ, ದ+ಉ 16.95+14.85 / 2 ಅಡಿ, ಪೂ – ಸೈಟ್ ನಂ.2, ಪ–104/4, ಉ – ಸೈಟ್ ನಂ.105, ದ– ರಸ್ತೆ
3	ಜಯಲಕ್ಷ್ಮಿ W/o ನಾರಾಯಣಶೆಟ್ಟಿ ಎನ್.ವಿನಯ್ ಮತ್ತು ಎನ್.ಕಿರಣ್‌ಕುಮಾರ್ 632672	1000000	2400000	22.2.2023 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ನಜರ್‌ಬಾದ್ ದುರ್ಗಾ ದೇವಸ್ಥಾನದ ರಸ್ತೆ, 4ನೇ ಕ್ರಾಸ್, 275, ಎನ್–23, ಪೂ+ಪ 22.50 ಅಡಿ, ದ+ಉ 23.00 ಅಡಿ, ಪೂ–ಶಕುಂತಲ ಮನೆ, ಪ – ರಸ್ತೆ, ಉ – ಖಾಸಗಿ ಸ್ವತ್ತು, ದ– ಖಾಸಗಿ ಸ್ವತ್ತು.
4	ಜ್ಯೋತಿ W/o ವೀರಭದ್ರ ಶೆಟ್ಟಿ 632849	150000	1300000	22.2.2023 ಮಧ್ಯಾಹ್ನ 3 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ನಜರ್‌ಬಾದ್ ಮೊಹಲ್ಲಾ, ಕಲ್ಯಾಣಗಿರಿ ಹುಡ್ಕೋ ಬಡಾವಣೆ ಎಲ್‌ಐಜಿ 1277, ಪೂ+ಪ 10.70 ಮೀ, ದ+ಉ 3.30 ಮೀ, ಪೂ – ರಸ್ತೆ, ಪ – ಗಲ್ಲಿ, ಉ– ಮನೆ ನಂ.1276, ದ – ಮನೆ ನಂ.1278.
5	ಎಸ್.ರಾಮಕೃಷ್ಣ ಮತ್ತು ಆರ್.ಶ್ರೀನಿವಾಸ್ 6321011	2000000	4000000	23.2.2023 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ಸಿಹೆಚ್ ಮೊಹಲ್ಲಾ, ಟಿ.ಕೆ ಬಡಾವಣೆ, 8ನೇ ಮೇನ್, ಮನೆ ನಂ. 493, ಪೂ+ಪ 30 ಅಡಿ, ದ + ಉ 20 ಅಡಿ, ಪೂ–ರಸ್ತೆ, ಪ– ಸೈಟ್ ನಂ.525, ಉ – ಸೈಟ್ ನಂ.494, ದ– ಸೈಟ್ ನಂ.492.
6	ಜಿ.ಶ್ರೀಕಂಠ S/o ಗಣೇಶ ಮತ್ತು ಮಂಜುಳಾ 632307	700000	3000000	23.2.2023 ಮಧ್ಯಾಹ್ನ 3 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ಮಂಡಿ ಮೊಹಲ್ಲಾ, ಪುಲಿಕೇಶಿ ರಸ್ತೆ, ತಿಲಕನಗರ, ಮನೆ ನಂ.3422/ಎ, ಪೂ + ಪ 22.6 ಅಡಿ, ದ+ಉ 50 ಅಡಿ, ಪೂ– ಆರ್.ಗಣೇಶ್ ಆಸ್ತಿ, ಪ – 5ನೇ ಮುಖ್ಯ ರಸ್ತೆ, ಉ – ಪುಲಕೇಶಿ ರಸ್ತೆ, ದ–ಗಂಗಮ್ಮರವರ ಮನೆ.
7	ಹೆಚ್.ಎಲ್. ಮಹದೇವಯ್ಯ S/o ಲಿಂಗಯ್ಯ 6321005	700000	1200000	24.2.2023 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ನಜರ್‌ಬಾದ್ ಮೊಹಲ್ಲಾ, ಕ್ಯಾತಮಾರನಹಳ್ಳಿ, 1ನೇ ಹಂತ, ಎಲ್‌ಐಜಿ–1–137, ಪೂ+ಪ 12.25 ಮೀ, ದ+ಉ 3 ಮೀ, ಪೂ–ಎಲ್‌ಐಜಿ 134, ಪ–ರಸ್ತೆ, ಉ–ಎಲ್‌ಐಜಿ 138, ದ – ಎಲ್‌ಐಜಿ 136.
8	ಮುಕ್ರಮ್ ಪಾಷ ಮತ್ತು ಶಬನಮ್ ತಾಜ್ 6321004	1400000	3000000	24.2.2023 ಮಧ್ಯಾಹ್ನ 2 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ ಲಷ್ಕರ್ ಮೊಹಲ್ಲಾ ಎರೆಕಟ್ಟೆ ಬೀದಿ, ಮನೆ ನಂ.2576, ಹೊಸ ನಂ. ಎಲ್53/ಸಿ, ಪೂ+ಪ 18 ಅಡಿ, ದ+ಉ 18 ಅಡಿ, ಪೂ– 6 ಮೀಟರ್ ರಸ್ತೆ, ಪ– ಖಾಸಗಿ ಸ್ವತ್ತು, ಉ – ಎಜಾಜ್ ಅಹಮದ್ ಸ್ವತ್ತು, ದ – ಖಾಸಗಿ ಸ್ವತ್ತು.
8	ಟಿ.ಎನ್.ನಾಗರಾಜ್ S/o ನಂಜುಂಡೇಗೌಡ 632826	1400000	2600000	24.2.2023 ಮಧ್ಯಾಹ್ನ 3 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ಸಿ.ಹೆಚ್.ಮೊಹಲ್ಲಾ, ಗಂಗೋತ್ರಿ ಬಡಾವಣೆ, 11ನೇ ಕ್ರಾಸ್, ಮನೆ ನಂ. ಇಡಬ್ಲ್ಯೂಎಸ್157, , ಪೂ+ಪ 20 ಅಡಿ, ದ+ಉ 30 ಅಡಿ, ಪೂ– 158ನೇ ಸ್ವತ್ತು, ಪ–ರಸ್ತೆ, ಉ – ರಸ್ತೆ, ದ – ಡ್ರೈನೇಜ್.

ಹರಾಜಿನ ನಿಯಮ ಮತ್ತು ನಿಬಂಧನೆಗಳು

1. ಹರಾಜಿನಲ್ಲಿ ಭಾಗವಹಿಸುವವರು ರೂ. 25000 ಗಳನ್ನು ದಿ ಸಿಟಿ ಕೋ – ಆಪರೇಟಿವ್ ಬ್ಯಾಂಕ್ ಲಿ., ಮೈಸೂರು ಇವರ ಪರವಾಗಿ ಪಡೆದ ಡಿ.ಡಿ. ಅಥವಾ ನಗದು ರೂಪದಲ್ಲಿ ಠೇವಣಿಯಾಗಿ ಇಡಬೇಕು. ಹರಾಜಿನ ನಂತರ ಈ ಹಣವನ್ನು ಸ್ಥಳದಲ್ಲಿಯೇ ವಾಪಸ್ಸು ಪಡೆಯಬಹುದು.
2. ಹರಾಜಿನಲ್ಲಿ ಯಶಸ್ವಿಯಾದ ಬಿಡ್‌ದಾರರು ಅದೇ ದಿನ ಬಿಡ್ ಮೊಬಲಗಿನ ಶೇ. 25 ರಷ್ಟು ಹಣವನ್ನು ನಗದು ಅಥವಾ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ. ಮೂಲಕ ಪಾವತಿಸಬೇಕು ಮತ್ತು ಉಳಿದ ಶೇ. 25 ರಷ್ಟು ಹಣವನ್ನು 15 ದಿನಗಳೊಳಗೆ ಸಂದಾಯ ಮಾಡಬೇಕಾಗಿರುತ್ತದೆ.
3. ಯಶಸ್ವಿಯಾದ ಬಿಡ್‌ದಾರರು ಕಾನೂನು / ಪ್ರಸಂಗಿಕ ಖರ್ಚು – ವೆಚ್ಚಗಳಾದ ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕ, ನೀರು, ವಿದ್ಯುತ್ ಇತ್ಯಾದಿ ಎಲ್ಲವನ್ನೂ ತಾವೇ ಭರಿಸಬೇಕಾಗಿರುತ್ತದೆ.
4. ಸದರಿ ಹರಾಜು ಸ್ವತ್ತು ಹೇಗಿದೆಯೋ ಹಾಗೆಯೇ ಹರಾಜು ಮಾಡಲಾಗುತ್ತದೆ.
5. ಬ್ಯಾಂಕಿನ ಅಧಿಕೃತ ಅಧಿಕಾರಿಯವರು ಯಾವುದೇ ಕಾರಣ ನೀಡದೇ ಬಿಡ್‌ಅನ್ನು ಮುಂದೂಡುವ ಅಥವಾ ರದ್ದು ಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.
6. ಸ್ವತ್ತಿನ ಪರಿಶೀಲನೆ ಮತ್ತು ಹೆಚ್ಚಿನ ವಿವರಗಳಿಗಾಗಿ ಆಸಕ್ತ ಬಿಡ್‌ದಾರರು ಕೆಲಸದ ಯಾವುದೇ ದಿನದಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಹಾಗೂ ಸಾಯಂಕಾಲ 4.30 ಗಂಟೆಯಿಂದ 6.30 ಗಂಟೆಯವರೆಗೆ ಕಛೇರಿ ವೇಳೆಯಲ್ಲಿ ಅಧಿಕೃತ ಅಧಿಕಾರಿಯವರನ್ನು ಸಂಪರ್ಕಿಸಬಹುದು.

ದೂರವಾಣಿ : 2520026 / 2420829
ದಿನಾಂಕ: 4/2/2023, ಸ್ಥಳ : ಮೈಸೂರು

ಸಹಿ/– ಅಧಿಕೃತ ಅಧಿಕಾರಿ
ದಿ ಸಿಟಿ ಕೋ – ಆಪರೇಟಿವ್ ಬ್ಯಾಂಕ್ ಲಿ., ಮೈಸೂರು





ಬನ್ನೂರು ಕೆ.ರಾಜು
ಮೊ. 9481533167

ಇಂದು ಪ್ರಸಿದ್ಧ ಹೇಮಾದ್ರಿ ಜಾತ್ರೆ ಬನ್ನೂರು ಬಂಡಿ

"ಸ್ವರ್ಣಮೂರ್ತಿ ಲತಾತನ್ವಿ ।
ನಾಭೌ ಶ್ರೀ ಚಕ್ರಮೇವಚ ॥
ವಾಮ ಹಸ್ತ ಚಕ್ರಧರೇ ।
ದಕ್ಷಿಣೇನ ವರ ಪ್ರದೇ ॥
ವಿದ್ಯಾರಣ್ಯಾರ್ಚಿತೆ ದೇವಿ ।
ಸ್ವರ್ಣವೃಷ್ಟಿ ಪ್ರಧಾಯಿನೇ ॥
ವಹ್ನೀಪುರ ಸ್ಥಿತೇ ದೇವಿ ।
ಹೇಮಾದ್ರಿ ನಾಮಧಾರಿಣೇ ॥"

ನಮ್ಮದು ಹಬ್ಬಗಳ ನಾಡು. ವರ್ಷವಿಡೀ ಒಂದಲ್ಲ ಒಂದು ಹಬ್ಬ ಹರಿದಿನಗಳು, ಉತ್ಸವಗಳು, ಜಾತ್ರೆಗಳು ನಡೆಯುತ್ತಲೇ ಇರುತ್ತವೆ. ಗ್ರಾಮ ದೇವತೆಗಳ ಹಬ್ಬಗಳಿಗಂತೂ ಲೆಕ್ಕವೇ ಇಲ್ಲ. ಜಾನಪದವಾಗಿ ಮತ್ತು ಧಾರ್ಮಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಹೇಳುವುದಾದರೆ ಸಾಮಾನ್ಯವಾಗಿ ಹಳ್ಳಿಗೊಂದು, ಊರಿಗೊಂದು, ನಗರಕ್ಕೊಂದು, ಪಟ್ಟಣಕ್ಕೊಂದು, ಗ್ರಾಮಕ್ಕೊಂದು ಗ್ರಾಮ ದೇವತೆ ಇದ್ದೇ ಇರುತ್ತಾಳೆ. ಹಾಗೆಯೇ ತನ್ನದೇ ಆದ ಚಾರಿತ್ರಿಕ ಹಿನ್ನೆಲೆ ಹೊಂದಿರುವ ಬನ್ನೂರಿನ ಗ್ರಾಮ ದೇವತೆ ಶ್ರೀ ಹೇಮಾದ್ರಮ್ಮ, ಹೇಮಾದ್ರಿ, ಹೇಮಾದ್ರಾಂಬೆ ಮುಂತಾದ ಹೆಸರುಗಳಿಂದಲೂ ಕರೆಸಿಕೊಳ್ಳುವ ಈ ತಾಯಿ ಶಕ್ತಿ ದೇವತೆ. ಇಲ್ಲಿನ ಪ್ರತಿಯೊಂದು ಜಾತಿ, ಜನಾಂಗವೂ ಪೂಜಿಸುವ ಬನ್ನೂರಿನ ಈ ಗ್ರಾಮ ದೇವತೆಯ ಕಥೆಯೇ ಒಂದು ರೋಚಕವಾದದ್ದು.

ಹೇಮಾದ್ರಿ ಬನ್ನೂರಿಗೆ ಬಂದ ಬಗೆ: ಹೇಮಾದ್ರಮ್ಮ ದೇವತೆ ಹೆಮ್ಮಿಗೆ ಗ್ರಾಮದಿಂದ ಬಂದು ಬನ್ನೂರಿನಲ್ಲಿ ನೆಲೆ ನಿಂತ ಅಮ್ಮ. ಈ ತಾಯಿ ತಿರುಮಕೂಡಲು ನರಸೀಪುರದ ಬಳಿಯ ಹೆಮ್ಮಿಗೆ ಗ್ರಾಮದಲ್ಲಿದ್ದಾಗ ಇವಳ ಚಿನ್ನದ ವಿಗ್ರಹವನ್ನು ಏಳು ಮಂದಿ ಕಳ್ಳರು ಕದ್ದು, ತಲೆಮರೆಸಿಕೊಂಡು ಬನ್ನೂರಿಗೆ ಬರುತ್ತಾರೆ. ಹೀಗೆ ಬಂದವರೇ ಸುರಕ್ಷಿತ ಜಾಗವನ್ನು ಹುಡುಕುತ್ತಾ ಅದನ್ನು ಕೆಲವು ಸ್ಥಳಗಳಲ್ಲಿಟ್ಟು ಕೆಚ್ಚಿ ಹಂಚಿ ಕೊಳ್ಳಲು ಮುಂದಾಗುತ್ತಾರೆ. ಆದರೆ ಆಗ ಯಾರೋ ಸುಳಿದಂತೆ ಅವರಿಗೆ ಭಾಸವಾಗುತ್ತದೆ. ಹಾಗಾಗಿ ಮುಂದೆ ಮುಂದೆ ಹೋಗುತ್ತಾರೆ.ಕೊನೆಗೆ ಈಗ ದೇವಿ ತೋಪು ಎಂದು ಕರೆಯಲ್ಪಡುವ ಬನ್ನೂರಿಗೆ ಸಮೀಪದ ತೋಪಿಗೆ ನುಗ್ಗುತ್ತಾರೆ. ಅಲ್ಲಿ ಹರಿಯುತ್ತಿದ್ದ ಕಾವೇರಿ ನದಿಯ ಮಧ್ಯ ಭಾಗದಲ್ಲಿದ್ದ ಒಂದು ಬೃಹತ್ ಕಲ್ಲು ಬಂಡೆಯ ಮೇಲೆ ಕೂರುತ್ತಾರೆ. ತುಸು ಹೊತ್ತು ಯೋಚಿ ಸಿದ ಅವರು ಹೇಮಾದ್ರಮ್ಮನ ಚಿನ್ನದ ವಿಗ್ರಹವನ್ನು ಚೂರು ಮಾಡಿ ಏಳು ಮಂದಿ ಕಳ್ಳರೂ ಹಂಚಿಕೊಳ್ಳಲು ನಿರ್ಧರಿ ಸುತ್ತಾರೆ. ಹೀಗೆ ದೇವಿಯ ವಿಗ್ರಹವನ್ನು ಒಡೆಯುವಾಗ ಕೈಜಾರಿ ನದಿಯ ಮಡುವಿಗೆ ವಿಗ್ರಹ ಬೀಳುತ್ತದೆ. ಆಗ ಏಳು ಮಂದಿ ಕಳ್ಳರೂ ಅದನ್ನು ಹುಡುಕಿ ತರಲು ನದಿಯ ಮಡುವಿನೊಳಕ್ಕೆ ಹಾರುತ್ತಾರೆ. ಅಲ್ಲಿಯೇ ಜಲಸಮಾಧಿಯಾಗುತ್ತಾರೆ. ಹೀಗೆ ಕಳ್ಳರಿಂದ ಪಾರಾಗಿ ನದಿಯಲ್ಲಿ ಮುಳುಗಿದ ಹೇಮಾದ್ರಮ್ಮ ದೇವಿಯು ಅದೇ ದಿನ ಊರ ಗೌಡರ ಕನಸಿಗೆ ಬಂದು ತನ್ನ ಕಥೆ ಹೇಳಿ ತಾನು ನಿಮ್ಮೂರಿನಲ್ಲಿ ನೆಲೆಸಬೇಕೆಂದರೆ ಹೆಜ್ಜೆಗೊಂದು ಮನುಷ್ಯನ ತಲೆಯನ್ನು ಬಲಿ ಕೊಡಬೇಕೆಂದು ಹೇಳುತ್ತಾಳೆ. ಆಗ ಊರಗೌಡರು ಚಿಂತಾಕ್ರಾಂತರಾಗುತ್ತಾರೆ.

ಗೌಡರ ಚಿಂತೆಯನ್ನು ಕಂಡ ಭಕ್ತನೊಬ್ಬ ವಿಷಯ ತಿಳಿದು ನಮ್ಮೂರಿಗೆ ಒಳ್ಳೆಯದಾಗುವುದಾದರೆ ದೇವಿಗೆ ತನ್ನ ತಲೆಯನ್ನೇ ಕೊಡುವುದಾಗಿ ತಕ್ಷಣವೇ ತನ್ನ ಶಿರವನ್ನು ಕತ್ತರಿಸಿ ದೇವಿಗೆ ಸಮರ್ಪಿಸುತ್ತಾನೆ. ಕೂಡಲೇ ಅವನು ಕತ್ತರಿಸಿದ ಶಿರವು ಸಿಡಿದು, ಮಿಂಚಿನಂತೆ ಬನ್ನೂರಿನ ಹೊರ ಭಾಗಕ್ಕೆ ಹೋಗಿ ಬೀಳುತ್ತದೆ. ಹೀಗೆ ಅವನ ಶಿರ ಬಿದ್ದ ಸ್ಥಳದಲ್ಲಿ 'ಸಿಡಿದಲೆ ವೀರ' ಎನ್ನುವ ಗದ್ದಿಗೆ ಸೃಷ್ಟಿಯಾಗುತ್ತದೆ. ಈ ಕಾರಣಕ್ಕೆ ಅಲ್ಲಿ 'ಸಿಡಿದಲಯ್ಯನ ಹಬ್ಬ' ಕೂಡ ಪ್ರತಿವರ್ಷ ಆಚರಣೆಯಲ್ಲಿದೆ. ಭಕ್ತನ ಭಕ್ತಿಗೆ ಮೆಚ್ಚಿದ ಹೇಮಾದ್ರಿ ಸಂತಸಗೊಂಡು ನನಗೆ ನರರ ಶಿರಬಲಿ ಬೇಡವೆನ್ನುತ್ತಾಳೆ. ಆಗ ಊರ ಗೌಡರು ಎಳನೀರು ತುಂಬಿದ ತೆಂಗಿನ ಕಾಯಿಗಳನ್ನು ನೀಡುವುದಾಗಿ ಹೇಳಿ ಪ್ರಾರ್ಥಿಸಿ ದೇವಿಯು ಬನ್ನೂರಿನಲ್ಲಿ ನೆಲೆಸುವಂತೆ ಮಾಡುತ್ತಾರೆ. ಹಾಗೆಯೇ ಬಲಿಯಾದ ಭಕ್ತನ ಸಮುದಾಯಕ್ಕೆ ತಮಗೆ ಏನು ವರ ಬೇಕೆಂದು ಕೇಳುತ್ತಾಳೆ.ಆಗ ಅವರು ಪ್ರತಿ ವರ್ಷ ನೀನು ನಮ್ಮಲ್ಲಿಗೆ ಬಂದು ಊಟ ಮಾಡಿ ಹರಸಬೇಕೆಂದು ಕೋರುತ್ತಾರೆ. ದೇವಿ ತಥಾಸ್ತು ಎನ್ನುತ್ತಾಳೆ. ಅದರಂತೆ ಇವತ್ತಿಗೂ ಕೂಡ ಪ್ರತಿವರ್ಷದ ಬಂಡಿ ಹಬ್ಬದಲ್ಲೂ ಮೊದಲ ನೈವೇದ್ಯ ಆ ಸಮುದಾಯದ್ದು. ಹೀಗೆ ಬನ್ನೂರಿನಲ್ಲಿ ನೆಲೆ ನಿಂತ ಹೇಮಾದ್ರಮ್ಮ ದೇವಿಗೆ ಅಂದಿನಿಂದ ಪ್ರತಿವರ್ಷ ಮಾಘ ಮಾಸ ಹುಣ್ಣಿಮೆಯ ದಿನದಿಂದ ಸಮಾರು ಒಂದು ವಾರ ಕಾಲ ಬನ್ನೂರಿನಲ್ಲಿ ಜಾತ್ರೆಯ ಪೂಜಾ ಮಹೋತ್ಸವ ಜರುಗುತ್ತದೆ. ಈ ಸಂದರ್ಭದಲ್ಲಿ ನಡೆಯುವ 'ಬನ್ನೂರು ಬಂಡಿ' ರಾಜ್ಯದಲ್ಲೇ ಪ್ರಸಿದ್ಧಿ ಪಡೆದಿದೆ.

ನಾಡಿನಲ್ಲಿ ಬೇಕಾದಷ್ಟು ಬಂಡಿ ಹಬ್ಬಗಳಿದ್ದರೂ ಬನ್ನೂರು ಬಂಡಿ ಜಾತ್ರೆಯದೇ ಒಂದು ವಿಶೇಷತೆ. ಇದನ್ನು ಕಣ್ಣಾರೆ ಕಂಡು ಆಸ್ವಾದಿಸಿದಾಗಲೇ ಇದರ ವೈಭವ ಅರಿವಾಗುವುದು. ಸಂಪ್ರದಾಯದಂತೆ ಬನ್ನೂರಿನ ಪ್ರತಿಯೊಂದು ಜಾತಿ, ಜನಾಂಗವೂ ಸುಮಾರು ಎರಡು ವಾರಗಳ ಕಾಲ ಸಂಪೂರ್ಣವಾಗಿ ಮಾಂಸಾಹಾರವನ್ನು ತ್ಯಜಿಸಿರುತ್ತಾರೆ. ಜಾತ್ರೆ ಸಂದರ್ಭದಲ್ಲಿ ಎಣಬಗಾರರೆಂಬ ನಾಮಾಂಕಿತ ಹೊಂದಿರುವ ದೇವಿಯ ಭಕ್ತರ ಒಂದು ವರ್ಗದ ಜನರಂತೂ ಹೋಟೆಲ್‌ಗಳು ಸೇರಿದಂತೆ ಬೇರೆಯವರ ಮನೆಯಲ್ಲಿ ಒಂದು ತೊಟ್ಟು ನೀರನ್ನು ಸಹ ಕುಡಿಯುವಂತಿಲ್ಲ. ಅಂತಹ ಕಟ್ಟುನಿಟ್ಟಿನ ಹಬ್ಬವಿದು. ಜಾತ್ರೆಯ ಸಂದರ್ಭದಲ್ಲಿ ಊರಿನ ಪ್ರತಿಯೊಂದು ಮನೆಯೂ ಸುಣ್ಣ ಬಣ್ಣಗಳಿಂದ ಕಂಗೊಳಿಸುತ್ತವೆ. ರಾತ್ರಿಯಂತೂ ತರ ತರಹದ ವಿದ್ಯುತ್ ದೀಪಾಲಂಕಾರದಿಂದ ಊರಿಗೆ ಊರೇ ಬೆಳಗುತ್ತದೆ.

ವ್ಯಾಸ ಪೂರ್ಣಿಮೆಯ ಹಿಂದಿನ ದಿನ 'ಚಿಕ್ಕ ಮಾದಿಗ' ಎಂದು ಹೇಳುವ ಉತ್ಸವದ ಮೂಲಕ ಹೆಬ್ಬಾರಗಳೊಡನೆ ಹೇಮಾದ್ರಮ್ಮನ ದೇಗುಲಕ್ಕೆ ಹೋಗಿ ದೇವಿಯನ್ನು ತಮ್ಮಲ್ಲಿಗೆ ಭೋಜನಕ್ಕೆ ಆಹ್ವಾನಿಸುತ್ತಾರೆ. ಅಷ್ಟರಲ್ಲಿ ಇಡೀ ಊರು ಮಡಿಮಾಡಿಕೊಂಡು ಹೊಸ ಮಡಿಕೆಗಳನ್ನು ತೆಗೆದುಕೊಳ್ಳುವ ಸಂಪ್ರದಾಯ ಮಾಡುತ್ತಾರೆ. ವ್ಯಾಸ ಪೂರ್ಣಿಮೆಯ ದಿನ 'ದೊಡ್ಡ ಮಾದಿಗ'ಎಂಬ ಉತ್ಸವ ಅಮ್ಮನ ದೇವಾಲಯಕ್ಕೆ ಹೊರಡುತ್ತದೆ.ಇದು ದೇವಿಯನ್ನು ಮತ್ತೊಮ್ಮೆ ಭೋಜನಕ್ಕೆ ಕರೆದೊಯ್ಯುವ ಸಂಭ್ರಮ. ದೇವಾಲಯದಿಂದ ಅರ್ಚಕರು ದೇವಿಯನ್ನು ಹೊತ್ತು ಏಳು ಹೆಬ್ಬಾರಗಳ ಹಿಂದೆ ಓಡುತ್ತಾರೆ ಈ ಹೆಬ್ಬಾರಗಳು ಹಿಂದೆ ದೇವಿಯನ್ನು ಕದ್ದು ಹೊತ್ತುಕೊಂಡು ಬಂದಿದ್ದ ಏಳು ಮಂದಿ ಕಳ್ಳರ ಸಂಕೇತ. ಇಲ್ಲಿ ದೇವಿಯನ್ನು ಹೊತ್ತು ನಡೆಯುವುದಿಲ್ಲ. ಓಡುತ್ತಾರೆ. ಇದೇ ಇಲ್ಲಿನ ವಿಶೇಷ. "ಚೌಕಾ, ಚೌಕಾ...ಹೇಮಾದ್ರಾಂಬ ಚೌಕ" ಎಂಬ ವಿಶಿಷ್ಟ ಘೋಷಣೆಯೊಡನೆ ವೀಳ್ಯದೆಲೆಗಳನ್ನು ದೇವಿಗೆ ಭಕ್ತರು ಎರಚುತ್ತಾ ಸಂಭ್ರಮಿಸುವುದೇ ಒಂದು ಚಂದ!

ದೇವಿಯನ್ನು ಜನಸಾಗರದ ನಡುವೆ ದೇವಾಲಯದಿಂದಲೂ ಹೊತ್ತುಕೊಂಡು ಓಡಿ ಬಂದ ಅರ್ಚಕರು ಊರಿನ ಗಡಿ ಭಾಗದಲ್ಲಿ ಎಣಬಗಾರರಿಗೆ ವರ್ಗಾಯಿಸುತ್ತಾರೆ. ಆಗ ಎಣಬಗಾರರು ಒಬ್ಬರಿಗೊಬ್ಬರು ತಲೆ ಬದಲಿಸುತ್ತಾ ದೇವಿಯನ್ನು ಹೊತ್ತು ದೇವಿ ತೋಪಿನತ್ತ ಇನ್ನೂ ವೇಗವಾಗಿ ಓಡುತ್ತಾರೆ. ಇದು ಹಿಂದೆ ಏಳು ಮಂದಿ ಕಳ್ಳರು ದೇವಿಯನ್ನು ಕದ್ದೊಯ್ದ ಹಾದಿ. ಈಗ ಇದನ್ನು ದೇವರ ಹಾದಿ ಎಂದು ಕರೆಯಲಾಗುತ್ತದೆ. ಹೀಗೆ ದೇವಿಯನ್ನು ದೇವಿ ತೋಪಿಗೆ ಹೊತ್ತು ಬಂದ ನಂತರ ಅಲ್ಲಿ ವಿಶೇಷ ಪೂಜೆಯೊಡನೆ ಹರಿಜನರು ಮಾಡಿರುವ ಮಡಿಯಲ್ಲಿ ದೇವಿ ಮೊದಲಿಗೆ ಭೋಜನ ಸ್ವೀಕರಿಸುವಳು. ಇದನ್ನು ಕೂಳಿಗೆ ಬೀಳುವುದು ಎನ್ನುತ್ತಾರೆ. ತದನಂತರ ಬಗೆ ಬಗೆಯ ತಿಂಡಿ ತೀರ್ಥಗಳನ್ನು ಮಾಡಿಕೊಂಡು ವಿವಿಧ ಸಮುದಾಯದ ಎಲ್ಲಾ ಭಕ್ತ ಜನರೂ ದೇವಿ ಪೂಜೆಯಲ್ಲಿ ನಿರತರಾಗುವರು.ಈ ನಡುವೆ ಅತ್ತ ಊರಿನ ಒಳಗೆ ಬಹು ವಿಜೃಂಭಣೆಯಿಂದ ಬಂಡಿ ಜಾತ್ರೆ ನಡೆಯುತ್ತಿರುತ್ತದೆ. ಎರಡು ಸುಭದ್ರವಾದ ಅಲಂಕೃತ ಬಂಡಿಗಳು ಅಷ್ಟೇ ದಷ್ಟ ಪುಷ್ಟವಾದ ಎರಡು ಜೊತೆ ಎತ್ತುಗಳೊಡನೆ ಬಂಡಿಗಳನ್ನು ಎಳೆದುಕೊಂಡು ವೇಗವಾಗಿ ಓಡುತ್ತಿರುತ್ತವೆ. ಸೂರ್ಯ ಮುಳುಗಿದ ನಂತರ ಸಂಜೆ ದೇವಿ ತೋಪಿನಿಂದ ಹೇಮಾದ್ರಿ ಅಮ್ಮ ಊರಿಗೆ ಪ್ರವೇಶ ಮಾಡುವ ತನಕವೂ ಬಂಡಿ ಓಟ ನಡೆಯುತ್ತಿರುತ್ತದೆ. ಇದೇ ಬನ್ನೂರು ಬಂಡಿ ಜಾತ್ರೆಯ ವಿಶೇಷ.

ವಿವಿಧ ಉತ್ಸವಗಳು: ಆದಿ ಜಾಂಬವ ಜನಾಂಗದವರಿಂದ ಹಸಿರು ಚಪ್ಪರದ ಸೇವೋತ್ಸವ, ಯಳಂಗಾರ್ ಜನಾಂಗದವರಿಂದ ಅನ್ನಡಿಕೆ ಬಂಡಿ ಸೇವೆ, ನಾಡಗೌಡರಿಂದ ಅಂಕುರಾರ್ಪಣೆ ಸೇವೋತ್ಸವ ಹರಿಜನರಿಂದ ಅನ್ನ ನೈವೇದ್ಯ ಸೇವೆ, ಶಿವಜ್ಯೋತಿಪಣ ಜನಾಂಗದವರಿಂದ ಶಿವ ಜ್ಯೋತಿಪಣ ಉತ್ಸವ, ಆಚಾರ್ ಕುಟುಂಬದವರಿಂದ ಮಂಟಪೋತ್ಸವ, ಬಣಜಿಗ ಶೆಟ್ಟರ ಜನಾಂಗದವರಿಂದ ಪಲ್ಲಕ್ಕಿ ಉತ್ಸವ, ಈಡಿಗ ಜನಾಂಗದವರಿಂದ ಶೇಷಗಜ ವಾಹನೋತ್ಸವ, ನಾಯಕ ಜನಾಂಗದವರಿಂದ ಗಜ ವಾಹನೋತ್ಸವ, ವೀರಶೈವ ಜನಾಂಗದವರಿಂದ ವಿಭು ವೋತ್ಸವ, ಪೊಲೀಸ್ ಇಲಾಖೆಯಿಂದ ಗರುಡೋತ್ಸವ, ಒಕ್ಕಲಿಗ ಜನಾಂಗದವರಿಂದ ದಿವ್ಯ ಮಹಾರಥೋತ್ಸವ, ಬ್ರಾಹ್ಮಣ ಜನಾಂಗದವರಿಂದ ತೇರಡಿ ಉತ್ಸವ, ಪೌರ ಕಾರ್ಮಿಕರಿಂದ ವಾದ್ಯೋತ್ಸವ, ಮಾಕನಹಳ್ಳಿ ಗ್ರಾಮಸ್ಥರಿಂದ ನಾಯಕ ಜನಾಂಗದವರ ಸಹಕಾರದೊಡನೆ ತೆಪ್ಪೋತ್ಸವ, ನಯನ ಕ್ಷತ್ರಿಯ ಜನಾಂಗದವರಿಂದ ಪಲ್ಲಕ್ಕಿ ಉತ್ಸವ, ವೈಮಾಳಿಗೋತ್ಸವ, ಮಡಿವಾಳ ಶೆಟ್ಟರ ಜನಾಂಗದವರಿಂದ ನಡೆಮಡಿ ಮತ್ತು ಪಂಜಿನ ಸೇವೋತ್ಸವ, ಭೋವಿ ಜನಾಂಗದವರಿಂದ ಬ್ಯಾರಿಕೇಡ್ ವ್ಯವಸ್ಥೆಯ ಸೇವೆ, ಹೀಗೆ ತೇರು, ತೆಪ್ಪ, ಪಲ್ಲಕ್ಕಿ ಅಂತ ಎಲ್ಲಾ ರೀತಿಯ ಉತ್ಸವಗಳು ಜಾತ್ರೆ ಪೂರ್ತಿ ಪ್ರತಿದಿನ ತಾಯಿ ಹೇಮಾದ್ರಿ ದೇವಿಗೆ ಜರುಗುತ್ತವೆ. ಪೌರಕಾರ್ಮಿಕರೂ ಒಳಗೊಂಡಂತೆ ಹರಿಜನರಾದಿಯಾಗಿ ಯಾವುದೇ ಭೇದಭಾವವಿಲ್ಲದೆ ಪ್ರತಿಯೊಂದು ಜಾತಿಯವರೂ ಒಂದೊಂದು ಉತ್ಸವಗಳನ್ನು ವಹಿಸಿಕೊಂಡು ಬನ್ನೂರಿನಲ್ಲಿ ಹಬ್ಬ ಆಚರಿಸುವುದೇ ಅಬ್ಬಬ್ಬಾ ಅನ್ನುವಂಥ ದೊಡ್ಡ ಸಂಭ್ರಮ. ನಿಜಕ್ಕೂ ಇದು ಸರ್ವ ಜನಾಂಗದ ಶಾಂತಿಯ ತೋಟವೇ ಸರಿ!

ಹೇಮಾದ್ರಿ ವಿಗ್ರಹದ ಮಹತ್ವ: ಅಪ್ಪಟ ಚಿನ್ನದಿಂದ ರೂಪುಗೊಂಡಿರುವ ಹೇಮಾದ್ರಾಂಬ ದೇವಿಯ ಈ ವಿಗ್ರಹವನ್ನು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಪ್ರೇರಕ ಶಕ್ತಿಯಾಗಿದ್ದ ಯತಿವರ್ಯ ವಿದ್ಯಾರಣ್ಯರು ಪೂಜಿಸುತ್ತಿದ್ದರಂತೆ. ಅವರ ನಂತರ ವಿಜಯನಗರದ ಅರಸರಿಗೆ ಅದನ್ನು ಕೊಡಲಾಗಿತ್ತು. ಕಾಲಾನಂತರ ವಿಗ್ರಹ ಹೆಮ್ಮಿಗೆಗೆ ಬಂದು ತದನಂತರ ಬನ್ನೂರಿಗೆ ಬಂದ ಭಾಗ್ಯ ದೇವತೆಯಾಗಿದೆ. ದೇವಿಯ ವಿಗ್ರಹ 15 ಇಂಚು ಎತ್ತರವಿದ್ದು, ನಾಲ್ಕು ಕರಗಳನ್ನು ಹೊಂದಿದೆ. ಒಂದು ಕರದಲ್ಲಿ ಶಂಖ ಮತ್ತೊಂದು ಕರದಲ್ಲಿ ಚಕ್ರವಿದೆ. ಮತ್ತೆರಡು ಕರಗಳು ವರದ ಹಸ್ತ ಮತ್ತು ಅಭಯ ಹಸ್ತಗಳಾಗಿವೆ. ಬೆಲೆ ಕಟ್ಟಲಾಗದ ಬಂಗಾರದ ಮೂರ್ತಿಯಾಗಿರುವ ಇದನ್ನು ರಕ್ಷಣೆಗೋಸ್ಕರ ತಾಲೂಕು ಆಡಳಿತದ ಖಜಾನೆಯಲ್ಲಿ ಸುಭದ್ರವಾಗಿಡಲಾಗಿರುತ್ತದೆ. ಪ್ರತಿವರ್ಷ ಜಾತ್ರೆ ನಡೆಯುವ ಸಂದರ್ಭದಲ್ಲಿ ಮಾತ್ರ ಷರತ್ತಿನೊಡನೆ ಊರ ಮುಖಂಡರ ಸುಪರ್ದಿಗೆ ಇದನ್ನು ನೀಡಲಾಗುತ್ತದೆ. ಜಾತ್ರೆ ಮುಗಿದ ನಂತರ ಯಥಾ ಪ್ರಕಾರ ತಾಲೂಕು ಆಡಳಿತದ ವಶದಲ್ಲಿ ಖಜಾನೆಯಲ್ಲಿ ಭದ್ರವಾಗಿರುತ್ತದೆ.



ವಾರಭವಿಷ್ಯ

5.2.2023 ರಿಂದ 11.02.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮಕರ, ಚಂದ್ರ-ಕಟಕ, ಸಿಂಹ, ಕನ್ಯಾ ಕುಜ-ವೃಷಭ, ಬುಧ-ಮಕರ, ಗುರು-ಮೀನ, ಶುಕ್ರ-ಕುಂಭ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಸಪ್ತಾಹದ ಆದಿಗೆ ಎಲ್ಲರಲ್ಲಿ ಪ್ರೀತಿಯನ್ನು ಗಳಿಸುವಿರಿ. ಇಷ್ಟ ಕಾರ್ಯಗಳು ಸಿದ್ಧಿಸುವುದು, ಪಾಯಸಾನ್ನ ಭೋಜನದೊಂದಿಗೆ ವಿಹಾರಾರ್ಥ ಪ್ರಯಾಣಗಳು. ಸುಗಂಧ ದ್ರವ್ಯಗಳ ಪ್ರಾಪ್ತಿ. ಅನೇಕ ವಿಧವಾದ ಸುಖ ಪ್ರಾಪ್ತಿ. ಅನ್ಯ ಸ್ತ್ರೀಯರನ್ನು ಗೌರವದಿಂದ ಕಾಣಿ, ಮನಃ ಚಂಚತೆಯಿಂದ 'ಸಹವಾಸದಿಂದ ಸನ್ಯಾಸಿ ಕೆಟ್ಟ' ಎಂಬುದನ್ನು ಸಾಬೀತುಪಡಿಸಲು ರಾಹುಗ್ರಹ ನಿಮ್ಮ ರಾಶಿಯಲ್ಲೇ ಇದೆ. ಸ್ಥೈರಣೆ ಮುಖ್ಯ.
ಶ್ರೀಯೋಗ ನರಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ-4.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ನೀವು ಬಹಳಷ್ಟು ಸಾಮರ್ಥ್ಯ ಹೊಂದಿದ್ದೀರಿ. ಆದರೆ ಪ್ರಮುಖ ಗ್ರಹಗಳು ನಿಮ್ಮ ಅನುಕೂಲಕ್ಕಿಲ್ಲ. ಎಲ್ಲಾ ಹಣಕಾಸಿನ ವ್ಯವಸ್ಥೆಯನ್ನು ಬದ್ಧತೆಯಿಂದ ನಿರ್ವಹಿಸಿ, ಅನ್ಯಥಾ ನಷ್ಟವನ್ನು ಅನುಭವಿಸಬೇಕಾದೀತು. ವಾರ ಮಧ್ಯೆ ಚಂದ್ರಗ್ರಹದ ಅನುಕೂಲಕರ ಸಂಚಾರ ನಿಮ್ಮ ಮನೋಸ್ಥೈರ್ಯವನ್ನು ಹೆಚ್ಚಿಸುವುದರ ಜೊತೆಗೆ ಕೆಲವೊಂದು ಸಂತಸದ ಸಂಗತಿಗಳು ಜರುಗಲಿದೆ. ಮನೆಯಲ್ಲಿ ಉಂಟಾಗಿದ್ದ ಅಸಮಾಧಾನದ ವಾತಾವರಣ ನಿವಾರಣೆಯಾಗುವುದು. ಶ್ರೀ ತ್ರಿಪುರ ಸುಂದರೀ ದರ್ಶನ. ಶುಭ ಸಂಖ್ಯೆ-3.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಮನೋಧೈರ್ಯದಿಂದ ಕಾರ್ಯ ಸಾಧನೆ, ಧನ, ಧಾನ್ಯ, ನೂತನ ವಸ್ತ್ರಲಾಭ. ಪ್ರಿಯ ಕಾಮಿನಿಯ ಸಾಂಗತ್ಯ. ವಿದ್ಯಾರ್ಥಿಗಳು ವಿದ್ಯಾ-ಕೀರ್ತಿಗಳನ್ನು ಪಡೆಯುವರು. ನಿಮ್ಮ ರಾಶಿ ಸ್ಥಿತ ಕುಜನಿಂದ ದುಡುಕು ನಿರ್ಧಾರಗಳಿಂದ ಶತ್ರು ಜನರಿಂದ ವ್ಯವಹಾರಾದಿಗಳಲ್ಲಿ ಅಡಚಣೆಗಳು ಉಂಟಾಗುವುದು. ಅನವಶ್ಯಕ ಸಂಚಾರಗಳಿಂದ ಹಾನಿ, ಧರ್ಮಲೋಪ ಕಾರ್ಯವನ್ನು ಎಸಗಿ ತೊಂದರೆ ಪಡುವಿರಿ.
ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-2.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ಅನಿರೀಕ್ಷಿತ ಮೂಲಗಳಿಂದ ಧನ ಗಳಿಸುವ ಸಾಧ್ಯತೆ ಇದೆ. ಸಂಸಾರದಲ್ಲಿನ ಕ್ಲಿಷ್ಟ ಸಮಸ್ಯೆಗೆ ಕುಟುಂಬ ಸದಸ್ಯರಲ್ಲಿ ಒಮ್ಮತ ಮೂಡಲಿದೆ. ಫ್ಯಾನ್ಸಿ ಸ್ಟೋರ್ ಮಾರಾಟಗಾರರಿಗೆ ಅಧಿಕ ವ್ಯಾಪಾರವಾಗಿ ಹೆಚ್ಚಿನ ಧನಲಾಭವಾಗುವುದು. ವಾರಮಧ್ಯೆ ದಾನ-ಧರ್ಮ ಬುದ್ಧಿಯಿಂದ ಜನಮನ್ನಣೆ ಗಳಿಸುವಿರಿ. ಕೇತು-ರಾಹು ಸಂಯೋಜನೆ ಅಶುಭವಿದ್ದು ವಿಷಾಹಾರ ಸೇವನೆಯಿಂದ ಆರೋಗ್ಯದಲ್ಲಿ ವ್ಯತ್ಯಯ ಉಂಟಾಗಬಹುದು.
ಶ್ರೀ ನೃಸಿಂಹ ಉಪಾಸನೆ. ಶುಭ ಸಂಖ್ಯೆ-6.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

'ಧೈರ್ಯಂ ಸರ್ವತ್ರ ಸಾಧನಂ' ಎಂಬ ನಾಣ್ಣುಡಿಯಂತೆ ಈ ಸಪ್ತಾಹದಲ್ಲಿ ನೀವು ಮಾಡುವ ಸಕಲ ಕೆಲಸ ಕಾರ್ಯಗಳು ಜಯದ ಹಾದಿಯಲ್ಲಿ ಸಾಗಲಿದೆ. ಹೊಸ ಮಿತ್ರರು ದೊರೆತರೆ ಗುಣವರಿತು ಗೆಳೆತನ ಮಾಡಿ. ಸರ್ಕಾರಿ ನೌಕರರು ಅಡ್ಡ ದಾರಿಯಲ್ಲಿ ಸಾಗಿ ತೊಂದರೆ ಅನುಭವಿಸುವರು. ಕೋಪ ಮಾಡುವುದರಿಂದ ಕಾರ್ಯಗೆಡುತ್ತದೆ. ಮನೆಯಲ್ಲಿ ಪರಸ್ಪರ ಹೊಂದಾಣಿಕೆಯೇ ಮುಖ್ಯವಾಗಿರಲಿ.
ಶ್ರೀ ಸತ್ಯನಾರಾಯಣ ಅರ್ಚನೆ. ಶುಭ ಸಂಖ್ಯೆ-5.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸಾಡೇಸಾತಿಯ ಪರೀಕ್ಷಾ ಸಮಯ ಮುಕ್ತಾಯವಾಗಿದೆ. ಆದರೆ ನಿಮ್ಮ ಯೋಚನಾ ಸರಣಿ ನೀವು ಏನನ್ನು ಮಾಡಲು ಬಯಸುತ್ತೀರೋ ಅದಕ್ಕೆ ಪೂರಕವಾಗಿಲ್ಲ. ಈ ವಾರದ ನಿಮ್ಮ ಬಜೆಟ್ ನಿಮ್ಮ ವರಮಾನವನ್ನು ಮೀರುವ ಸಾಧ್ಯತೆ ಇರುತ್ತದೆ. ವಾರದ ಕಡೆಗೆ ಗೃಹದಲ್ಲಿ ಲವಲವಿಕೆಯ ವಾತಾವರಣ, ಹೊಸ ಉತ್ಸಾಹಗಳು ಉಂಟಾಗಲಿದೆ. ಮಾತೃಶ್ರೀಯವರ ಆಶೀರ್ವಾದದಿಂದ ಆಸ್ತಿ-ಪಾಸ್ತಿ ಹೊಂದುವ ಅವಕಾಶವಿದೆ.
ಶ್ರೀ ದಕ್ಷಿಣಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-9.

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)

ಗುರು-ಚಂದ್ರ ಸಂಯೋಗ ಶುಭವಿದೆ. ಭಾಗ್ಯದ ಬಾಗಿಲು ತೆರೆದಿದೆ. ಯತ್ನ ಕಾರ್ಯಗಳಲ್ಲಿ ಉಂಟಾಗಿದ್ದ ವಿಘ್ನಗಳು ನಿವಾರಣೆ ಆಗುವುದು. ಹೊಸ ಬಂಡವಾಳ ಹೂಡಲು ಅಡ್ಡಿ ಇಲ್ಲ. ರಜತ, ಸುವರ್ಣ, ತಾಮ್ರ ವ್ಯಾಪಾರಿಗಳಿಗೆ ಅಧಿಕ ಧನಲಾಭವಾಗುವುದು. ಕಾರ್ಯ ನಿಮಿತ್ತ ದೂರ ಪ್ರಯಾಣಗಳು ಸಂಭವಿಸಬಹುದು. ಆದರೆ ರಾತ್ರಿ ಪ್ರಯಾಣ ನಿಷಿದ್ಧ. ವಸ್ತ್ರಾಭರಣ, ಸ್ತ್ರೀ ಸುಖಗಳೂ ಉಂಟು. ಪಿತ್ತ ಜ್ವರ ಅನಾರೋಗ್ಯ ಕಾಡಬಹುದು.
ಶ್ರೀದೇವೀ ಸ್ತುತಿ. ಶುಭ ಸಂಖ್ಯೆ-8.

ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)

ಜನ್ಮ ಶನಿಯಿಂದ ಬಿಡುಗಡೆ ದೊರೆತಿದೆ. ಜೀವನದಲ್ಲಿ ಸಫಲತೆ ಹೊಂದಲು ಸಮಯ ಪಾಲನೆ ಜೊತೆಗೆ ನಿಮ್ಮ ಆಲೋಚನೆಯನ್ನು ಬದಲಾಯಿಸಿಕೊಳ್ಳಿ. ಅಪರಿಚಿತರೊಡನೆ ಆನ್‌ಲೈನ್ ವ್ಯವಹಾರದಿಂದ ನಷ್ಟವನ್ನು ಅನುಭವಿಸುವಿರಿ. ಗೃಹ ಸೌಕರ್ಯ ವಸ್ತುಗಳಿಗೆ ಹೆಚ್ಚಿನ ಹಣ ವ್ಯಯವಾಗುವುದು. ನಿಮ್ಮ ಆರೋಗ್ಯದ ಬಗ್ಗೆ ಗಮನವಿರಲಿ, ವಾಹನ ಚಲಿಸುವಾಗ ಅತೀ ವೇಗ ಒಳ್ಳೆಯದಲ್ಲ.
ಶ್ರೀ ನಂಜುಂಡೇಶ್ವರ ದರ್ಶನ. ಶುಭ ಸಂಖ್ಯೆ-2

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಹಣಕಾಸಿನ ಪರಿಸ್ಥಿತಿ ಯಥಾಸ್ಥಿತಿಯಾಗಿ ಮುಂದುವರೆದರೂ ನಿಮ್ಮ ಆಸೆ ಆಕಾಂಕ್ಷೆಗಳು ಈಡೇರುವುದು. ಸೃಜನಶೀಲ ಕೆಲಸದಲ್ಲಿ ತೊಡಗಿರುವವರಿಗೆ ಗೌರವ, ಪ್ರಶಸ್ತಿಗಳು ದೊರೆಯಲಿದೆ. ವಾರ ಮಧ್ಯೆ ಶುಭ ಚಂದ್ರನಿಂದ ಉತ್ತಮ ಭೋಜನ, ಶಯನ ಸುಖಗಳನ್ನು ಅನುಭವಿಸುವಿರಿ. ಶನಿದೇವ ಸಪ್ತಮಕ್ಕೆ ಬಂದ ಕಾರಣ ಸಹಯೋಗಿಗಳ ಜೊತೆ ಭಿನ್ನಾಭಿಪ್ರಾಯಗಳು ಉದ್ಭವಿಸುವುದು. ಮಾತೃಶ್ರೀಯವರ ಆರೋಗ್ಯದ ಕಡೆ ಗಮನ ನೀಡಿ.
ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-1.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದ ಆರಂಭಕ್ಕೆ ಐಹಿಕ ಸುಖ ಭೋಗಗಳನ್ನು ಅನುಭವಿಸುವಿರಿ. ನೂತನ ವಾಹನ ಹೊಂದುವ ಕನಸು ನನಸಾಗಬಹುದು. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಬರೆದಿದ್ದರೆ ಶುಭ ವಾರ್ತೆಯ ಆಶಯ ಹೊಂದಬಹುದು. ವಾರಮಧ್ಯೆ ಶ್ರೀಮತಿಯಲ್ಲಿ ಅನುರಾಗ ದೇಹ ಸುಖಗಳು ದೊರೆಯಲಿದೆ. ಸಮುದ್ರ ಜನ್ಯ ವಸ್ತು ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ನಿಮ್ಮ ರಾಶಿಯಲ್ಲಿ ಶನಿ ಪ್ರವೇಶವಾಗಿದ್ದು, ಆತುರದ ಡ್ರೈವಿಂಗ್ ನಿಷಿದ್ಧ.
ಶ್ರೀ ಶನಿಚಾಲೀಸ ಪಠಿಸಿ. ಶುಭ ಸಂಖ್ಯೆ-4.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಬೃಹಸ್ಪತಿಯ ಕೃಪೆ ಇದೆ. ನೀವು ದೀರ್ಘಕಾಲದಿಂದ ತೊಡಗಿಕೊಂಡಿರುವ ಒಂದು ಪ್ರಮುಖ ಪ್ರಾಜೆಕ್ಟ್ ತಡವಾಗಿಯಾದರೂ ಲಾಭ ತರಲಿದೆ. ಮನೆಯಲ್ಲಿ ಮದುವೆ ವಯಸ್ಸಿನವರು ಇದ್ದರೆ ವಧು-ವರಾನ್ವೇಷಣೆ ಸಫಲವಾಗುವುದು. ಶಿಕ್ಷಣವೇತ್ತರಿಗೆ ಸರ್ಕಾರದಿಂದ ಗೌರವ, ಪ್ರಶಸ್ತಿಗಳು ದೊರೆಯುವುದು. ಶುಭ ಭಾವಕ್ಕೆ ಶನಿ ಚಲಿಸಿದ್ದು ಶತ್ರುಗಳ ಆಟ ಸಾಗದು. ವಾರದ ಕಡೆಗೆ ಧರ್ಮಕ್ಷೇತ್ರ ಸಂದರ್ಶನ.
ಶ್ರೀ ಗುರುಮಂತ್ರ ಜಪಿಸಿ. ಶುಭ ಸಂಖ್ಯೆ-7


ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವ್ಯಯ ಸ್ಥಾನಕ್ಕೆ ಶನಿಸ್ವಾಮಿಯ ಪ್ರವೇಶವಾಗಿದೆ. ಹೊಸ ಹಣಕಾಸಿನ ಹೂಡಿಕೆಗಳನ್ನು ತೀವ್ರ ಎಚ್ಚರಿಕೆಯಿಂದ ಮಾಡಬೇಕಾದೀತು. ಹೆಚ್ಚಿನ ರೀತಿಯಲ್ಲಿ ಧನಾದಾಯವಾದರೂ ಅನಗತ್ಯ ಖರ್ಚುಗಳು ಎದುರಾಗಿ ಜೇಬು ಮಾತ್ರ ಖಾಲಿ. ರಾಜಕೀಯ ಮಹತ್ವಾಕಾಂಕ್ಷಿಗಳಿಗೆ ತಿಳಿದವರಿಂದಲೇ ಅಡಚಣೆಗಳು ಉಂಟಾಗುತ್ತದೆ. ದುಷ್ಟ ಜನರು ನಿಮ್ಮನ್ನು ತಪ್ಪು ದಾರಿಯಲ್ಲಿ ನಡೆಸುವ ಸಾಧ್ಯತೆ ಇದೆ.
ಶ್ರೀ ದತ್ತಗುರು ಪ್ರಾರ್ಥನೆ. ಶುಭ ಸಂಖ್ಯೆ-2.

ಮಕ್ಕಳ ಚಿತ್ರಕಥೆ

'ವಿದೇಶಿ ವ್ಯಕ್ತಿ, ವೀರ ಸನ್ಯಾಸಿಯನ್ನು ಅಣಕಿಸಲೆತ್ನಿಸಿದಾಗ...!'

-ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ಮೈಸೂರು ಮಿತ್ರ ಭಾನುವಾರ 5 ಫೆಬ್ರವರಿ 2023

ಮುಡುಕುತೊರೆ ಬಾಬೂಜಿ ಭವನಕ್ಕೆ 10 ಲಕ್ಷ ಅನುದಾನ ಬಿಡುಗಡೆ

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಘೋಷಣೆ

ತಿ.ನರಸೀಪುರ, ಫೆ.4– ಮುಡುಕುತೊರೆಯ ಡಾ.ಬಾಬು ಜಗಜೀವನರಾಂ ಸಮುದಾಯ ಭವನಕ್ಕೆ ತಮ್ಮ ಅನುದಾನದಲ್ಲಿ 10 ಲಕ್ಷ ರೂ. ನೀಡಲಾಗುವುದು ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಘೋಷಿಸಿದರು.

ತಾಲೂಕಿನ ಮುಡುಕುತೊರೆ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ತಪ್ಪಲಿನಲ್ಲಿ ನಿರ್ಮಾಣ ಹಂತದಲ್ಲಿರುವ ಸಮುದಾಯ ಭವನದಲ್ಲಿ ಶನಿವಾರ ನಡೆದ ಆದಿ ಜಾಂಬವ ಸಮುದಾಯದ ಮುಖಂಡರು ಹಾಗೂ ಯಜಮಾನರ ಸಭೆಯಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಗ್ರಾಮದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಬಾಬೂಜಿಯವರ ಸಮುದಾಯ ಭವನಕ್ಕೆ ಈ ಹಿಂದೆ ಚಾಲನೆ ನೀಡಲಾಗಿತ್ತಾದರೂ, ಕಾರಣಾಂತರಗಳಿಂದ ಕಾಮಗಾರಿ ಸ್ಥಗಿತಗೊಂಡಿತ್ತು. ಇದೀಗ ಕಾಮಗಾರಿಯನ್ನು ತ್ವರಿತವಾಗಿ ಮುಗಿಸಲು ವಿಧಾನಪರಿಷತ್ ಸದಸ್ಯರ ಅನುದಾನದಲ್ಲಿ 10 ಲಕ್ಷ ರೂ. ಅನುದಾನ ಬಿಡುಗಡೆ ಮಾಡಿದ್ದು ಸೋಮವಾರ ಜಿಲ್ಲಾಧಿಕಾರಿಗಳಿಂದ ಅನುದಾನದ ಅಧಿಕೃತ ಪ್ರಕಟಣೆ ಹೊರಬೀಳಲಿದೆ ಎಂದರು.

ಮೈಸೂರು, ಚಾಮರಾಜನಗರ ಜಿಲ್ಲೆಯ ಸಮುದಾಯದ ಭಕ್ತರು ದೇವರ ದರ್ಶನ ಪಡೆಯಲು ಸಮುದಾಯ ಭವನದಲ್ಲಿ ಅನುಕೂಲ ಕಲ್ಪಿಸಲಾಗುತ್ತದೆ. ಅಲ್ಲದೇ ಸಮುದಾಯದ ಆರೋಗ್ಯಕರ ಚರ್ಚೆ ನಡೆಸುವ ದೃಷ್ಟಿಯಿಂದ ಅನುದಾನ ನೀಡಿದ್ದೇನೆ ಎಂದರು.



ಮಾಜಿ ಸಿಎಂ ಸಿದ್ದರಾಮಯ್ಯ ನೀಡಿದ್ದ ಅನ್ನಭಾಗ್ಯ, ವಸತಿ ಭಾಗ್ಯ, ಕ್ಷೀರ ಭಾಗ್ಯ ಸೇರಿದಂತೆ ಇನ್ನಿತರ ಯೋಜನೆಗಳನ್ನು ನೀಡಲು ಬಿಜೆಪಿ ಸರ್ಕಾರ ವಿಫಲವಾಗಿದೆ. ಜಾರಿಗೆ ತರಲಾಗಿದ್ದ ಅನೇಕ ಯೋಜನೆಗಳನ್ನು ಸರ್ಕಾರ ಕಡಿತಗೊಳಿಸಿ ಬಡವರನ್ನು ಸಂಕಷ್ಟಕ್ಕೆ ದೂಡಿದೆ ಎಂದು ಆರೋಪಿಸಿದರು.

ಹರಿಜನ ಸಮುದಾಯಕ್ಕೆ ಸಿದ್ದರಾಮಯ್ಯ ಸರ್ಕಾರ ಶೇ.25 ರಷ್ಟು ಅನುದಾನ ನೀಡಿತ್ತು. ಆದರೆ ನಂತರ ಬಂದ ಬಿಜೆಪಿ ಸರ್ಕಾರ ಪರಿಶಿಷ್ಟ ಜಾತಿಗೆ ನೀಡುವ ಅನುದಾನ ಇತರೆಡೆಗೆ ಬಳಸಿಕೊಳ್ಳುವ ಮೂಲಕ ಅನುದಾನ ದುರ್ಬಳಕೆ ಮಾಡಿಕೊಳ್ಳುತ್ತಿದೆ. ಹಾಗಾಗಿ ಸಮುದಾಯದವರು ಸಮಸ್ಯೆಗಳ ಪರಿಹಾರಕ್ಕೆ ಹೋರಾಟ ಮಾಡಬೇಕಿದೆ. ಸರ್ಕಾರದ ಮುಂದೆ ಸಮಸ್ಯೆ ಇಟ್ಟು ಪರಿಹಾರಕ್ಕಾಗಿ ಒತ್ತಾಯಿಸಬೇಕಿದೆ ಎಂದು ಕರೆ ನೀಡಿದರು.

ಇದೇ ವೇಳೆ ಸಭೆಯಲ್ಲಿ ಸಮಾಜದ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ಪ.ಜಾತಿ ಮಕ್ಕಳಿಗೆ ಹಾಸ್ಟೆಲ್ ಪ್ರವೇಶ, ಸ್ಕಾಲರ್‌ಶಿಪ್, ಸರ್ಕಾರಿ ಸೌಲಭ್ಯಗಳ ಬಗ್ಗೆ ಚರ್ಚೆ ನಡೆಸಿದ ಮುಖಂಡರು ಕಾಂಗ್ರೆಸ್ ಸರ್ಕಾರವಿದ್ದ ಸಂದರ್ಭ ನೀಡುತ್ತಿದ್ದ ಸವಲತ್ತುಗಳನ್ನು ಬಿಜೆಪಿ ಸರ್ಕಾರ ಮೊಟಕುಗೊಳಿಸಿದೆ ಎಂದು ದೂರಿದರು.

ಸಭೆಯಲ್ಲಿ ಡಿಸಿಸಿ ವಕ್ತಾರ ಹುಣಸೂರು ಬಸವಣ್ಣ, ತಾಪಂ ಮಾಜಿ ಅಧ್ಯಕ್ಷ ಕೆಬ್ಬೆ ಶಿವಸ್ವಾಮಿ, ಮಾಜಿ ಸದಸ್ಯ ವ್ಯಾಸರಾಜಪುರ ರಂಗಪ್ಪ, ಹೆಚ್ .ನಾಗರಾಜು, ರಂಗಸ್ವಾಮಿ, ವಿಜಾಪುರ ಗ್ರಾಪಂ ಸದಸ್ಯ ಶಿವಶಂಕರ್, ತಲಕಾಡು ಮಹದೇವು, ನರೀಪುರ ರಾಚಯ್ಯ, ಬಿ.ಜಿ.ಪುರ ಚಂದ್ರು, ಸಿದ್ದರಾಜು, ಚಿಕ್ಕನಿಂಗಯ್ಯ, ಕಾಳಯ್ಯ, ದೇಮಳ್ಳಿ ಗುರುಸಿದ್ದಯ್ಯ, ಕುಮಾರ್ ಮತ್ತಿತರರಿದ್ದರು.

> ಬಿಜೆಪಿ ಸರ್ಕಾರ ಹಿಂದಿನ ಸರ್ಕಾರದ ಎಲ್ಲಾ ಯೋಜನೆಗಳನ್ನು ಕಡಿತಗೊಳಿಸಿದ್ದು, ಸಾರ್ವಜನಿಕರಿಗೆ ಈಗಷ್ಟೇ ಬಿಜೆಪಿ ಸರ್ಕಾರದ ಧೋರಣೆ ಅರ್ಥವಾದಂತಿದೆ. ಬಡವರು, ದೀನ ದಲಿತರು, ಅಸಂಘಟಿತ ಸಮಾಜಕ್ಕೆ ದೊರಕುತ್ತಿದ್ದ ಸೌಲಭ್ಯಗಳು ಕಡಿತಗೊಂಡಿದ್ದು, ಈ ಸರ್ಕಾರಕ್ಕೆ ಹಿಂದುಳಿದ ಸಮುದಾಯದ ಅಭಿವೃದ್ಧಿ ಬೇಡವಾಗಿದೆ. ಹಾಗಾಗಿ ಸಮುದಾಯದ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನ ಇತರೆಡೆಗೆ ಬಳಸಿಕೊಳ್ಳುತ್ತಿದೆ.
>
> - ಡಾ.ಡಿ.ತಿಮ್ಮಯ್ಯ, ವಿಧಾನ ಪರಿಷತ್ ಸದಸ್ಯ.

ಕರಾಟೆ ವ್ಯಕ್ತಿಯ ಶಿಸ್ತುಬದ್ಧ ಜೀವನಕ್ಕೆ ಸಹಕಾರಿ

ರಾಷ್ಟ್ರಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ಡಿವೈಎಸ್ಪಿ ಗೋವಿಂದರಾಜು



ನಂಜನಗೂಡು, ಫೆ.4– ಕರಾಟೆ ವ್ಯಕ್ತಿಯ ಆತ್ಮರಕ್ಷಣೆ ಜೊತೆಗೆ ಶಿಸ್ತುಬದ್ಧ ಜೀವನಕ್ಕೆ ಸಹಕಾರಿ ಎಂದು ಡಿವೈಎಸ್ಪಿ ಗೋವಿಂದರಾಜು ತಿಳಿಸಿದರು.

ನಗರದ ಶ್ರವಣ ಕಲ್ಯಾಣ ಮಂಟಪದಲ್ಲಿ ಒಕಿನೋವಾ ಕರಾಟೆ ಶೂರಿನ್‌ಕೈ ಅವರು ಆಯೋಜಿಸಿದ್ದ 2 ದಿನಗಳ ರಾಷ್ಟ್ರಮಟ್ಟದ ಕರಾಟೆ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದ ಅವರು, ಕರಾಟೆ ಮಕ್ಕಳಲ್ಲಿ ನೈಪುಣ್ಯತೆ, ಏಕಾಗ್ರತೆ ಹೆಚ್ಚಿಸಲು ನೆರವಾಗುವುದಲ್ಲದೇ, ಮೊಬೈಲ್ ಮತ್ತು ಟಿವಿಯಿಂದ ದೂರವಿಡಲು ಸಹಕಾರಿಯಾಗುತ್ತದೆ. ಹೆಣ್ಣು ಮಕ್ಕಳು ಆತ್ಮರಕ್ಷಣೆಗಾಗಿ ಕರಾಟೆ ಕಲಿಯುವುದು ಒಳ್ಳೆಯದು. ಇಂತಹ ಪಂದ್ಯಾವಳಿಯಲ್ಲಿ ಮಕ್ಕಳು ಭಾಗವಹಿಸುವುದರಿಂದ ಚಿಂತನಾ ಶಕ್ತಿ ವೃದ್ಧಿಸುವ ಜೊತೆಗೆ ಮಾನಸಿಕ ಆರೋಗ್ಯ ಉತ್ತಮಗೊಳ್ಳುತ್ತದೆ. ಈ ಪಂದ್ಯಾವಳಿಯಲ್ಲಿ ಭಾಗವಹಿಸಿರುವ ಎಲ್ಲರೂ ಉತ್ತಮ ಪ್ರದರ್ಶನ ನೀಡಿ ಸಾಧನೆಗೆ ಮುಂದಾಗಿ ಎಂದು ಶುಭ ಹಾರೈಸಿದರು.

ಕರಾಟೆ ಪಂದ್ಯಾವಳಿ ಆಯೋಜಕ ಭರತೇಶ್ ಮಾತನಾಡಿ, ಕರಾಟೆ ಪಂದ್ಯಾವಳಿಯಲ್ಲಿ 5 ರಿಂದ 20 ವರ್ಷವರೆಗಿನ ಸ್ಪರ್ಧಿಗಳಿಗೆ ಅವಕಾಶ ಕಲ್ಪಿಸಲಾಗಿದೆ. 5 ವರ್ಷದ ಮಕ್ಕಳು ಪಂದ್ಯಾವಳಿಯಲ್ಲಿ ಭಾಗಿಯಾಗಿರುವುದು ಸಂತಸದ ವಿಷಯ. ಕೇರಳ, ತಮಿಳುನಾಡು, ಆಂಧ್ರ ಪ್ರದೇಶದಿಂದಲೂ ಸ್ಪರ್ಧಿಗಳು ಬಂದಿದ್ದಾರೆ. ಬೆಂಗಳೂರು, ಮಡಿಕೇರಿ, ಹಾಸನ, ಚಾಮರಾಜನಗರ, ಮೈಸೂರು ಜಿಲ್ಲೆಗಳಿಂದ 700 ಜನ ಸ್ಪರ್ಧಿಗಳು ಈ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದು ಶನಿವಾರ ಮತ್ತು ಭಾನುವಾರ ಪಂದ್ಯಾವಳಿ ನಡೆಯಲಿದೆ ಎಂದರು.

ಈ ವೇಳೆ ಸುನೀಲ್ ಕುಮಾರ್, ಸಬಾಸ್ಟಿನ್, ಸುದರ್ಶನ್ ದೇವಿಪ್ರಸಾದ್, ಅಂಬರೀಶ್, ರಾಜೇಂದ್ರ, ಬಸವರಾಜು, ಗಿರೀಶ್ ಬಾಬು, ಇನ್ನರ್‌ವ್ಹೀಲ್ ಸಂಸ್ಥೆ ಅಧ್ಯಕ್ಷೆ ಆಶಾ ಇದ್ದರು.

ಸರಗೂರು ಪಪಂಗೆ ಉಮಾ ಸ್ಥಾಯಿ ಸಮಿತಿ ಅಧ್ಯಕ್ಷೆ



ಸರಗೂರು, ಫೆ.4– ಪಟ್ಟಣದ ಪಟ್ಟಣ ಪಂಚಾಯಿತಿ ಸ್ಥಾಯಿ ಸಮಿತಿ ಅಧ್ಯಕ್ಷೆಯಾಗಿ ಉಮಾ ಆಯ್ಕೆಯಾಗಿದ್ದಾರೆ.

ಶನಿವಾರ ಸಂಜೆ ಪಟ್ಟಣ ಪಂಚಾಯಿತಿಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಎಸ್.ಎಲ್.ರಾಜಣ್ಣ, ಉಮಾ, ಶಿವಕುಮಾರ್ ನಾಮಪತ್ರ ಸಲ್ಲಿಸಿದ್ದರು. ಈ ಪೈಕಿ ಶಿವಕುಮಾರ್ ಉಮಾ ಅವರಿಗೆ ಬೆಂಬಲ ಸೂಚಿಸಿದರು. ಅಲ್ಲದೇ ಒಂದಿಬ್ಬರು ಸದಸ್ಯರನ್ನು ಹೊರತುಪಡಿಸಿ, ಎಲ್ಲಾ ಸದಸ್ಯರು ಉಮಾ ಅವರಿಗೆ ಬೆಂಬಲ ಸೂಚಿಸಿದ್ದರಿಂದ ಪಪಂ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಉಮಾ ಆಯ್ಕೆಗೊಂಡರು. ಪಪಂ ಮುಖ್ಯಾಧಿಕಾರಿ ಕೆ.ಪಿ.ವಸಂತಕುಮಾರಿ ಚುನಾವಣೆ ಪ್ರಕ್ರಿಯೆ ನಡೆಸಿಕೊಟ್ಟರು.

4ನೇ ವಾರ್ಡ್ ಸದಸ್ಯ ಎಸ್.ಎಲ್. ರಾಜಣ್ಣ ಮಾತನಾಡಿ, ಸಂಸದರು, ಶಾಸಕರ ಗೈರು ಹಾಜರಿಯಲ್ಲಿ ನಡೆದ ಸ್ಥಾಯಿ ಸಮಿತಿ ಅಧ್ಯಕ್ಷೆ ಆಯ್ಕೆ ಅಸಿಂಧುವಾಗಿದೆ. ಮುಂದೆ ನ್ಯಾಯಯುತವಾಗಿ ಹೋರಾಟ ಮಾಡಲಾಗುವುದು ಎಂದರು.

ಈ ವೇಳೆ ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ವಿನಯ್, ಸದಸ್ಯರಾದ ಎಸ್.ಎಲ್.ರಾಜಣ್ಣ, ಹೇಮಾವತಿ, ಚೈತ್ರ, ಸಣ್ಣತಾಯಮ್ಮ, ನೂರಾಳಸ್ವಾಮಿ, ಶಿವಕುಮಾರ್, ದಿವ್ಯಾ, ಶ್ರೀನಿವಾಸ್, ಚಲುವಕೃಷ್ಣ, ನಾಮ ನಿರ್ದೇಶಿತ ಸದಸ್ಯರಾದ ಎಸ್.ನಾರಾಯಣ್, ಎಸ್.ಎಸ್. ಪ್ರತಾಪ್, ರಂಗಸ್ವಾಮಿ ಹಾಜರಿದ್ದರು.

ಸಂಭ್ರಮಾಚರಣೆ: ಸ್ಥಾಯಿ ಸಮಿತಿ ಅಧ್ಯಕ್ಷೆಯಾಗಿ ಉಮಾ ಆಯ್ಕೆಯಾಗುತ್ತಿದ್ದಂತೆ ಪಪಂ ಆವರಣದಲ್ಲಿ ಜಮಾಯಿಸಿದ್ದ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಬಿಜೆಪಿ ಟೌನ್ ಅಧ್ಯಕ್ಷ ನಾಗರಾಜರಾಮ್, ಭಜರಂಗದಳ ರಾಮು, ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಸುನಂದರಾಜು, ಎಂ.ರವಿಕುಮಾರ್, ಸಿದ್ದಪ್ಪಾಜಿ, ಶ್ರೀರಾಮಲು, ಅಭಿ, ಶ್ಯಾಮ್ ಶಿವಾಜಿ, ರಾಜೇಶ್, ಅನಿಲ್, ಪೈಂಟ್ ನಾಗರಾಜು, ಶ್ರೀಕಂಠ ಸೇರಿದಂತೆ ಇನ್ನಿತರರಿದ್ದರು.



ಮೈಸೂರು ತಾಲೂಕಿನ ಕಡಕೊಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬ ನಡೆಯಿತು. ಈ ವೇಳೆ ದಿ ಯೂನಿಯನ್ ರೈತ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಕುಮಾರಸ್ವಾಮಿ, ಮಾಜಿ ತಾಪಂ ಸದಸ್ಯ ಶ್ರೀಕಂಠೇಗೌಡ, ಎಸ್‌ಡಿಎಂಸಿ ಅಧ್ಯಕ್ಷ ರವಿಕುಮಾರ್, ಮುಖ್ಯೋಪಾಧ್ಯಾಯರಾದ ದುಂಡಯ್ಯ, ಶಿವಮ್ಮ ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳು, ಸಾರ್ವಜನಿಕರು, ವಿದ್ಯಾರ್ಥಿಗಳು ಹಾಜರಿದ್ದರು.

ನಾಳೆಯಿಂದ ಕೈಮಗ್ಗದ ಸೀರೆಗಳ ಪ್ರದರ್ಶನ, ಮಾರಾಟ

ಮೈಸೂರು, ಫೆ 4– ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನ ಬೋರ್ಡ್ ರೂಂನಲ್ಲಿ ಫೆ. 6 ಮತ್ತು 7 ರಂದು ಎರಡು ದಿನಗಳ ಕಾಲ ಕೈಮಗ್ಗದ ಸೀರೆಗಳ ಪ್ರದರ್ಶನ ಮತ್ತು ಮಾರಾಟ ಏರ್ಪಡಿಸಲಾಗಿದೆ. ಪ್ರದರ್ಶನವು ಬೆಳಗ್ಗೆ 10ರಿಂದ ಸಂಜೆ 8ರವರೆಗೆ ಸಾರ್ವಜನಿಕರಿಗೆ ಮುಕ್ತವಾಗಿರುತ್ತದೆ.

ಪ್ರದರ್ಶನದಲ್ಲಿ ಕಾಂಚೀಪುರಂ, ಬನಾರಸಿ, ಪೈಥಾನಿ, ಆರ್ಗಾಂಝಾ, ಪಟೋಲ, ಜಮ್‌ದಾನಿ, ಕೋಟ ಮತ್ತಿತರೆ ಕೈಮಗ್ಗದ ನೇಯ್ಗೆಗಳು ಕಂಕಟಾಲ ಕುಟುಂಬವು ಮೈಸೂರಿನ ಸೀರೆ ಪ್ರಿಯರಿಗೆಂದೇ ಭಾರತದ 50 ನೇಯ್ಗೆಯ ಕ್ಲಸ್ಟರ್‌ಗಳಿಂದ ಆಯ್ಕೆ ಮಾಡಲಾದ ಸೀರೆಗಳು ಮಾರಾಟಕ್ಕಿವೆ. ನಗರದ ವಿವಿಧ ಭಾಗಗಳ ಸೀರೆ ಪ್ರಿಯರ ಅಗತ್ಯಗಳಿಗೆ ಪೂರೈಸಲಿದೆ ಎಂದು ವ್ಯವಸ್ಥಾಪಕ ನಿರ್ದೇಶಕರಾದ ಮಲ್ಲಿಕಾರ್ಜುನರಾವ್ ಕಂಕಟಾಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಪಠಾಣ್ (ಹಿಂ): ಬೆ.10.15ಕ್ಕೆ, ಸಂ.4.15ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ, ಕ್ರಾಂತಿ (ಕ): ಮ.1.05ಕ್ಕೆ.
ಸ್ಕ್ರೀನ್ 2	ಪಠಾಣ್ (ಹಿಂ): ಬೆ.10.50ಕ್ಕೆ, ತನುಜ (ಕ): ಮ.1.45ಕ್ಕೆ, ಪ್ರಮಸದೇಶಮ್ (ತೆ): ಸಂ.4.10ಕ್ಕೆ, ದಿ ವುಮನ್ ಕಿಂಗ್ (ಇಂ): ರಾ.7.15ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ನಟಭಯಂಕರ (ಕ): ಬೆ.10.50ಕ್ಕೆ, ಮೈಕೆಲ್ (ತ): ಮ.1.20ಕ್ಕೆ, ರಾ.7ಕ್ಕೆ, ರನ್ ಬೇಬಿ ರನ್ (ತ): ಸಂ.4.20ಕ್ಕೆ, ರೈಟರ್ ಪದ್ಮಭೂಷಣ್ (ತೆ): ರಾ.10ಕ್ಕೆ.
ಸ್ಕ್ರೀನ್ 4	ಕ್ರಾಂತಿ (ಕ): ಬೆ.10ಕ್ಕೆ, ಸಂ.4.05ಕ್ಕೆ, ರಾ.7.15ಕ್ಕೆ, ರಾ.10.25ಕ್ಕೆ, ಪಠಾಣ್ (ಹಿಂ): ಮ.1.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಪಠಾಣ್ (ಹಿಂ): ಬೆ.9.50ಕ್ಕೆ, ಸಂ.4ಕ್ಕೆ, ಕ್ರಾಂತಿ (ಕ): ಮ.12.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಕ್ರಾಂತಿ (ಕ): ಬೆ.10ಕ್ಕೆ, ಸಂ.4.10ಕ್ಕೆ, ಪಠಾಣ್ (ಹಿಂ): ಮ.1.10ಕ್ಕೆ, ರಾ.7.30ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ದಿ ವುಮನ್ ಕಿಂಗ್ (ಇಂ): ಬೆ.9.40ಕ್ಕೆ, ಪಠಾಣ್ (ಹಿಂ): ಮ.12.30ಕ್ಕೆ, ಮ.3.30ಕ್ಕೆ, ಸಂ.6.30ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಪಠಾಣ್ (ಹಿಂ): ಬೆ.10.20ಕ್ಕೆ, ಕ್ರಾಂತಿ (ಕ): ಮ.1.10ಕ್ಕೆ, ರೈಟರ್ ಪದ್ಮಭೂಷಣ್ (ತೆ): ಸಂ.4.30ಕ್ಕೆ, ದಿ ವುಮನ್ ಕಿಂಗ್ (ಇಂ): ರಾ.7.20ಕ್ಕೆ, ಮೈಕೆಲ್ (ತ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕ್ರಾಂತಿ (ಕ): ಬೆ.7.30ಕ್ಕೆ, ಮ.1.45ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕ್ರಾಂತಿ (ಕ): ಬೆ.6.45ಕ್ಕೆ, ಬೆ.9.55ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ
ಸ್ಕ್ರೀನ್ 3	ಕ್ರಾಂತಿ (ಕ): ಬೆ.7ಕ್ಕೆ, ಬೆ.10.05ಕ್ಕೆ, ಮ.1.10ಕ್ಕೆ, ಸಂ.4.15ಕ್ಕೆ, ರಾ.10.15ಕ್ಕೆ, ಪಠಾಣ್ (ಹಿಂ): ರಾ.7.20ಕ್ಕೆ.
ಸ್ಕ್ರೀನ್ 4	ಕ್ರಾಂತಿ (ಕ): ಬೆ.7.10ಕ್ಕೆ, ಸಂ.6.50ಕ್ಕೆ, ಪಠಾಣ್ (ಹಿಂ): ಬೆ.10.15ಕ್ಕೆ, ಮ.1.15ಕ್ಕೆ,


ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ವೇದ (ಕ): ಬೆ.11.25ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ, ಒನ್ಸ್ ಅಪಾನ್ ಟೈಂ ಇನ್ ಜಮಾಲಿಗುಡ್ಡ (ಕ): ಬೆ.10.30ಕ್ಕೆ, ಮ.12.50ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಕಾಂತಾರ (ಕ): ಮ.1.20ಕ್ಕೆ, ನಾನು ಅದು ಮತ್ತು ಸರೋಜ (ಕ): ರಾ.7.25ಕ್ಕೆ, ಪದವಿ ಪೂರ್ವ (ಕ): ಸಂ.4.30ಕ್ಕೆ, ಮೇಡ್ ಇನ್ ಬೆಂಗಳೂರು (ಕ): ಸಂ.6.25ಕ್ಕೆ, ಸರ್ಕಸ್ (ಹಿಂ): ಮ.12ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.9.45ಕ್ಕೆ, ಬೆ.10.45ಕ್ಕೆ, ಮ.1.40ಕ್ಕೆ, ಮ.2.40ಕ್ಕೆ, ಸಂ.5.35ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (ಇಂ): ಮ.2.45ಕ್ಕೆ, ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಕ್ರಾಂತಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವೇದ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪಟಾಣ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕ್ರಾಂತಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪಟಾಣ್ (ಹಿ)	4 ಪ್ರದರ್ಶನಗಳು
ರಾಜ್‌ಕಮಲ್	
ಮೈಕೇಲ್ (ತ)	4 ಪ್ರದರ್ಶನಗಳು
ಸಂಗಂ	
ನಟಭಯಂಕರ (ಕ)	4 ಪ್ರದರ್ಶನಗಳು
ಲಿಡೋ	
ಕ್ರಾಂತಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ತನುಜ (ಕ)	2 ಪ್ರದರ್ಶನಗಳು
ವಾಲ್ಟೇರ್ ವೀರಯ್ಯ (ತೆ)	2 ಪ್ರದರ್ಶನಗಳು
ಪ್ರಭಾ	
ಪಠಾಣ್ (ಹಿಂ)	4 ಪ್ರದರ್ಶನಗಳು

ಈಶ್ವರಗೌಡನಹಳ್ಳಿ ಡೈರಿ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ತಿ.ನರಸೀಪುರ, ಫೆ.4– ವರುಣಾ ವಿಧಾನಸಭಾ ಕ್ಷೇತ್ರದ ಈಶ್ವರಗೌಡನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಶ್ರೀಕಂಠ ಹಾಗೂ ಉಪಾಧ್ಯಕ್ಷರಾಗಿ ಎಸ್.ರಾಜು ಅವಿರೋಧವಾಗಿ ಆಯ್ಕೆಗೊಂಡರು.

ಸಂಘದ ಆವರಣದಲ್ಲಿ ಶನಿವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಶ್ರೀಕಂಠ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಎಸ್.ರಾಜು ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಹಕಾರ ಇಲಾಖೆ ಹಮೀದಾ ಪ್ರಕಟಿಸಿದರು.

ಸಂಘದ ನಿರ್ದೇಶಕರಾದ ಪಿ.ಶಿವಣ್ಣ, ನಂಜೇಗೌಡ, ಎಂ.ಪ್ರತಾಪ್, ಬಸಪ್ಪ, ಸಿದ್ದರಾಜು, ಚಿಕ್ಕಮ್ಮ, ಗೌರಮ್ಮ, ರತ್ನಮ್ಮ ಚುನಾವಣೆಯಲ್ಲಿ ಭಾಗವಹಿಸಿ ನೂತನ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆಗೆ ಸಮ್ಮತಿ ಸೂಚಿಸಿದರು.

ನೂತನ ಅಧ್ಯಕ್ಷ ಶ್ರೀಕಂಠ ಮಾತನಾಡಿ, ಸಹಕಾರ ಸಂಘಕ್ಕೆ ಸ್ವಂತ ಕಟ್ಟಡ ಕಟ್ಟಲು ಬೇಕಾದ ಅನುದಾನ ತರಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ. ಮೈಮುಲ್‌ನಿಂದ ಸಂಘಕ್ಕೆ ಬರಬೇಕಾದ ಸೌಲಭ್ಯಗಳನ್ನು ತಂದು ಸಂಘವನ್ನು ಮತ್ತಷ್ಟು ಅಭಿವೃದ್ಧಿ ಪಡಿಸುತ್ತೇನೆ. ಈ ಕಾರ್ಯಕ್ಕೆ ಎಲ್ಲಾ ಸದಸ್ಯರ ಸಹಕಾರ ಬಯಸುತ್ತೇನೆ ಎಂದರು.

ಈ ವೇಳೆ ಗ್ರಾಪಂ ಸದಸ್ಯ ಕೃಷ್ಣ, ಮಾಜಿ ಸದಸ್ಯ ಶಿವಣ್ಣ, ಮನ್ನೇಹುಂಡಿ ಡೈರಿ ಅಧ್ಯಕ್ಷ ಶೇಖರ್, ಮಲ್ಲುಸ್ವಾಮಿ, ಚಿನ್ನಸ್ವಾಮಿ, ಮಹೇಶ್, ಶಿವರಾಜು, ಕರಿಸ್ವಾಮಿ, ಮಂಜುಸ್ವಾಮಿ, ಪುಟ್ಟಸ್ವಾಮಿಗೌಡ, ಮಹದೇವು, ಷಣ್ಮುಖ, ವರುಣ್ ಕುಮಾರ್, ಮರಿಗೌಡಸ್ವಾಮಿ, ದೊರೆಸ್ವಾಮಿಗೌಡ, ಸಂಘದ ಕಾರ್ಯದರ್ಶಿ ಪುನೀತ್ ಸೇರಿದಂತೆ ಮತ್ತಿತರರಿದ್ದರು.

ಚಿಕ್ಕವಡ್ಡರಗುಡಿಯಲ್ಲಿ ಶ್ರೀಬಸವೇಶ್ವರಸ್ವಾಮಿ ದೇವಸ್ಥಾನ ಉದ್ಘಾಟನೆ



ಭೇರ್ಯ, ಫೆ.4– ಮನುಷ್ಯನಿಗೆ ಹುಟ್ಟಿನಿಂದ ಎಲ್ಲವೂ ಬರುತ್ತದೆ. ಆದರೆ ಕೊನೆಗೆ ಖಾಯಂ ಆಗಿ ಉಳಿಯುವುದು ಸಾವು ಮಾತ್ರ. ಅದರಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅದನ್ನು ಅರ್ಥ ಮಾಡಿಕೊಂಡು ಜೀವನ ನಡೆಸಿದರೆ ಸಾರ್ಥಕತೆ ಕಾಣಬಹುದು ಎಂದು ಶ್ರೀಕ್ಷೇತ್ರ ಸುತ್ತೂರು ಶ್ರೀವೀರಸಿಂಹಾಸನ ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಕೆ.ಆರ್.ನಗರ ತಾಲೂಕಿನ ಚಿಕ್ಕವಡ್ಡರಗುಡಿ ಗ್ರಾಮದಲ್ಲಿ 75 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಬಸವೇಶ್ವರಸ್ವಾಮಿ ದೇವಸ್ಥಾನ ಉದ್ಘಾಟಿಸಿ ಅವರು ಮಾತನಾಡಿದರು.

ಜೀವನದಲ್ಲಿ ಸಾರ್ಥಕತೆ ಪಡೆಯಲು ಇನ್ನೊಬ್ಬರ ಹಿತ ಬಯಸಬೇಕೆ ಹೊರತು ಅವರನ್ನು ದ್ವೇಷದಿಂದ ಕಾಣುವುದು ಸರಿಯಲ್ಲ. ಆದರೆ ಜಗತ್ತಿನಲ್ಲಿ ಮನುಷ್ಯನ ವೈಯಕ್ತಿಕ ಪ್ರತಿಷ್ಠೆಗಾಗಿ ದೇಶಗಳೇ ಹೊತ್ತಿ ಉರಿಯುತ್ತಿವೆ ಎಂದು ವಿಷಾದ ವ್ಯಕ್ತಪಡಿಸಿದರು.

ಪವಿತ್ರ ಕ್ಷೇತ್ರಗಳ ದರ್ಶನ, ಪ್ರಾರ್ಥನೆ, ನಂಬಿಕೆಯಿಂದ ಮಾತ್ರ ಮನುಷ್ಯನ ಬದುಕು ಹಸನಾಗಲು ಸಾಧ್ಯ. ಮನುಷ್ಯ ಶ್ರಮಪಟ್ಟು ದುಡಿದರೆ ಇದ್ದಲ್ಲಿಯೇ ಕೈಲಾಸ ಕಾಣಬಲ್ಲ. ಗ್ರಾಮೀಣ ಪ್ರದೇಶದಲ್ಲಿ ಸಿಗುವ ಬದುಕು ನಿರ್ಮಲ ಮನಸ್ಥಿತಿಯ ಪ್ರಗತಿಗೆ ಸದಾ ಕಾಲ ಸದ್ಭಾವನೆ ಕೊಡುವಂತೆ ಭಗವಂತನಲ್ಲಿ ಪ್ರಾರ್ಥಿಸಿ ಮುನ್ನಡೆಯಿರಿ ಎಂದರು.

ಶಾಸಕ ಸಾ.ರಾ.ಮಹೇಶ್ ಮಾತನಾಡಿ, ಗ್ರಾಮದಲ್ಲಿ ಉತ್ತಮ ರಸ್ತೆ ನಿರ್ಮಿಸಲಾಗಿದ್ದು, ಗ್ರಾಮದ ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿ ಗ್ರಾಮಸ್ಥರು ಒಗ್ಗೂಡಿ ಗ್ರಾಮದ ಅಭಿವೃದ್ಧಿ ಕಡೆಗೆ ಗಮನ ಕೊಟ್ಟಿರುವುದು ಶ್ಲಾಘನೀಯ. ಗ್ರಾಮಸ್ಥರು ಉತ್ತಮ ದೇವಾಲಯ ನಿರ್ಮಾಣ ಮಾಡಿದ್ದಾರೆ. ಇದೇ ರೀತಿ ಗ್ರಾಮದಲ್ಲಿ ಹಬ್ಬದ ವಾತಾವರಣ ಇರಲಿ ಎಂದು ಹಾರೈಸಿ ಶುಭಕೋರಿದರು.

ಇದಕ್ಕೂ ಮುನ್ನಾ ಸುತ್ತೂರು ಸ್ವಾಮೀಜಿಗಳು ಪುರ ಪ್ರವೇಶ ಮಾಡುತ್ತಿದ್ದಂತೆ ಮುತ್ತೈದೆಯರು ಪೂರ್ಣಕುಂಭ ಕಳಸದೊಂದಿಗೆ ಸ್ವಾಗತಿಸಿ ಬರಮಾಡಿಕೊಂಡರು. ಕಾರ್ಯಕ್ರಮದಲ್ಲಿ 2 ಸಾವಿರ ಭಕ್ತರಿಗೆ ಅನ್ನ ಸಂತರ್ಪಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಸೋಮನಾಥ ಸ್ವಾಮೀಜಿ, ಗಾವಡಗೆರೆ ಗುರುಲಿಂಗ ಜಂಗಮಠದ ಪೀಠಾಧ್ಯಕ್ಷ ಶ್ರೀನಟರಾಜ ಸ್ವಾಮಿಗಳು, ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್, ಗ್ರಾಪಂ ಅಧ್ಯಕ್ಷೆ ಆಶಾ, ಸದಸ್ಯ ದಿಲೀಪ್, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ.ರಮೇಶ್, ಶ್ರೀಬಸವೇಶ್ವರ ದೇವಾಲಯದ ಟ್ರಸ್ಟ್ ಅಧ್ಯಕ್ಷ ಶಂಭು, ಉದ್ಯಮಿ ಉಮಾಶಂಕರ್ ತಾಪಂ ಮಾಜಿ ಸದಸ್ಯೆ ಶೋಭಾ, ಗ್ರಾಪಂ ಮಾಜಿ ಅಧ್ಯಕ್ಷ ಯೋಗೇಶ್ ಸೇರಿದಂತೆ ಇನ್ನಿತರರಿದ್ದರು.


ಯುವ ಜನತಾದಳದ ರಾಜ್ಯಾಧ್ಯಕ್ಷರಾದ ಸನ್ಮಾನ್ಯ ಶ್ರೀ ನಿಖಿಲ್‌ಕುಮಾರಸ್ವಾಮಿ
ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರು ಹಾಗೂ ಎಂ.ಸಿ.ಡಿ.ಸಿ.ಸಿ. ಬ್ಯಾಂಕ್‌ನ
ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಜಿ.ಡಿ.ಹರೀಶ್‌ಗೌಡ
ಎ.ಪಿ.ಎಂ.ಸಿ. ಮಾಜಿ ಸದಸ್ಯರು ಮತ್ತು ಶ್ರೀನಿಧಿ ಸ್ಟೀಲ್ಸ್ ಮತ್ತು ಶ್ರೀನಿಧಿ ಡೆವಲಪರ್ಸ್
ಮಾಲೀಕರಾದ ಕೋಟೆಹುಂಡಿ ಶ್ರೀ ಮಹದೇವ್
ಇವರುಗಳಿಗೆ
ಜನ್ಮದಿನದ ಶುಭಾಶಯಗಳು
ಶುಭಕೋರುವವರು : ರವಿ ಮತ್ತು ಕೋಟೆಹುಂಡಿ ಮಹದೇವು ಸ್ನೇಹ ಬಳಗ
93437 00416


ಯುವ ಜನತಾದಳದ ರಾಜ್ಯಾಧ್ಯಕ್ಷರಾದ ಸನ್ಮಾನ್ಯ ಶ್ರೀ ನಿಖಿಲ್‌ಕುಮಾರಸ್ವಾಮಿ
ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರು ಹಾಗೂ ಎಂ.ಸಿ.ಡಿ.ಸಿ.ಸಿ. ಬ್ಯಾಂಕ್‌ನ
ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಜಿ.ಡಿ.ಹರೀಶ್‌ಗೌಡ
ಎ.ಪಿ.ಎಂ.ಸಿ. ಮಾಜಿ ಸದಸ್ಯರು ಮತ್ತು ಶ್ರೀನಿಧಿ ಸ್ಟೀಲ್ಸ್ ಮತ್ತು ಶ್ರೀನಿಧಿ ಡೆವಲಪರ್ಸ್
ಮಾಲೀಕರಾದ ಕೋಟೆಹುಂಡಿ ಶ್ರೀ ಮಹದೇವ್
ಇವರುಗಳಿಗೆ
ಜನ್ಮದಿನದ ಶುಭಾಶಯಗಳು
ಶುಭಕೋರುವವರು : ಧನಗಹಳ್ಳಿ
ಗ್ರಾಮ ಪಂಚಾಯಿತಿ ಸದಸ್ಯರು
ಕೋಟೆಹುಂಡಿ
ಮಹದೇವು ಸ್ನೇಹ ಬಳಗ
93437 00416